# 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಗ್ರಾಮ ಪಂಚಾಯತಿಗಳ ವಾರ್ಷಿಕ ಕ್ರೋಢಿಕೃತ ಲೆಕ್ಕಪರಿಶೋಧನಾ ವರದಿ.

**ಪ್ರಸ್ತಾವನೆ:-**

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಕಲಂ 246(1) ಪ್ರಕಾರ, ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಇಲ್ಲವೇ ಇವರು ಅಧಿಕಾರ ನೀಡುವಂತಹ ಅಧಿಕಾರಿಗಳು ಕೈಗೊಳ್ಳಲು ಅಧಿಕಾರವಿರುತ್ತದೆ.

ಸರ್ಕಾರದ ಅಧಿಸೂಚನೆ ದಿನಾಂಕ: 16.07.2011 ರನ್ವಯ ಜಾರಿಗೆ ಬಂದಿರುವ ಅಧಿನಿಯಮದ ಕಲಂ 246(12) ರಂತೆ ಈ ಇಲಾಖೆಯಿಂದ ಕೈಗೊಂಡ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳ ಕ್ರೋಢಿಕೃತ ವರದಿಯನ್ನು ಸಿದ್ಧಪಡಿಸಲಾಗಿದೆ. ವರದಿಯನ್ನು ಒಟ್ಟು ನಾಲ್ಕು ಅಧ್ಯಾಯಗಳನ್ನಾಗಿ ವಿಂಗಡಿಸಿ ಕ್ರಮವಾಗಿ ಗ್ರಾಮ ಪಂಚಾಯತಿಗಳ ಸ್ಥೂಲನೋಟ, ಗ್ರಾಮ ಪಂಚಾಯತಿಗಳ ಹಣಕಾಸಿನ ಸ್ಥಿತಿ, ಲೆಕ್ಕಪರಿಶೋಧನೆಯ ಫಲಿತಾಂಶಗಳು ಮತ್ತು ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ಕಂಡು ಬಂದ ಅಂಶಗಳನ್ನು ಸಂಪುಟ–1ರಲ್ಲಿ ವಿವರಣೆಯೊಂದಿಗೆ ಜಿಲ್ಲಾವಾರು ಮಾಹಿತಿಯನ್ನು ಹಾಗೂ ಸಂಪುಟ–2 ರಲ್ಲಿ ಗ್ರಾಮ ಪಂಚಾಯಿತಿವಾರು ಮಾಹಿತಿಯನ್ನು ನೀಡಲಾಗಿದೆ.

## ಅಧ್ಯಾಯ 1
## ಗ್ರಾಮ ಪಂಚಾಯತಿಗಳ ಸ್ಥೂಲ ನೋಟ

### 1.1 ಹಿನ್ನೆಲೆ:

ಭಾರತ ಸಂವಿಧಾನದ 73ನೇ ತಿದ್ದುಪಡಿಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ನೀಡಿದೆ. ಒಂದೇ ಸಮನಾದ ರಚನೆ, ನಿಯತಕಾಲಿಕ ಚುನಾವಣೆಗಳು, ಹಣಕಾಸು ಆಯೋಗಗಳ ಶಿಫಾರಸ್ಸಿರನ್ವಯ ಹಾಗೂ ಸ್ಥಳೀಯ ತೆರಿಗೆಗಳನ್ನು ವಿಧಿಸುವ ಮೂಲಕ ಈ ಸಂಸ್ಥೆಗಳಿಗೆ ನಿಯಮಿತವಾದ ಹಣಕಾಸಿನ ಹರಿವನ್ನು ಸ್ಥಾಪಿಸಿದೆ. ಇದಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ಈ ಕೆಲಸ ಕಾರ್ಯಗಳಿಗೆ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತಹ ಅಧಿಕಾರ, ಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ನೀಡಿರುತ್ತದೆ. ಸಂವಿಧಾನದ 11ನೇ ಪರಿಶಿಷ್ಠದಲ್ಲಿ ತಿಳಿಸಿರುವಂತೆ, ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮ ಪಂಚಾಯತಿಗಳು, ಲಭ್ಯವಾಗುವ ಸ್ಥಳೀಯ ಸಂಪನ್ಮೂಲಗಳು ಮತ್ತು ಸರ್ಕಾರದ ಅನುದಾನಗಳನ್ನು ಅವಲಂಬಿಸಿದ ಯೋಜನೆಗಳನ್ನು ಸಿದ್ಧಪಡಿಸಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.


ಸಂವಿಧಾನದ 73ನೇ ತಿದ್ದುಪಡಿಗೆ ಅನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಗ್ರಾಮಗಳ ಮಟ್ಟದಲ್ಲಿ ಪಂಚಾಯತ್ ರಾಜ್ ಸಾಂಸ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲು ಅನುವಾಗುವಂತೆ 1993ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಜಾರಿಗೊಳಿಸಿ, ಗ್ರಾಮ ಪಂಚಾಯತಿಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ನಿಯಮಗಳನ್ನು ರಚಿಸಲಾಗಿರುತ್ತದೆ.

ಈ ವರದಿಯಲ್ಲಿ ನಮೂದಿತವಾಗಿರುವ ಪ್ರಕರಣಗಳು ರಾಜ್ಯದ ಗ್ರಾಮ ಪಂಚಾಯತಿಗಳ 2016-17ರ ಆರ್ಥಿಕ ವರ್ಷದ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಗಮನಿಸಿದಂತಹ ಅಂಶಗಳಾಗಿರುತ್ತವೆ.

## 1.2 ಗ್ರಾಮ ಪಂಚಾಯತಿಗಳ ಸಾಂಸ್ಥಿಕ ರಚನೆ.

ರಾಜ್ಯದಲ್ಲಿ ದಿ:31-03-2017ರಂತ್ಯಕ್ಕೆ ಒಟ್ಟು 6033 ಗ್ರಾಮ ಪಂಚಾಯತಿಗಳು ಸ್ಥಾಪಿತವಾಗಿದ್ದು, 6000 ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತಿಗಳನ್ನು **ಗ್ರೇಡ್-1** ಗ್ರಾಮ ಪಂಚಾಯತಿಗಳು ಹಾಗೂ 6000 ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತಿಗಳನ್ನು **ಗ್ರೇಡ್-2** ಗ್ರಾಮ ಪಂಚಾಯತಿಗಳೆಂದು ವರ್ಗೀಕರಿಸಲಾಗಿರುತ್ತದೆ.

ಗ್ರಾಮ ಪಂಚಾಯತಿಯ ಸಾಂಸ್ಥಿಕ ರಚನೆ ಈ ಕೆಳಗಿನಂತಿದೆ.




## 1.3 ಗ್ರಾಮ ಪಂಚಾಯತಿಗಳ ಸ್ಥಾಯಿ ಸಮಿತಿಗಳ ರಚನೆ.

| **ಪಂಚಾಯತ್ ರಾಜ್ ಸಂಸ್ಥೆಯ ಸ್ಥರ** | **ಸ್ಥಾಯಿ ಸಮಿತಿಗಳು** |
|---|---|
| **ಗ್ರಾಮ ಪಂಚಾಯತಿ** | **1. ಹಣಕಾಸು, ಲೆಕ್ಕಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ** |
| | **2. ಸಾಮಾನ್ಯ ಸ್ಥಾಯಿ ಸಮಿತಿ** |
| | **3. ಸಾಮಾಜಿಕ ನ್ಯಾಯ ಸಮಿತಿ** |
| | **4. ಸೌಕರ್ಯಗಳ ಸಮಿತಿ** |
| | **5. ಉತ್ಪಾದನಾ ಸಮಿತಿ** |
| | **(ಕಲಂ 61-1)** |

**ಆಧಾರ: ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993.**

## 1.4 ಗ್ರಾಮ ಪಂಚಾಯತಿಗಳ ಆಂತರಿಕ ಹೊಣೆಗಾರಿಕೆಯ ಸ್ಥೂಲ ಪರಿಚಯ.

| ಪ್ರಾಧಿಕಾರ | ಹೊಣೆಗಾರಿಕೆ |
|---|---|
| ಅಧ್ಯಕ್ಷರು / ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು | 1. ಎಲ್ಲಾ ಹಂತಗಳಲ್ಲಿ ಪಾರದರ್ಶಕತೆಯನ್ನು ಅಳವಡಿಸುವುದು. |
| | 2. ವಾಸ್ತವಿಕ ಹಾಗೂ ಗುರಿಯುಳ್ಳ ಕಾರ್ಯಕ್ರಮ ರೂಪಿಸುವುದು. |
| | 3. ಮೂಲಭೂತ ಸೌಕರ್ಯ ಒದಗಿಸುವುದು. |
| | 4. ಭೌತಿಕ ಆಸ್ತಿ ನಿರ್ವಹಣೆ. |
| | 5. ರಾಜಸ್ವ ಕೊರತೆ ನೀಗಿಸುವುದು. |
| ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು / ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿಗಳು | 1. ಆಯವ್ಯಯ ಮತ್ತು ಕ್ರಿಯಾ ಯೋಜನೆ ಅನುಮೋದನೆ ಮತ್ತು ಅನುಷ್ಠಾನದ ಬಗ್ಗೆ ಉಸ್ತುವಾರಿ. |
| | 2. ಎಲ್ಲಾ ಕಾರ್ಯಕ್ರಮಗಳ ಸಮಗ್ರ ಮೇಲ್ವಿಚಾರಣೆ ಮತ್ತು ನಿಯಂತ್ರಣ. |

## ಅಧ್ಯಾಯ–2

## ಗ್ರಾಮ ಪಂಚಾಯತಿಗಳ ಹಣಕಾಸಿನ ಪರಿಸ್ಥಿತಿ

### 2.1 ಗ್ರಾಮ ಪಂಚಾಯತಿಗಳಿಗೆ ಹಣಕಾಸಿನ ಹರಿವು.

ಗ್ರಾಮ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ಸಾಮಾನ್ಯ ಆಡಳಿತ ಮತ್ತು ಅಭಿವೃದ್ಧಿ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಶಾಸನಬದ್ಧ ಅನುದಾನ, ಅಭಿವೃದ್ಧಿ ಅನುದಾನ, 14ನೇ ಹಣಕಾಸು ಆಯೋಗದ ಅನುದಾನ, ನಿರ್ಮಲ ಕರ್ನಾಟಕ, ಇಂದಿರಾ ಆವಾಸ್, ಕಿರುನೀರು ಸರಬರಾಜು, ಆಶ್ರಯ ಯೋಜನೆ, ಗ್ರಾಮ ಸ್ವರಾಜ್ ಯೋಜನೆ ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳ ಅನುದಾನವನ್ನು ನಿಗದಿಪಡಿಸುವ ಮೂಲಕ ಸಾಕ್ಷರತೆ, ಜನಸಂಖ್ಯೆ, ಆರೋಗ್ಯ, ವೈದ್ಯಕೀಯ, ಸಾಮಾಜಿಕ ಕಾರ್ಯಕ್ರಮಗಳು ಪ್ರಕೃತಿ ವಿಕೋಪದ ಸವಾಲುಗಳು, ತುರ್ತು ಕಾಮಗಾರಿ ನಿರ್ವಹಣೆ, ಕುಡಿಯುವ ನೀರಿನ ವ್ಯವಸ್ಥೆ, ನೈರ್ಮಲ್ಯೀಕರಣ ಮುಂತಾದ ಅಗತ್ಯಗಳನ್ನು ಪರಿಗಣಿಸುವುದರ ಜೊತೆಗೆ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಆಧಾರಿಸಿ ಅನುದಾನವನ್ನು ಬಿಡುಗಡೆ ಮಾಡುತ್ತದೆ.

ರಾಜ್ಯ ಸರ್ಕಾರವು ಒಟ್ಟಾರೆ ಅನುದಾನಗಳನ್ನು ಪ್ರತಿ ತ್ರೈಮಾಸಿಕ ಹಾಗೂ ವರ್ಷಾಂತ್ಯದಲ್ಲಿ ಬಿಡುಗಡೆ ಮಾಡುತ್ತದೆ. ಅನುದಾನವನ್ನು ತಾಲ್ಲೂಕು ಪಂಚಾಯತಿಯ ಮೂಲಕ ಗ್ರಾಮಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಮಹಾತ್ಮಗಾಂಧಿ ರಾಷ್ಟೀಯ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ದಿನಗೂಲಿ ಮತ್ತು ಸಾಮಗ್ರಿಗಳ ಖರೀದಿಗೆ ಆಯಾ ಗ್ರಾಮಪಂಚಾಯತಿಗಳಿಗೆ, ರಾಜ್ಯ ಸರ್ಕಾರದಿಂದ ಕೇಂದ್ರೀಕೃತ ಖಾತೆಯಿಂದ ಒದಗಿಸಲಾಗುತ್ತಿದೆ.

ಸರ್ಕಾರದಿಂದ ಬಿಡುಗಡೆಯಾದ ಅನುದಾನಗಳಲ್ಲದೆ, ಗ್ರಾಮ ಪಂಚಾಯತಿ ವಸೂಲಿಸಿದ/ ಸ್ವೀಕರಿಸಿದ ತೆರಿಗೆ/ದರ, ಕೊಡುಗೆ/ಕಾಣಿಕೆ ರೂಪದಲ್ಲಿ ಸ್ವೀಕರಿಸಿದ ಮೊತ್ತಗಳು, ಗ್ರಾಮ ಪಂಚಾಯತಿಗಳ ಮಾಲೀಕತ್ವದಲ್ಲಿನ ಯಾವುದೇ ಸ್ಥಿರ/ಚರ ಸ್ವತ್ತಿನ ಬಾಡಿಗೆ, ಮಾರಾಟದಿಂದ ಬರುವ ಉತ್ಪತ್ತಿಗಳು (ಆದಾಯಗಳು) ಹಾಗೂ ಆಯಾ ಕಾಲದ ಉತ್ಪತ್ತಿಗಳ ಮಾರಾಟದಿಂದ ಬರುವ ಆದಾಯಗಳು, ಗ್ರಾಮಪಂಚಾಯತಿಯ ನಿಧಿಯ ಭಾಗವಾಗಿರುತ್ತದೆ.

### 2.2 ಕಳೆದ 3 ವರ್ಷಗಳಲ್ಲಿ ಲೆಕ್ಕಪರಿಶೋಧನೆ ಕೈಗೊಂಡ ಗ್ರಾಮ ಪಂಚಾಯತಿಗಳ ವಿವರಗಳು.

ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ 2016–2017 ಹಾಗೂ ಹಿಂದಿನ 3 ವರ್ಷಗಳ ಅಂತ್ಯಕ್ಕೆ ಲೆಕ್ಕಪರಿಶೋಧನೆ ಕೈಗೊಂಡ ಹಾಗೂ ಕೈಗೊಳ್ಳಲು ಸಾಧ್ಯವಾಗದಿರುವ ಗ್ರಾಮಪಂಚಾಯತಿಗಳ ವಿವರಗಳು ಈ ಕೆಳಕಂಡಂತಿವೆ.

| ವರ್ಷ | ಗ್ರಾಮ ಪಂಚಾಯತಿಗಳ ಸಂಖ್ಯೆ | ಲೆಕ್ಕ ಪರಿಶೋಧನೆ ಮುಕ್ತಾಯ | ಲೆಕ್ಕ ಪರಿಶೋಧನೆಗೆ ಬಾಕಿ | ಶೇಕಡವಾರು ಪ್ರಗತಿ |
|---|---|---|---|---|
| **2014–15** | **5634** | **5078** | **556** | **90.13%** |
| **2015–16** | **5996** | **5255** | **741** | **87.64%** |
| **2016–17** | **6033** | **5461** | **572** | **90.52%** |

ರಾಜ್ಯದಲ್ಲಿ 2016–17ನೇ ಸಾಲಿನಂತ್ಯಕ್ಕೆ ಅಸ್ತಿತ್ವದಲ್ಲಿದ್ದ 6033 ಗ್ರಾಮಪಂಚಾಯತಿಗಳಲ್ಲಿ ದಿನಾಂಕ:31.03.2018ರ ಅಂತ್ಯಕ್ಕೆ 4666 ಗ್ರಾಮ ಪಂಚಾಯತಿಗಳ 2016–17ನೇ ಸಾಲಿನ ಲೆಕ್ಕ ಪರಿಶೋಧನೆ ಪೂರ್ಣಗೊಂಡ ನಂತರ ಬಾಕಿ ಉಳಿದಿದ್ದ 1367 ಗ್ರಾಮ ಪಂಚಾಯತಿಗಳಲ್ಲಿ 2018–19ನೇ ಸಾಲಿನಲ್ಲಿ (ದಿನಾಂಕ:31.03.2019ರವರೆಗೆ) 795 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆ ಪೂರ್ಣಗೊಳಿಸಿ ಒಟ್ಟು 5461 ಪ್ರಗತಿಯಾಗಿ. ಇನ್ನುಳಿದ 572 ಗ್ರಾಮಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಕೆಳಕಂಡ ಕಾರಣಗಳಿಂದ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

1) ಗ್ರಾಮಪಂಚಾಯತಿಗಳು ದೀರ್ಘ ಕಾಲದಿಂದ ನಿಯಮಾನುಸಾರ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸದೇ ಬಾಕಿ ಉಳಿಸಿಕೊಂಡಿರುವುದು.
2) ಗ್ರಾಮಪಂಚಾಯತಿಗಳು ನಗದು ಪುಸ್ತಕ ಮುಂತಾದ ಲೆಕ್ಕಪುಸ್ತಕಗಳನ್ನು ಬರೆಯದೇ ಇರುವುದು.
3) ಲೆಕ್ಕಪರಿಶೋಧನೆಗೆ ಲೆಕ್ಕಪತ್ರ /ದಾಖಲೆಗಳನ್ನು ಹಾಜರುಪಡಿಸದಿರುವುದು.

2016–17ನೇ ಸಾಲಿನಂತ್ಯಕ್ಕೆ **6033** ಗ್ರಾಮಪಂಚಾಯತಿಗಳ ಲೆಕ್ಕಪರಿಶೋಧನೆ ಕೈಗೊಳ್ಳಬೇಕಾಗಿದ್ದು, ಅವುಗಳಲ್ಲಿ **5461** ಗ್ರಾಮಪಂಚಾಯತಿಗಳ ಲೆಕ್ಕಪರಿಶೋಧನೆ ಪೂರ್ಣಗೊಂಡಿದ್ದು, ಉಳಿದ **572** ಗ್ರಾಮಪಂಚಾಯತಿಗಳ ಲೆಕ್ಕಪರಿಶೋಧನೆ ಬಾಕಿ ಇರುತ್ತದೆ. ಈ ಸಂಬಂಧ ಜಿಲ್ಲಾವಾರು ವಿವರಗಳನ್ನು **ಅನುಬಂಧ–1ರಲ್ಲಿ** ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಕ್ರಮವಾಗಿ **ಅನುಬಂಧ–1ಎ ಅನುಬಂಧ–1ಬಿ ಅನುಬಂಧ–1**ಸಿ ಮತ್ತು **ಅನುಬಂಧ–1ಡಿ** ನಲ್ಲಿ ನೀಡಲಾಗಿದೆ.

## 2.3 ಗ್ರಾಮಪಂಚಾಯತಿಗಳ ಹಣಕಾಸಿನ ಪರಿಸ್ಥಿತಿ.

ಗ್ರಾಮಪಂಚಾಯತಿಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಸಂಪನ್ಮೂಲಗಳ ಆಧಾರವೆಂದರೆ ಕೇಂದ್ರ ಸರ್ಕಾರದ ಅನುದಾನಗಳು, ರಾಜ್ಯ ಸರ್ಕಾರದ ಅನುದಾನಗಳು, ರಾಜ್ಯ ಹಣಕಾಸು ಆಯೋಗದ ಅನುದಾನಗಳಾಗಿರುತ್ತವೆ. ಅಲ್ಲದೆ ಸ್ಥಳೀಯವಾಗಿ ತೆರಿಗೆಗಳು ಮತ್ತು ಇತರೆ ಆರ್ಥಿಕ ಸಂಪನ್ಮೂಲಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬೇಕಾಗಿರುತ್ತದೆ. ಗ್ರಾಮಪಂಚಾಯತಿಗಳು ಈ ಕೆಳಕಂಡಂತೆ ಹಣಕಾಸು ಹರಿವಿನ ವ್ಯವಸ್ಥೆಯನ್ನು ನಿರ್ವಹಿಸಬೇಕಾಗಿರುತ್ತದೆ.

## ಹಣಕಾಸು ಹರಿವಿನ ವ್ಯವಸ್ಥೆ

| ಕ್ರ.ಸ. | ಹಣದ ಸ್ವರೂಪ | ಹಣದ ಮೂಲ | ಹಣದ ವಹಿವಾಟು |
|---|---|---|---|
| 1 | ಸ್ವಂತ ಜಮೆಗಳು | ತೆರಿಗೆದಾರರು ಮತ್ತು ಬಳಕೆದಾರರು | ಬ್ಯಾಂಕ್ |
| 2 | ರಾಜ್ಯ ಹಣಕಾಸು ಆಯೋಗದ ನಿಯೋಜಿಸಿದ ಆದಾಯ. | ರಾಜ್ಯ ಸರ್ಕಾರ | ಖಜಾನೆ/ ಬ್ಯಾಂಕ್ |
| 3 | ಕೇಂದ್ರ ಹಣಕಾಸು ಆಯೋಗ/ ಕೇಂದ್ರ ಪ್ರಾಯೋಜಿತ ಯೋಜನೆಗಳು | ಭಾರತ ಸರ್ಕಾರ | ಬ್ಯಾಂಕ್ |
| 4 | ರಾಜ್ಯ ಯೋಜನೆಗಳು | ರಾಜ್ಯ ಸರ್ಕಾರ | ಖಜಾನೆ |

ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳ 2016–17ರ ಆರ್ಥಿಕ ವರ್ಷದ ಕೈಗೊಂಡ ಲೆಕ್ಕಪರಿಶೋಧನಾ ವರದಿಗಳ ಮಾಹಿತಿಯಂತೆ ಒಟ್ಟಾರೆ ಹಣಕಾಸಿನ ವಹಿವಾಟು ಈ ಕೆಳಕಂಡಂತಿರುತ್ತವೆ.

(ಲಕ್ಷಗಳಲ್ಲಿ)

| ವಿವರಗಳು | 2016–2017 |
|---|---|
| ಲೆಕ್ಕಪರಿಶೋಧನೆಯಾದ ಗ್ರಾಮ ಪಂಚಾಯತಿಗಳ ಸಂಖ್ಯೆ ದಿನಾಂಕ:31.03.2018ರ ಅಂತ್ಯದ ವೆರೆಗಿನ ಪ್ರಗತಿ) | **5461** |
| 2016 ಏಪ್ರಿಲ್ 01 ರಂತೆ ಆರಂಭ ಶಿಲ್ಕು | **113837.40** |
| ವರ್ಷದ ಸ್ವೀಕೃತಿ | **619928.01** |
| ಒಟ್ಟು | **733765.42** |
| ವರ್ಷದ ವೆಚ್ಚ | **569617.95** |
| 2017 ಮಾರ್ಚ 31ರಂತೆ ಆಖೈರು ಶಿಲ್ಕು | **164147.46** |

2016–17ನೇ ಸಾಲಿನ ಜಿಲ್ಲಾವಾರು ಆರ್ಥಿಕ ವಹಿವಾಟಿನ ವಿವರಗಳನ್ನು **ಅನುಬಂಧ–2ರಲ್ಲಿ** ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು **ಅನುಬಂಧ–2(ಎ)** ನಲ್ಲಿ ನೀಡಲಾಗಿದೆ.

### 2.4 ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ ಶಾಸನಬದ್ಧ ಅನುದಾನ/ಸ್ವೀಕೃತಿಯಾದ ರಾಜಸ್ವ

2016–17ನೇ ಸಾಲಿನ ಆಯವ್ಯಯದಲ್ಲಿ ಗ್ರಾಮ ಪಂಚಾಯತಿಗಳಿಗೆ ನೀಡುತ್ತಿರುವ ವಾರ್ಷಿಕ ಶಾಸನಬದ್ಧ ಅನುದಾನವನ್ನು 8000 ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮ ಪಂಚಾಯತಿಗಳಿಗೆ 10.00 ಲಕ್ಷಗಳನ್ನು ನಿಗದಿ ಪಡಿಸಲಾಗಿದೆ. 2016–17ನೇ ಸಾಲಿನಲ್ಲಿ ಹಿಂದಿನ ಸಾಲಿನಂತೆ ಗ್ರಾಮ ಪಂಚಾಯತಿಗೆ ಶಾಸನಬದ್ಧ ಅನುದಾನವಾಗಿ ವಾರ್ಷಿಕ 10.00 ಲಕ್ಷಗಳನ್ನು ಮುಂದುವರಿಸಲಾಗಿದ್ದು, ಈ ಅನುದಾನದಲ್ಲಿ ಶೇಕಡ 60 ರಷ್ಟನ್ನು ಗ್ರಾಮ ಪಂಚಾಯತಿಗಳ ಚಾಲ್ತಿ ತಿಂಗಳುಗಳ ವಿದ್ಯುಚ್ಛಕ್ತಿ ಬಿಲ್ ಪಾವತಿಗಾಗಿ ಮತ್ತು ಶೇಕಡ 40 ರಷ್ಟನ್ನು ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

(ಆಧಾರ:ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2016–17ರ ವಾರ್ಷಿಕ ವರದಿ)

ರಾಜ್ಯದ ಗ್ರಾಮ ಪಂಚಾಯತಿಗಳು ಪಡೆದ ಸರ್ಕಾರದ ಅನುದಾನ ಮತ್ತು ವಿವಿಧ ಮೂಲಗಳಿಂದ ಸ್ವೀಕೃತಗೊಂಡ ಮೊತ್ತದ ಜಿಲ್ಲಾವಾರು ವಿವರಗಳನ್ನು **ಅನುಬಂಧ-3** ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು **ಅನುಬಂಧ-3(ಎ)** ನಲ್ಲಿ ನೀಡಲಾಗಿದೆ. ಈ ವರ್ಷದಲ್ಲಿ ಎಲ್ಲಾ ಯೋಜನೆಗಳಿಗಾಗಿ ಗ್ರಾಮ ಪಂಚಾಯತಿಗಳಿಗೆ ಸ್ವೀಕೃತಿಯಾದ ಒಟ್ಟು ಅನುದಾನ/ ರಾಜಸ್ವ ರೂ.**619928.01** ಲಕ್ಷಗಳಾಗಿದೆ.

## 2.5 ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಭರಿಸಲಾದ ವೆಚ್ಚಗಳ ವಿವರಗಳು.

2016-17ನೇ ಆರ್ಥಿಕ ವರ್ಷಾಂತ್ಯಕ್ಕೆ ಸಂಬಂಧಿಸಿದಂತೆ ಈ ಕ್ರೋಢೀಕೃತ ವರದಿ ತಯಾರಿಕಾ ವೇಳೆಗೆ 5461 ಗ್ರಾಮ ಪಂಚಾಯತಿಗಳ ವೆಚ್ಚಗಳ ದಾಖಲೆಗಳ ಲೆಕ್ಕ ಪರಿಶೋಧನೆಯನ್ನು ಕೈಗೊಂಡು ವರದಿಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ಪೈಕಿ ಗ್ರಾಮ ಪಂಚಾಯತಿಗಳಲ್ಲಿ ಮುಖ್ಯವಾಗಿ ನಿರ್ವಹಿಸಲಾಗಿರುವ ವೆಚ್ಚಗಳೆಂದರೆ, ಸಾಮಾನ್ಯ ಆಡಳಿತ, ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಕಾಮಗಾರಿ, ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮಾಡಿದ ವೆಚ್ಚ ಹಾಗೂ ಸರ್ಕಾರದ ನಿರ್ದಿಷ್ಟ ಯೋಜನೆಗಳಿಗಾಗಿ ಮಾಡಿದ ವೆಚ್ಚವಾಗಿರುತ್ತದೆ. ಈ ವರ್ಷದಲ್ಲಿ ಎಲ್ಲಾ ಯೋಜನೆಗಳಿಗಾಗಿ ಗ್ರಾಮ ಪಂಚಾಯತಿಗಳ ವತಿಯಿಂದ ಭರಿಸಲಾದ ಒಟ್ಟು ವೆಚ್ಚ ರೂ.**569618.95** ಲಕ್ಷಗಳಾಗಿದೆ. ವೆಚ್ಚದ ಜಿಲ್ಲಾವಾರು ವಿವರಗಳನ್ನು **ಅನುಬಂಧ-4** ರಲ್ಲಿ ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು **ಅನುಬಂಧ-4(ಎ)** ನಲ್ಲಿ ನೀಡಲಾಗಿದೆ.

## 2.6 ಗ್ರಾಮ ಪಂಚಾಯತಿಗಳು ತೆರಿಗೆಗಳ ದರ ವಿಧಿಸುವುದು ಮತ್ತು ತೆರಿಗೆಗಳ ಬೇಡಿಕೆ, ವಸೂಲಾತಿ ಹಾಗೂ ಬಾಕಿಯ ವಿವರಗಳು.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 199ರ ಪ್ರಕಾರ ರಾಜ್ಯದ ಗ್ರಾಮ ಪಂಚಾಯತಿಗಳು ಅವುಗಳ ಆದಾಯದ ಮೂಲವಾದ ಆಸ್ತಿ ತೆರಿಗೆ ಮತ್ತು ಇತರೆ ತೆರಿಗೆಗಳನ್ನು ವಿಧಿಸಿ, ವಸೂಲಿ ಮಾಡಬಹುದಾಗಿದೆ. ಆದಾಗ್ಯೂ ಸಹ ಬಹಳಷ್ಟು ಗ್ರಾಮ ಪಂಚಾಯತಿಗಳು ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡಿರುವುದಿಲ್ಲ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 33 ಮತ್ತು 34 ರಂತೆ ಗ್ರಾಮ ಪಂಚಾಯತಿಗಳು ವಿಧಿಸುವ ವಿವಿಧ ತೆರಿಗೆಗಳ ಕುರಿತಂತೆ, ಬೇಡಿಕೆ-ವಸೂಲಾತಿ-ಬಾಕಿ ವಹಿಗಳನ್ನು ನಿರ್ವಹಿಸಬೇಕಾಗಿರುತ್ತದೆ. ಆದರೆ, ಬಹುತೇಕ ಗ್ರಾಮ ಪಂಚಾಯತಿಗಳು ಸದರಿ ವಹಿಗಳನ್ನು ನಿರ್ವಹಿಸಿರುವುದಿಲ್ಲ. ಈ ರೀತಿ ಬೇಡಿಕೆ-ವಸೂಲಾತಿ-ಬಾಕಿ ವಹಿಗಳನ್ನು ನಿರ್ವಹಿಸದಿದ್ದಲ್ಲಿ ಮತ್ತು ಸಂಸ್ಥೆವಾರು ಬಾಕಿ ಪಟ್ಟಿಯನ್ನು ತಯಾರಿಸದಿದ್ದಲ್ಲಿ, ಗ್ರಾಮ ಪಂಚಾಯತಿಗಳಿಗೆ ಬರುವ ಆದಾಯವು ಕೈ ತಪ್ಪುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್

ಜಮಾಬಂದಿ ನಿರ್ವಹಣೆ) ನಿಯಮಗಳು 2004 ನ್ನು ರಚಿಸಿದ್ದು, ಗ್ರಾಮ ಪಂಚಾಯತಿಗಳ ಲೆಕ್ಕ ಪುಸ್ತಕಗಳು, ರಿಜಿಸ್ಟರ್‌ಗಳು ಮತ್ತು ದಾಖಲೆಗಳ ಸಮರ್ಪಕ ನಿರ್ವಹಣೆ ಹಾಗೂ ಆಸ್ತಿ ತೆರಿಗೆ, ಫೀಜುಗಳು ಮತ್ತು ನೀರಿನ ದರಗಳ ಲೆವಿ ಮತ್ತು ಸಂಗ್ರಹಗಳನ್ನು ಪರಿಶೀಲಿಸುವುದು ಪಂಚಾಯತ್ ಜಮಾಬಂದಿ ನಿರ್ವಾಹಣಾಧಿಕಾರಿಯ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಗ್ರಾಮ ಪಂಚಾಯತಿಗಳ ಆಡಳಿತ ವರ್ಗವು ಬರಬಹುದಾದ ಆದಾಯವು ಕೈ ತಪ್ಪುವುದನ್ನು ತಡೆಗಟ್ಟಲು ಬೇಡಿಕೆ, ವಸೂಲಿ ಹಾಗೂ ಬಾಕಿಯ ವಿವರಗಳನ್ನು ನಿರ್ವಹಿಸಿ, ತೆರಿಗೆಗಳನ್ನು ವಸೂಲಿ ಮಾಡಿ, ಗ್ರಾಮ ಪಂಚಾಯತಿಗಳ ಆದಾಯವನ್ನು ವೃದ್ಧಿಸಿಕೊಳ್ಳುವಂತೆ ಹಾಗೂ ತೆರಿಗೆ ಪಾವತಿಯಿಂದ ನುಣುಚಿಕೊಳ್ಳುವ ಪ್ರಕರಣಗಳನ್ನು ತಡೆಗಟ್ಟುವಂತೆ ಲೆಕ್ಕಪರಿಶೋಧನೆಯಲ್ಲಿ ಸಲಹೆ ನೀಡಿದೆ. ಗ್ರಾಮ ಪಂಚಾಯತಿಗಳ ಆಸ್ತಿ ತೆರಿಗೆ, ನೀರಿನ ತೆರಿಗೆ, ಬಾಡಿಗೆ ಹರಾಜು ಇತ್ಯಾದಿಗಳ ಕುರಿತಂತೆ 2016–17ನೇ ಸಾಲಿನ ಪ್ರಾರಂಭದಲ್ಲಿ ರೂ.**82424.71**ಲಕ್ಷ ಪ್ರಾರಂಭ ಶಿಲ್ಕು ಇದ್ದು ವರದಿ ಸಾಲಿನ ಬೇಡಿಕೆ ರೂ.**52803.68** ಲಕ್ಷಗಳಾಗಿದ್ದು ಒಟ್ಟು ರೂ.**135228.39** ಲಕ್ಷಗಳ ಮೊತ್ತ ಲಭ್ಯವಾಗಿರುತ್ತದೆ. ಇದರಲ್ಲಿ **ರೂ.39206.46** ಲಕ್ಷ ವಸೂಲಿಯಾಗಿ, ವರದಿ ಸಾಲಿನಂತ್ಯಕ್ಕೆ ರೂ.**96021.93 ಲ**ಕ್ಷ ಬಾಕಿ ಉಳಿದಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ–7** ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು **ಅನುಬಂಧ–7(ಎ)** ನಲ್ಲಿ ನೀಡಲಾಗಿದೆ.

## 2.7 ಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸುವ ಬಗ್ಗೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 108ರ ಪ್ರಕಾರ ಗ್ರಾಮಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು/ ಕಾರ್ಯದರ್ಶಿಯು ಪ್ರತಿ ತಿಂಗಳ ಸ್ವೀಕೃತಿ ಮತ್ತು ಪಾವತಿಗಳ ವಿವರಣಾ ಪಟ್ಟಿಯನ್ನು ನಮೂನೆ–53ರಲ್ಲಿ ಹಾಗೂ ಪ್ರಾಯೋಗಿಕ ಸಮತೋಲನಾ ಪಟ್ಟಿಯನ್ನು (Trial Balance) ನಮೂನೆ–54ರಲ್ಲಿ ಸಿದ್ಧಪಡಿಸಿ ಮುಂದಿನ ತಿಂಗಳಿನ 20 ನೇ ದಿನಾಂಕದೊಳಗಾಗಿ ಗ್ರಾಮಪಂಚಾಯತಿಯ ಮಾಸಿಕ ಸಭೆಯಲ್ಲಿ ಪರಿಶೀಲನೆಗೆ ಮಂಡಿಸ ಬೇಕಾಗಿರುತ್ತದೆ ಹಾಗೂ ಅನುಮೋದಿತ ಪ್ರತಿಯನ್ನು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರುರವರಿಗೆ ಸಲ್ಲಿಸಬೇಕಾಗಿರುತ್ತದೆ. ಗ್ರಾಮ ಪಂಚಾಯತಿಯ ಸಂಪನ್ಮೂಲ ಸಂಗ್ರಹಣೆ, ಅಭಿವೃದ್ಧಿ ಕಾರ್ಯಗಳ ವೆಚ್ಚದ ಪ್ರಗತಿ ಹಾಗೂ ವಿವರಣಾ ಪಟ್ಟಿಯಲ್ಲಿನ ಲೋಪದೋಷಗಳ ಬಗ್ಗೆ ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರುರವರು ಪರಿಶೀಲಿಸಿ ಸಂಬಂಧಪಟ್ಟ ಗ್ರಾಮಪಂಚಾಯತಿಗೆ ತಿಳಿಸಬೇಕಾಗಿರುತ್ತದೆ.

ಆದರೆ ರಾಜ್ಯದ **6033** ಗ್ರಾಮಪಂಚಾಯತಿಗಳ ಪೈಕಿ 2016–17ನೇ ಆರ್ಥಿಕ ವರ್ಷದಲ್ಲಿ ಲೆಕ್ಕಪರಿಶೋಧನೆ ಪೂರ್ಣಗೊಂಡ **5461** ಗ್ರಾಮಪಂಚಾಯತಿಗಳ ಲೆಕ್ಕಪರಿಶೋಧನೆಗಳಲ್ಲಿ, ಗ್ರಾಮಪಂಚಾಯತಿಗಳಿಂದ ಮಾಸಿಕ ಲೆಕ್ಕಪತ್ರ ನಿಗದಿತ ಅವಧಿಯಲ್ಲಿ ಸಲ್ಲಿಕೆಯಾಗದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ್ದು, ಇದರಿಂದ ಲೆಕ್ಕಪರಿಶೀಲನೆ ಕಾರ್ಯ ವಿಳಂಬವಾಗುತ್ತಿದೆ. ಈ ಬಗ್ಗೆ ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಲಾಗಿದ್ದರೂ ಮಾಸಿಕ ಲೆಕ್ಕಪತ್ರಗಳನ್ನು ನಿಯಮಿತವಾಗಿ ನಿಗದಿತ ಅವಧಿಯಲ್ಲಿ ಸಲ್ಲಿಸದಿರುವ ಪ್ರವೃತ್ತಿ ಮುಂದುವರೆದಿದೆ.

ಅದೇ ರೀತಿ ಸೆಪ್ಟೆಂಬರ್ ಅಂತ್ಯಕ್ಕೆ ನಮೂನೆ 53 ಮತ್ತು 54 ರಲ್ಲಿ ಅರ್ಧ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ದಪಡಿಸಿ ಮುಂದಿನ ಮಾಹೆಯ 20ನೇ ತಾರೀಖಿನೊಳಗೆ ಸಲ್ಲಿಸಬೇಕಾಗಿದ್ದು, ಅರ್ಧವಾರ್ಷಿಕ ಲೆಕ್ಕಪತ್ರಗಳನ್ನು ಸಂಬಂಧಿಸಿದ ಗ್ರಾಮಪಂಚಾಯತಿಗಳು ನಿಗದಿತ ಸಮಯದಲ್ಲಿ ಸಿದ್ದಪಡಿಸಿ ಸಲ್ಲಿಸದಿರುವುದು ಸಹ ಕಂಡು ಬಂದಿದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 109ರ ಪ್ರಕಾರ ವಾರ್ಷಿಕ ಲೆಕ್ಕಪತ್ರಗಳಾದ ವಿತ್ತ ನಿರೂಪಣಾ ಪಟ್ಟಿಗಳನ್ನು ನಮೂನೆ 53, 55 ಮತ್ತು 56 ರಲ್ಲಿ ಸಿದ್ದಪಡಿಸಿ, ಜೂನ್ 30ರ ತಾರೀಖಿನ ಒಳಗಾಗಿ ಗ್ರಾಮ ಪಂಚಾಯತಿಯ ಅಂಗೀಕಾರ ಪಡೆದು, ಲೆಕ್ಕ ಪರಿಶೋಧನಾ ವರ್ತುಲಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ ಗ್ರಾಮಪಂಚಾಯತಿಗಳು ಜೂನ್ 30ರ ಒಳಗಾಗಿ ವಾರ್ಷಿಕ ಲೆಕ್ಕಪತ್ರಗಳನ್ನು ಸಂಬಂಧಿಸಿದ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಕ್ಕೆ ಸಲ್ಲಿಸುತ್ತಿರುವುದಿಲ್ಲ. ಈ ಅಂಶವನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳುರವರ ಗಮನಕ್ಕೆ ಸಹ ಪತ್ರ ಮುಖೇನ ಮಾಹಿತಿಯನ್ನು ತರಲಾಗಿರುತ್ತದೆ. ವಿತ್ತ ನಿರೂಪಣಾ ಪಟ್ಟಿಗಳನ್ನು ನಿಗದಿತ ಸಮಯದ ಒಳಗೆ ಸಲ್ಲಿಸದಿರುವುದರಿಂದ ಗ್ರಾಮಪಂಚಾಯಿತಿಗಳ ಲೆಕ್ಕಪರಿಶೋಧನೆ ಕಾರ್ಯಕ್ರಮ ಹಮ್ಮಿಕೊಳ್ಳಲು ವ್ಯತ್ಯಯವಾಗುತ್ತಿದೆ.

### 2.8 ಗ್ರಾಮ ಪಂಚಾಯತಿಗಳಲ್ಲಿ ಜೋಡಿ ದಾಖಲೆ ಲೆಕ್ಕ ಪದ್ದತಿಯನ್ನು ನಿರ್ವಹಿಸಿರುವುದಿಲ್ಲ.

ಕರ್ನಾಟಕ ಗ್ರಾಮ ಸ್ವರಾಜ ಮತ್ತು ಪಂಚಾಯತ್ ರಾಜ್‌ಅಧಿನಿಯಮ 1993 ರ243ನೇ ಪ್ರಕರಣದ ಮೇರೆಗೆ ಮತ್ತು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆಗಳ ಅಧಿನಿಯಮ, 2003 ರ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 101 ರಂತೆ ಮೇರೆಗೆ ಗ್ರಾಮ ಪಂಚಾಯತಿಗಳಲ್ಲಿ ಸಂಚಯನ ಅಥವಾ **ಜೋಡಿ ದಾಖಲೆ ಲೆಕ್ಕಪತ್ರ ಪದ್ಧತಿ ಜಾರಿಗೊಳಿಸಲಾಗಿದೆ**. ಈ ನಿಯಮದ ಮೇರೆಗೆ ಗ್ರಾಮಪಂಚಾಯತಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಏಕದಾಖಲೆ ಲೆಕ್ಕ ಪದ್ಧತಿಯ (Single Entry System) ಬದಲಾಗಿ ಜೋಡಿದಾಖಲೆ ಲೆಕ್ಕ ಪದ್ದತಿಯ (Double

Entry System) ಆಧಾರದ ಮೇಲೆ ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾಗಿರುತ್ತದೆ. ಗ್ರಾಮ ಪಂಚಾಯತಿಗಳು ನಗದು ಪುಸ್ತಕ, ಜರ್ನಲ್ ಪುಸ್ತಕ ಮತ್ತು ಸಾಮಾನ್ಯ ಲೆಡ್ಜರ್‌ಗಳನ್ನು ನಿರ್ವಹಿಸಬೇಕಾಗಿರುತ್ತದೆ. ಗ್ರಾಮಪಂಚಾಯತಿಗಳಲ್ಲಿ 2016–17ನೇ ಸಾಲಿನ ಲೆಕ್ಕಪತ್ರಗಳನ್ನು ಜೋಡಿ ದಾಖಲೆ ಲೆಕ್ಕಪದ್ದತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸದಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಗಮನಿಸಿದ್ದು, 2016–17ನೇ ಸಾಲಿನಲ್ಲಿ ಅಸ್ತಿತ್ವದಲ್ಲಿದ್ದ 6033 ಗ್ರಾಮಪಂಚಾಯಿತಿಗಳ ಪೈಕಿ, ಲೆಕ್ಕಪರಿಶೋಧನೆ ಕೈಗೊಂಡ 5461 ರಲ್ಲಿ 2475 ಗ್ರಾಮ ಪಂಚಾಯತಿಗಳಲ್ಲಿ ಈ ಪದ್ಧತಿಯನ್ನು ಇನ್ನೂ ಅಳವಡಿಸದೇ ಇರುವುದು ಕಂಡು ಬಂದಿದೆ. ಜೋಡಿ ದಾಖಲೆ ಲೆಕ್ಕ ಪದ್ಧತಿಯನ್ನು ನಿರ್ವಹಿಸದಿರುವ ಗ್ರಾಮಪಂಚಾಯತಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ–8** ರಲ್ಲಿ ಹಾಗೂ ಗ್ರಾಮಪಂಚಾಯತಿವಾರು ವಿವರಗಳನ್ನು **ಅನುಬಂಧ–8(ಎ)** ರಲ್ಲಿ ನೀಡಲಾಗಿದೆ.

# ಅಧ್ಯಾಯ 3

## ಲೆಕ್ಕಪರಿಶೋಧನೆಯ ಫಲಿತಾಂಶಗಳು

### 3.1 ಗ್ರಾಮ ಪಂಚಾಯತಿಗಳಲ್ಲಿ 682.29ಲಕ್ಷಗಳ ರಾಜಸ್ವ ಸ್ವೀಕೃತಿಯನ್ನು ಪಂಚಾಯತಿ ನಿಧಿಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಳ್ಳಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 25ರ ಪ್ರಕಾರ ದಿನವಹಿ ವಸೂಲಿ ಮಾಡಿದ ಸ್ವೀಕೃತಿಯ ಮೊತ್ತವನ್ನು ದಿನವಹಿ ವಸೂಲಾತಿ ಪುಸ್ತಕದಲ್ಲಿ ನಮೂದಿಸಿಕೊಂಡು, ನಮೂದುಗಳನ್ನು ಕಾರ್ಯದರ್ಶಿಗಳು / ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಮೊತ್ತದ ಸತ್ಯಾಪನೆ ಮಾಡಿ ಚಲನ್ ಮೂಲಕ ಬ್ಯಾಂಕಿಗೆ ಜಮಾ ಮಾಡಬೇಕಾಗಿರುತ್ತದೆ. ಈ ರೀತಿ ಜಮಾ ಮಾಡಿದ ಮೊತ್ತವನ್ನು ಕಾರ್ಯದರ್ಶಿಯವರು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕಾಗಿರುತ್ತದೆ. ಆದರೆ ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬ್ಯಾಂಕಿಗೆ ಜಮಾ ಮಾಡದೇ ಹಣ ದುರುಪಯೋಗಪಡಿಸಿಕೊಂಡಿರುವ ಹಲವಾರು ಪ್ರಕರಣಗಳು ಕಂಡುಬಂದಿರುತ್ತವೆ. ಆಯಾ ಗ್ರಾಮ ಪಂಚಾಯಿತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಕಂದಾಯ ಹಾಗೂ ಇತರೇ ಸ್ವೀಕೃತಿ ಮೊತ್ತದ ಹಣ ದುರುಪಯೋಗ ಪ್ರಕರಣಗಳನ್ನು ವಿವರಿಸಲಾಗಿರುತ್ತದೆ, ಅದರಂತೆ 2016-17ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ **1600** ಗ್ರಾಮ ಪಂಚಾಯತಿಗಳಲ್ಲಿ ರಾಜಸ್ವ ವಸೂಲಿಯಲ್ಲಿ ಹಣ ದುರುಪಯೋಗದ ಮೊತ್ತ ರೂ.**2332.51** ಲಕ್ಷಗಳಾಗಿದ್ದು, ಈ ಪೈಕಿ ರೂ.**1650.22** ಲಕ್ಷಗಳನ್ನು ವಸೂಲಿಸಿ, ಸಾಲಿನಂತ್ಯಕ್ಕೆ ಬಾಕಿ **682.29**ಲಕ್ಷಗಳನ್ನು ಗ್ರಾಮ ಪಂಚಾಯತಿ ನಿಧಿಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-9**ರಲ್ಲಿ ನೀಡಲಾಗಿದೆ ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು **ಅನುಬಂಧ-9(ಎ)**ನಲ್ಲಿ ನೀಡಲಾಗಿದೆ. ಈ ಮೊತ್ತವನ್ನು ವಸೂಲಿ ಮಾಡಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳ ನಿಧಿಗೆ ಜಮಾ ಮಾಡಬೇಕಾಗುತ್ತದೆ.

ಇಂತಹ ಲೋಪದೋಷಗಳಿಗೆ ಕಾರಣರಾದ ಸಂಬಂಧಿಸಿದ ಕಾರ್ಯದರ್ಶಿಗಳು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ನಿಯಮಾನುಸಾರ ಸೂಕ್ತ ಶಿಸ್ತುಕ್ರಮ ಜರುಗಿಸಿ ಹಣ ದುರುಪಯೋಗದ ಮೊತ್ತದೊಂದಿಗೆ ನಿಗದಿತ ಬಡ್ಡಿಯನ್ನು ಸಹ ವಸೂಲಿ ಮಾಡಿ ಗ್ರಾಮ ಪಂಚಾಯತಿ ನಿಧಿಗೆ ಜಮಾ ಮಾಡಲು ಲೆಕ್ಕಪರಿಶೋಧನೆಯಲ್ಲಿ ಸೂಚಿಸಲಾಗಿದೆ.

### 3.1(ಎ) ಗ್ರಾಮ ಪಂಚಾಯತಿಗಳಲ್ಲಿ ರಾಜಸ್ವ ಸ್ವೀಕೃತಿಯನ್ನು ಪಂಚಾಯತಿ ನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು.

ಲೆಕ್ಕಪರಿಶೋಧನೆ ಕೈಗೊಂಡ 4 ಜಿಲ್ಲೆಗಳ 63 ಗ್ರಾಮ ಪಂಚಾಯಿತಿಗಳಲ್ಲಿ ವಸೂಲಿಸಲಾದ ರಾಜಸ್ವ ಸ್ವೀಕೃತಿಯ ಮೊತ್ತವನ್ನು ಪಂಚಾಯತಿನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿದ್ದು, ರೂ.**4.79**ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.**13.55**ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. **ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.1ಎರಲ್ಲಿ ನೀಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಳಗಾವಿ | 13 | 13 | 3.62 | 1.56 |
| 2 | ಚಿಕ್ಕಮಗಳೂರು | 13 | 13 | 0.00 | 3.12 |
| 3 | ತುಮಕೂರು | 35 | 35 | 1.17 | 7.87 |
| 4 | ಉಡುಪಿ | 2 | 2 | 0.00 | 1.00 |
| ಒಟ್ಟು ಮೊತ್ತ | | 63 | 63 | 4.79 | 13.55 |
| ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ) | | | | 18.34 | |

3.2 **ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ/ಸುಂಕ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಗಳ ಮೊಬಲಗು ಮೊತ್ತ ರೂ.439.22 ಲಕ್ಷಗಳನ್ನು ಕಡಿಮೆ ಕಟಾಯಿಸಲಾಗಿದೆ ಹಾಗೂ ಮೊತ್ತ ರೂ.448.25 ಲಕ್ಷಗಳನ್ನು ಕಟಾಯಿಸಿರುವುದಿಲ್ಲ.**

ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿಗಳ ಬಿಲ್ಲುಗಳಲ್ಲಿ ಮಾರಾಟ ತೆರಿಗೆ (ಮಾರಾಟ ತೆರಿಗೆ ಅಧಿನಿಯಮ-2003), ರಾಜಧನ (ಸರ್ಕಾರದ ಗಣಿ ಮತ್ತು ಭೂಗರ್ಭ ಇಲಾಖೆಯು ಕಾಲ ಕಾಲಕ್ಕೆ ನಿಗದಿ ಪಡಿಸಿರುವ ದರಗಳನ್ವಯ) ಆದಾಯ ತೆರಿಗೆ (ಆದಾಯ ತೆರಿಗೆ ಅಧಿನಿಯಮ-1961ರ ಕಲಂ 194) ಹಾಗೂ ಕಾರ್ಮಿಕ ಕಲ್ಯಾಣ ಉಪಕರ (ಸರ್ಕಾರದ ಕಾರ್ಮಿಕ ಇಲಾಖೆಯ ಆದೇಶ ಸಂ:ಎಲ್‌ಇಟಿ 300 ಎಲ್‌ಇಟಿ 2006, ದಿನಾಂಕ:18-01-2007) ಗಳನ್ನು ಕಟಾಯಿಸಿ ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಬೇಕಾಗಿರುತ್ತದೆ.

2016-17ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಿರುವಂತೆ ಹಲವಾರು ಗ್ರಾಮ ಪಂಚಾಯತಿಗಳು ತಾವು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ, ರಾಜಧನ,

ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ಉಪಕರ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಯನ್ನು ಕಡಿಮೆ ಕಟಾಯಿಸಿರುವುದು ಹಾಗೂ ಕಟಾಯಿಸದೇ ಇರುವುದು ಕಂಡುಬಂದಿರುತ್ತದೆ. ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ. ಸಂ | ಮಾರಾಟ ತೆರಿಗೆ | ರಾಜಧನ | ಆದಾಯ ತೆರಿಗೆ | ಕಾರ್ಮಿಕ ಕಲ್ಯಾಣ ನಿಧಿ/ಸುಂಕ | ಗುತ್ತಿಗೆದಾರರ ಕ್ಷೇಮ ನಿಧಿ | ಒಟ್ಟು |
|---|---|---|---|---|---|---|
| 1 | ಕಾಮಗಾರಿ ಬಿಲ್ಲುಗಳಲ್ಲಿ ವಿವಿಧ ತೆರಿಗೆಗಳನ್ನು ಕಡಿಮೆ ಕಟಾವಣೆ ಮಾಡಿರುವುದು | | | | | |
| | **119.54** | **251.05** | **45.66** | **18.19** | **4.78** | **439.22** |
| 2 | ಕಾಮಗಾರಿ ಬಿಲ್ಲುಗಳಲ್ಲಿ ವಿವಿಧ ತೆರಿಗೆಗಳನ್ನು ಕಟಾವಣೆ ಮಾಡದಿರುವುದು | | | | | |
| | **160.51** | **194.56** | **74.15** | **17.53** | **1.49** | **448.25** |

(ಜಿಲ್ಲಾವಾರು ವಿವರಗಳನ್ನು **ಅನುಬಂಧ–10** ರಲ್ಲಿ ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು **ಅನುಬಂಧ–10ಎ** ನಲ್ಲಿ ನೀಡಲಾಗಿದೆ)

ಈ ಮೇಲಿನ ಲೋಪಗಳಿಗೆ ಸಂಬಂಧಿಸಿದ ಗ್ರಾಮ ಪಂಚಾಯತಿಗಳ ಕಾರ್ಯದರ್ಶಿಗಳು / ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸುವುದರೊಂದಿಗೆ ಸದರಿ ಕಡಿಮೆ ಕಟಾವಣೆ/ ಕಟಾಯಿಸದ ಮೊಬಲಗನ್ನು ಸಂಬಂಧಿಸಿದ ಗುತ್ತಿಗೆದಾರರ ಮುಂದಿನ ಕಾಮಗಾರಿ ಬಿಲ್ಲುಗಳಲ್ಲಿ ಅಥವಾ ನಗದಾಗಿ ವಸೂಲಿಸಿ ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಲು ಲೆಕ್ಕ ಪರಿಶೋಧನೆಯಲ್ಲಿ ಸೂಚಿಸಲಾಗಿದೆ.

**3.2(ಎ) ವಿವಿಧ ಯೋಜನೆಯ ಬಿಲ್ಲುಗಳಲ್ಲಿ ಪಾವತಿಸುವಾಗ ತೆರಿಗೆಗಳನ್ನು ಕಟಾಯಿಸದೆ ಪಾವತಿಸಿರುವುದು/ ಕಡಿಮೆ ಕಟಾಯಿಸದೆ ಇರುವ ಪ್ರಕರಣಗಳು.**

ಲೆಕ್ಕಪರಿಶೋಧನೆ ಕೈಗೊಂಡ 12 ಜಿಲ್ಲೆಗಳ 379 ಗ್ರಾಮ ಪಂಚಾಯಿತಿಗಳಲ್ಲಿ ವಸೂಲಿಸಲಾದ ರಾಜಸ್ವ ಸ್ವೀಕೃತಿಯ ಮೊತ್ತವನ್ನು ಪಂಚಾಯತಿ ನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿ ಕೊಂಡಿರುವುದು ಕಂಡು ಬಂದಿದ್ದು, ರೂ.81.36 ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.216.16 ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. **ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.2ಎ ರಲ್ಲಿ ನೀಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 103 | 103 | 65.98 | 8.41 |
| 2 | ಬೆಳಗಾವಿ | 13 | 13 | 0.00 | 2.72 |
| 3 | ಬೀದರ್ | 2 | 2 | 0.00 | 0.44 |

| | | | | | |
|---|---|---|---|---|---|
| 4 | ಚಾಮರಾಜನಗರ | 22 | 22 | 1.41 | 3.18 |
| 5 | ಚಿಕ್ಕಮಗಳೂರು | 27 | 27 | 0.00 | 6.88 |
| 6 | ಚಿಕ್ಕಬಳ್ಳಾಪುರ | 1 | 1 | 0.96 | 0.00 |
| 7 | ದಾವಣಗೆರೆ | 130 | 130 | 5.08 | 182.21 |
| 8 | ಕೊಪ್ಪಳ | 3 | 3 | 0.00 | 0.13 |
| 9 | ಮೈಸೂರು | 5 | 5 | 0.00 | 1.95 |
| 10 | ಶಿವಮೊಗ್ಗ | 22 | 22 | 1.45 | 3.05 |
| 11 | ತುಮಕೂರು | 50 | 50 | 6.48 | 5.75 |
| 12 | ಉಡುಪಿ | 1 | 1 | 0.00 | 1.44 |
| ಒಟ್ಟು ಮೊತ್ತ | | 379 | 379 | 81.36 | 216.16 |
| ಒಟ್ಟು ಮೊತ್ತ (ಆಕ್ಷೇಪಣೆ + ವಸೂಲಾತಿ) | | | | 297.52 | |

**3.3 ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ, ಮಾರಾಟ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಗಳ ಮೊಬಲಗು ರೂ.13350.96 ಲಕ್ಷಗಳನ್ನು ಸರ್ಕಾರ/ ಮಂಡಳಿಗೆ ಜಮಾ ಮಾಡದೇ ಗ್ರಾಮ ಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಳ್ಳಲಾಗಿದೆ.**

ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿಗಳ ಮೂಲ ಬಿಲ್ಲುಗಳಲ್ಲಿ ಮಾರಾಟ ತೆರಿಗೆ (ಮಾರಾಟ ತೆರಿಗೆ ಅಧಿನಿಯಮ-2003) ರಾಜಧನ (ಸರ್ಕಾರದ ಗಣಿ ಮತ್ತು ಭೂಗರ್ಭ ಇಲಾಖೆಯು ಕಾಲ ಕಾಲಕ್ಕೆ ನಿಗದಿ ಪಡಿಸಿರುವ ದರಗಳನ್ವಯ), ಆದಾಯ ತೆರಿಗೆ (ಆದಾಯ ತೆರಿಗೆ ಅಧಿನಿಯಮ-1961ರ ಕಲಂ 194ಸಿ) ಹಾಗೂ ಕಾರ್ಮಿಕ ಕಲ್ಯಾಣ ಉಪಕರ (ಸರ್ಕಾರದ ಕಾರ್ಮಿಕ ಇಲಾಖೆಯ ಆದೇಶ ಸಂ: ಎಲ್‌ಡಿ 300 ಎಲ್‌ಇಡಿ 2006, ದಿನಾಂಕ: 18-01-2007) ಗಳನ್ನು ಕಟಾಯಿಸಿ ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಬೇಕಾಗಿರುತ್ತದೆ. ಆದರೆ ಈಗಾಗಲೇ ಕಟಾಯಿಸಿರುವ ಒಟ್ಟು ಮೊತ್ತ **ರೂ.13350.96** ಲಕ್ಷಗಳನ್ನು ಸರ್ಕಾರ/ಮಂಡಳಿಗೆ ಜಮಾ ಮಾಡದೇ ಗ್ರಾಮಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡು ಕೇಂದ್ರ/ರಾಜ್ಯದ ಸಂಚಿತ ನಿಧಿಯಿಂದ ಹೊರಗಿಟ್ಟಿರುವುದು ಕಂಡುಬಂದಿದ್ದು ಇದು ಅನಿಯಮಿತವಾಗಿರುತ್ತದೆ. ವಿವರಗಳು ಈ ಕೆಳಗಿನಂತಿರುತ್ತವೆ.

(ಲಕ್ಷಗಳಲ್ಲಿ)

| ಕ್ರ.ಸ | ಮಾರಾಟ ತೆರಿಗೆ | ರಾಜಧನ | ಆದಾಯ ತೆರಿಗೆ | ಕಾರ್ಮಿಕ ಕಲ್ಯಾಣ ಉಪಕರ | ಗುತ್ತಿಗದಾರರ ಕ್ಷೇಮ ನಿಧಿ | ಒಟ್ಟು |
|---|---|---|---|---|---|---|
| 1 | ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ವಿವಿಧ ತೆರಿಗೆಗಳ ಮೊತ್ತವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಗ್ರಾಮ ಪಂಚಾಯತಿಯ ನಿಧಿಯಲ್ಲಿಯೇ ಉಳಿಸಿ ಕೊಂಡಿರುವುದು. | | | | | |
| | 2044.94 | 2983.64 | 5783.49 | 2401.32 | 137.58 | 13350.96 |

(ಜಿಲ್ಲಾವಾರು ವಿವರಗಳನ್ನು **ಅನುಬಂಧ-11ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು** ವಿವರಗಳನ್ನು **ಅನುಬಂಧ-11ಎ ರ ಕಲಂ 8 ರಿಂದ 14ರಲ್ಲಿ** ನೀಡಲಾಗಿದೆ)

**3.3(ಎ)ಕಾಮಗಾರಿ ಬಿಲ್ಲಿನಲ್ಲಿ ಕಟಾಯಿಸಿದ ಆದಾಯ ಕರ, ಮಾರಾಟ ಕರ, ರಾಜಧನ ಮತ್ತು ಕಾರ್ಮಿಕ ಕಲ್ಯಾಣ ನಿಧಿಯನ್ನು ಸರ್ಕಾರಕ್ಕೆ ಜಮಾ ಮಾಡದೇ ಗ್ರಾಮ ಪಂಚಾಯಿತಿ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು.**

ಲೆಕ್ಕಪರಿಶೋಧನೆ ಕೈಗೊಂಡ 10 ಜಿಲ್ಲೆಗಳ 347 ಗ್ರಾಮ ಪಂಚಾಯಿತಿಗಳಲ್ಲಿ ವಸೂಲಿಸಲಾದ ರಾಜಸ್ವ ಸ್ವೀಕೃತಿಯ ಮೊತ್ತವನ್ನು ಪಂಚಾಯತಿ ನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿ ಕೊಂಡಿರುವುದು ಕಂಡು ಬಂದಿದ್ದು, ರೂ.**638.12** ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, **ರೂ.30.01** ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.3ಎ ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 160 | 160 | 524.38 | 14.63 |
| 2 | ಬೆಳಗಾವಿ | 2 | 2 | 3.05 | 0.00 |
| 3 | ಚಾಮರಾಜನಗರ | 13 | 13 | 0 | 4.83 |
| 4 | ಚಿಕ್ಕಮಗಳೂರು | 31 | 31 | 5.10 | 7.11 |
| 5 | ದಾವಣಗೆರೆ | 5 | 5 | 0.01 | 0.50 |
| 6 | ಕೊಪ್ಪಳ | 2 | 2 | 1.12 | 0.31 |
| 7 | ಕೊಡಗು | 7 | 7 | 14.31 | 0.00 |
| 8 | ರಾಯಚೂರು | 30 | 30 | 52.44 | 0.00 |
| 9 | ತುಮಕೂರು | 103 | 103 | 52.01 | 2.19 |
| 10 | ಉಡುಪಿ | 1 | 1 | 0.00 | 0.45 |
| ಒಟ್ಟು ಮೊತ್ತ | | 347 | 347 | 638.12 | 30.01 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 668.13 | |

**3.4 ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾಗಿರುವ ಮಾರಾಟ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಗಳ ಹಾಗೂ ಕಾರ್ಮಿಕ ಕಲ್ಯಾಣ ನಿದಿಗಳ ಬಾಬ್ತು 48.42ಲಕ್ಷ ಮೊಬಲಗನ್ನು ಸರ್ಕಾರ /ಮಂಡಳಿಗೆ ಜಮಾ ಮಾಡುವ ಸಲುವಾಗಿ ಗ್ರಾಮ ಪಂಚಾಯತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಳ್ಳಲಾಗಿದೆ.**

ಲೆಕ್ಕಪರಿಶೋಧನೆ ಕೈಗೊಂಡು ವರದಿಗಳನ್ನು ಬಿಡುಗಡೆಗೊಳಿಸಿರುವ ಗ್ರಾಮಪಂಚಾಯತಿಗಳ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾಗಿರುವ ಮಾರಾಟ ತೆರಿಗೆ, ರಾಜಧನ ಹಾಗೂ ಆದಾಯ ತೆರಿಗೆ ಮೊಬಲಗು ಒಟ್ಟು ಮಾಡಿ 48.42 ಲಕ್ಷಗಳನ್ನು ಸರ್ಕಾರ/ಮಂಡಳಿಗೆ ಜಮಾ ಮಾಡುವ ಸಲುವಾಗಿ

ಗ್ರಾಮಪಂಚಾಯತಿಗಳ ನಿಧಿಯಿಂದ ಡ್ರಾ ಮಾಡಿದ್ದರೂ ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಹಣ ದುರುಪಯೋಗಪಡಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ | ಮಾರಾಟ ತೆರಿಗೆ | ರಾಜಧನ | ಆದಾಯ ತೆರಿಗೆ | ಕಾರ್ಮಿಕ ಕಲ್ಯಾಣ ಉಪಕರ | ಗುತ್ತಿಗದಾರರ ಕ್ಷೇಮ ನಿಧಿ | ಒಟ್ಟು (ಲಕ್ಷಗಳಲ್ಲಿ) |
|---|---|---|---|---|---|---|
| 1 | ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿರುವ ಮೊತ್ತಗಳನ್ನು ಗ್ರಾಮ ಪಂಚಾಯತಿ ನಿಧಿಯಿಂದ ಸೆಳೆದು ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿ ಕೊಂಡಿರುವ ಮೊತ್ತ | | | | | |
| | **17.02** | **18.73** | **8.90** | **3.35** | **0.44** | **48.42** |

ಇಂತಹ ಲೋಪದೋಷಗಳಿಗೆ ಕಾರಣರಾದ ಸಂಬಂಧಿಸಿದ ಕಾರ್ಯದರ್ಶಿಗಳು/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮ ಜರುಗಿಸಿ ಹಣ ದುರುಪಯೋಗದ ಮೊತ್ತದೊಂದಿಗೆ ನಿಗದಿತ ಬಡ್ಡಿಯನ್ನು ಸಹ ವಸೂಲಿ ಮಾಡಿ ಸರ್ಕಾರ/ ಇಲಾಖೆ/ ಮಂಡಳಿಗೆ ಜಮಾ ಮಾಡಲು ಲೆಕ್ಕಪರಿಶೋಧನೆಯಲ್ಲಿ ಸೂಚಿಸಲಾಗಿದೆ.

ಮಾರಾಟ ತೆರಿಗೆ, ರಾಜಧನ ಹಾಗೂ ಆದಾಯ ತೆರಿಗೆ ಮೊತ್ತವನ್ನು ಗ್ರಾಮ ಪಂಚಾಯತಿಯ ನಿಧಿಯಿಂದ ಸೆಳೆದು ಸರ್ಕಾರ / ಇಲಾಖೆ / ಮಂಡಳಿಗೆ ಲೆಕ್ಕಶೀರ್ಷಿಕೆಗೆ ಜಮಾ ಮಾಡದಿರುವ (ಜಿಲ್ಲಾವಾರು ವಿವರಗಳನ್ನು **ಅನುಬಂಧ-11** ರ ಕಲಂ11 ರಿಂದ 16ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು **ಅನುಬಂಧ-11ಎ** ರ ಕಲಂ 14 ರಿಂದ 19 ನಲ್ಲಿ ನೀಡಲಾಗಿದೆ)

### 3.4(ಎ) ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ತೆರಿಗೆಗಳನ್ನು ಪಾವತಿಸಲು ಡ್ರಾ ಮಾಡಿ ಪೂರ್ತಿಯಾಗಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು.

ಲೆಕ್ಕಪರಿಶೋಧನೆ ಕೈಗೊಂಡ 09 ಜಿಲ್ಲೆಗಳ 133 ಗ್ರಾಮ ಪಂಚಾಯಿತಿಗಳಲ್ಲಿ ವಸೂಲಿಸಲಾದ ರಾಜಸ್ವ ಸ್ವೀಕೃತಿಯ ಮೊತ್ತವನ್ನು ಪಂಚಾಯತಿ ನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿ ಕೊಂಡಿರುವುದು ಕಂಡು ಬಂದಿದ್ದು, ರೂ.4.15 ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.33.88 ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. **ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.4ಎರಲ್ಲಿ ನೀಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 25 | 25 | 20.85 | 31.23 |
| 2 | ಬೆಳಗಾವಿ | 3 | 3 | 0.00 | 0.07 |
| 3 | ಬೀದರ್ | 1 | 1 | 0.00 | 0.91 |
| 4 | ಚಾಮರಾಜನಗರ | 82 | 82 | 1.37 | 19.48 |
| 5 | ಚಿಕ್ಕಮಗಳೂರು | 12 | 12 | 0.05 | 1.56 |

| | | | | | |
|---|---|---|---|---|---|
| 6 | ದಾವಣಗೆರೆ | 31 | 31 | 0.00 | 11.44 |
| 7 | ಕೊಪ್ಪಳ | 2 | 2 | 0.00 | 0.43 |
| 8 | ಕೊಡುಗು | 1 | 1 | 0.31 | 0.00 |
| 9 | ರಾಯಚೂರು | 1 | 1 | 2.42 | 0.00 |
| ಒಟ್ಟು ಮೊತ್ತ | | 133 | 133 | 4.15 | 33.88 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 38.04 | |

**3.5. ವಸೂಲಿ ಮಾಡಿದ 45740.05 ಲಕ್ಷಗಳ ಮೊತ್ತದ ಉಪಕರಗಳನ್ನು ಸರ್ಕಾರದ ವಿವಿಧ ಇಲಾಖೆಗಳ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಗ್ರಾಮಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು.**

ರಾಜ್ಯದ ಗ್ರಾಮ ಪಂಚಾಯತಿಗಳು ಸರ್ಕಾರದ ಪರವಾಗಿ ವಸೂಲಿ ಮಾಡಿರುವ ಆರೋಗ್ಯಕರ, ಶಿಕ್ಷಣಕರ, ಗ್ರಂಥಾಲಯಕರ ಹಾಗೂ ಭಿಕ್ಷುಕರ ಕರಗಳನ್ನು ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೆ ಹಿಂದಿನ ಸಾಲಿನಿಂದಲೂ ಗ್ರಾಮ ಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದೆ. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 2011, ಅಧ್ಯಾಯ–5 (ತೆರಿಗೆ ಸಂಗ್ರಹ ಮತ್ತು ಇರಸಾಲು) ನಿಯಮ 44ರ ಪ್ರಕಾರ ಈ ರೀತಿ ಸರ್ಕಾರದ ಪರವಾಗಿ ವಸೂಲಿ ಮಾಡಲ್ಪಟ್ಟ ಉಪಕರಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ವಿಳಂಬವಿಲ್ಲದೇ ಜಮಾ ಮಾಡಬೇಕಾಗಿರುತ್ತದೆ. ಆದರೆ ಜಮಾ ಮಾಡದೇ ಗ್ರಾಮಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು ಸಂಬಂಧಿಸಿದ ಕಾರ್ಯದರ್ಶಿಗಳು/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕರ್ತವ್ಯಲೋಪವಾಗಿರುತ್ತದೆ. 2016–17ನೇ ಸಾಲಿನ (ವಸೂಲಿಯಾದ) ಪ್ರಾರಂಭಿಕ ಮೊತ್ತ ರೂ.**40678.67** ಲಕ್ಷ ಇದ್ದು, ವರದಿ ಸಾಲಿನಲ್ಲಿ ರೂ.**6797.01** ಲಕ್ಷ ವಸೂಲಿಯಾಗಿ ಒಟ್ಟು ರೂ.**47475.68** ಲಕ್ಷಗಳಾಗಿ ಸರ್ಕಾರಕ್ಕೆ ರೂ.**1735.63** ಲಕ್ಷ ಜಮಾ ಮಾಡಿ ವರ್ಷಾಂತ್ಯಕ್ಕೆ ಜಮಾ ಮಾಡದೆ ಬಾಕಿ ಉಳಿಸಿಕೊಂಡಿರುವ ಉಪಕರಗಳ ಒಟ್ಟು ಮೊತ್ತ ರೂ.**45740.05** ಲಕ್ಷಗಳಾಗುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ–12**ರಲ್ಲಿ ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು **ಅನುಬಂಧ–12ಎ** ನಲ್ಲಿ ನೀಡಲಾಗಿದೆ.

**3.5(ಎ) ಮನೆ ಮತ್ತು ಕಂದಾಯಗಳ ಮೇಲೆ ವಸೂಲಿಸಿರುವ ಉಪಕರಗಳನ್ನು ಸರ್ಕಾರಕ್ಕೆ ಜಮಾ ಮಾಡದೆ ಇರುವುದು.**

ಲೆಕ್ಕಪರಿಶೋಧನೆ ಕೈಗೊಂಡ 08 ಜಿಲ್ಲೆಗಳ 805 ಗ್ರಾಮ ಪಂಚಾಯಿತಿಗಳಲ್ಲಿ ವಸೂಲಿಸಲಾದ ಉಪಕರಗಳನ್ನು ಸರ್ಕಾರಕ್ಕೆ ಜಮಾ ಮಾಡದೆ ಇರುವ ಪ್ರಕರಣಗಳು ಕಂಡು ಬಂದಿದ್ದು, ರೂ.**2599.46** ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.**115.93** ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. **ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.5ಎರಲ್ಲಿ ನೀಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 190 | 190 | 2321.80 | 0.54 |
| 2 | ಬೆಳಗಾವಿ | 3 | 3 | 1.99 | 0.00 |
| 3 | ಚಾಮರಾಜನಗರ | 125 | 125 | 73.48 | 0.00 |
| 4 | ಚಿಕ್ಕಮಗಳೂರು | 9 | 9 | 0.09 | 2.09 |
| 5 | ಕೊಪ್ಪಳ | 44 | 44 | 0.00 | 18.31 |
| 6 | ಮೈಸೂರು | 31 | 31 | 19.52 | 0.00 |
| 7 | ರಾಯಚೂರು | 33 | 33 | 26.77 | 0.00 |
| 8 | ತುಮಕೂರು | 370 | 370 | 155.82 | 94.99 |
| ಒಟ್ಟು ಮೊತ್ತ | | 805 | 805 | 2599.46 | 115.93 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 2715.39 | |

### 3.6 ಗ್ರಾಮ ಪಂಚಾಯತಿಗಳಿಂದ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ 9.68 ಲಕ್ಷಗಳಷ್ಟು ಮೊತ್ತದ ಓಚರುಗಳನ್ನು ಹಾಜರುಪಡಿಸಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ನಿಯಮಗಳು 42 ರಿಂದ 56 ರ ಪ್ರಕಾರ ಗ್ರಾಮ ಪಂಚಾಯತಿಯು ಮಾಡುವ ಯಾವುದೇ ವೆಚ್ಚಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಪಾವತಿಗೂ ಬಿಲ್/ಓಚರ್ ಇರಬೇಕಾಗುತ್ತದೆ ಹಾಗೂ ಪಾವತಿಯನ್ನು ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ರವರ ಜಂಟಿ ಸಹಿ ಇರುವ/ಕಾರ್ಯದರ್ಶಿಗಳು ಜಂಟಿ ಸಹಿಯೊಂದಿಗಿರುವ ಚೆಕ್ಕಿನ ಮೂಲಕ ಮಾತ್ರ ಪಾವತಿ ಮಾಡಬೇಕಾಗಿರುತ್ತದೆ. ಆದರೆ ಪ್ರಸ್ತುತ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡಾಗ ಪಾವತಿಯಾದ ಮೊತ್ತಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಗೆ ಪೂರ್ಣ ಪ್ರಮಾಣದ ಓಚರ್‌ಗಳನ್ನು ಹಾಜರು ಪಡಿಸದಿರುವುದು, ಒಂದು ಗುರುತರವಾದ ನ್ಯೂನತೆ ಆಗಿರುತ್ತದೆ ಹಾಗೂ ಭರಿಸಲಾದ ವೆಚ್ಚಕ್ಕೆ ನಿಯಮಗಳನುಸಾರ ಓಚರ್‌ಗಳನ್ನು ಹಾಜರು ಪಡಿಸದಿರುವುದರಿಂದ ಸಂಬಂಧಿಸಿದ ಗ್ರಾಮ ಪಂಚಾಯತಿಗಳ ಕಾರ್ಯದರ್ಶಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ರಮ ಸಂಶಯಾಸ್ಪದವಾಗಿದ್ದು, ಇಂತಹ ಪ್ರಕರಣಗಳಲ್ಲಿ, ಯಾವ ಉದ್ದೇಶಕ್ಕೆ ಹಣವನ್ನು ಸೆಳೆಯಲಾಗಿದೆಯೋ ಆ ಉದ್ದೇಶಕ್ಕೆ ವಿನಿಯೋಗಿಸದೇ ಇದ್ದಲ್ಲಿ ಓಚರುಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಕೆಲಮೊಮ್ಮೆ ಹಣ ದುರುಪಯೋಗಪಡಿಸಿಕೊಂಡು ಲೆಕ್ಕಪರಿಶೋಧನೆಗೆ ಓಚರುಗಳನ್ನು ಹಾಜರುಪಡಿಸದಿರುವ ಸಾಧ್ಯತೆಗಳಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮಗಳು 43 ಮತ್ತು 44ರನ್ವಯ ಓಚರುಗಳನ್ನು ಲೆಕ್ಕ

ತನಿಖೆಗೆ ಹಾಜರುಪಡಿಸಬೇಕಾಗುತ್ತದೆ. ಸುತ್ತೋಲೆ ಸಂಖ್ಯೆ:ಗ್ರಾಅಪ 29 ಲೆಪಬಿ 2006 ದಿನಾಂಕ:18.04.2007 ರಂತೆ, ಲೆಕ್ಕಪರಿಶೋಧನೆಗೆ ದಾಖಲಾತಿಗಳನ್ನು ಒದಗಿಸುವ ವಿಷಯದಲ್ಲಿ ಗ್ರಾಮಪಂಚಾಯಿತಿಗಳ ಪ್ರತಿಕ್ರಿಯೆ ಬಹಳ ನೀರಸವಾಗಿದ್ದು, ಕೋಟ್ಯಾಂತರ ಮೊತ್ತದ ವ್ಯವಹಾರಗಳನ್ನೊಳಗೊಂಡ ಕಡತ/ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವುದರಿಂದ, ಅವುಗಳಲ್ಲಿ ಆಗಿರಬಹುದಾದ ಸಂಭವನೀಯ ಅಕ್ರಮ/ವಂಚನೆಗಳನ್ನು ಪತ್ತೆ ಹಚ್ಚುವಲ್ಲಿ ಸಾದ್ಯವಾಗದೆ ಇರುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ, ಮತ್ತು ಕಾಲಕ್ರಮೇಣ ಸದರಿ ಆಕ್ಷೇಪಣೆಗಳಿಗೆ ಕಾರಣರಾಗಿರುವ ವ್ಯಕ್ತಿಗಳು ನಿವೃತ್ತಿಯಾಗಬಹುದು ಅಥವಾ ಕಡತಗಳು ಕಾಣೆಯಾಗಬಹುದು. ಇದರಿಂದ ನ್ಯೂನತೆಗಳಿಗೆ ಕಾರಣರಾದ ವ್ಯಕ್ತಿಗಳಿಂದ ದುರುಪಯೋಗದ ಮೊತ್ತಗಳನ್ನು ವಸೂಲಿ ಮಾಡುವುದು ಕಷ್ಟ ಸಾಧ್ಯವಾಗಬಹುದು. ಲೆಕ್ಕಪರಿಶೋಧನೆಗೆ ಓಚರ್ಸ್ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಒದಗಿಸದೇ ಇರುವುದು ಗಂಭೀರ ಲೋಪವಾಗಿರುತ್ತದೆ. ಒಟ್ಟು **9.68** ಲಕ್ಷಗಳ ಮೊತ್ತದ ಓಚರ್ಸ್ ಮತ್ತು ದಾಖಲೆಗಳನ್ನು ಪರಿಶೀಲನೆಗೆ ಒದಗಿಸಿರುವುದಿಲ್ಲ. ಓಚರ್‌ಗಳನ್ನು ಹಾಜರುಪಡಿಸದೇ ಇರುವ ಅಷ್ಟು ಮೊತ್ತದಷ್ಟು ವ್ಯವಹಾರಗಳು ಪರಿಶೀಲನೆಗೆ ಒಳಪಟ್ಟಿರುವುದಿಲ್ಲ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.6 ರಲ್ಲಿ ನೀಡಲಾಗಿದೆ.

| (ರೂ.ಲಕ್ಷಗಳಲ್ಲಿ) | | | | |
|---|---|---|---|---|
| ಕ್ರ.ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆ ಮೊತ್ತ |
| **1** | **2** | **3** | **4** | **5** |
| **1** | **ಚಾಮರಾಜನಗರ** | **1** | **1** | **0.56** |
| **2** | **ಚಿಕ್ಕಮಗಳೂರು** | **2** | **2** | **8.47** |
| **3** | **ಚಿಕ್ಕಬಳ್ಳಾಪುರ** | **1** | **1** | **0.64** |
| | **ಒಟ್ಟು ಮೊತ್ತ** | **4** | **4** | **9.68** |

## 3.7 ಹಣ ದುರುಪಯೋಗ ಪ್ರಕರಣಗಳೆಂದು ಶಂಕಿಸಿರುವ ಕಂಡಿಕೆಗಳು

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006, ನಿಯಮ 111ರ ಪ್ರಕಾರ ಹಣ ದುರುಪಯೋಗದ ಪ್ರಕರಣಗಳು ಗ್ರಾಮ ಪಂಚಾಯತಿಯಲ್ಲಿ ಕಂಡುಬಂದಲ್ಲಿ ವಿಚಾರಣೆಯನ್ನು ಕೈಗೊಳ್ಳತಕ್ಕದ್ದು, ಗ್ರಾಮ ಪಂಚಾಯತಿಗಳಲ್ಲಿ ಒಟ್ಟು ಮೊತ್ತ ರೂ.**50.04** ಲಕ್ಷಗಳ ಹಣ ದುರುಪಯೋಗ ಪ್ರಕರಣಗಳು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದ್ದು, ಇದರಲ್ಲಿ ರೂ.**42.45** ಲಕ್ಷಗಳು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.**7.58** ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. **ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.7ರಲ್ಲಿ ನೀಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಪ್ರಕರಣ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 9 | 9 | 1.87 | 5.37 |
| 2 | ಬೆಳಗಾವಿ | 4 | 4 | 8.00 | 0.30 |
| 3 | ಬೀದರ್ | 3 | 3 | 0.00 | 0.14 |
| 4 | ಚಿಕ್ಕಮಗಳೂರು | 2 | 2 | 32.58 | 0.07 |
| 5 | ದಾವಣಗೆರೆ | 1 | 1 | 0.00 | 0.03 |
| 6 | ಶಿವಮೊಗ್ಗ | 1 | 1 | 0.00 | 0.77 |
| 7 | ತುಮಕೂರು | 3 | 3 | 0.00 | 0.91 |
| ಒಟ್ಟು | | 23 | 23 | 42.45 | 7.58 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 50.04 | |

### 3.8 ಗ್ರಾಮ ಪಂಚಾಯತಿಗಳ ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ನಷ್ಟವಾಗಿರುವ 147 ಮಾನವ ದಿನಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 112(1)ರ ಪ್ರಕಾರ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು ಗ್ರಾಮ ಪಂಚಾಯತಿಯ ಜಮೆ ಮತ್ತು ಪಾವತಿ ಲೆಕ್ಕಗಳು, ಆದಾಯ ಮತ್ತು ವೆಚ್ಚ ಲೆಕ್ಕಗಳು ಹಾಗೂ ಆಸ್ತಿ ಮತ್ತು ಹೊಣೆಗಾರಿಕೆ ತಖ್ತೆಗಳನ್ನು ಲೆಕ್ಕಪರಿಶೋಧಕರಿಗೆ ಒದಗಿಸಿ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಬೇಕೆಂದು ತಿಳಿಸಿದೆ. ಆದರೆ 38 ಗ್ರಾಮಪಂಚಾಯತಿಗಳ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಕಾರ್ಯದರ್ಶಿಗಳು ಸಂಬಂಧಿಸಿದ ಲೆಕ್ಕಪತ್ರಗಳನ್ನು 2016-17ನೇ ಸಾಲಿನ ಲೆಕ್ಕ ಪರಿಶೋಧನೆಗೆ ಸಲ್ಲಿಸದಿರುವುದು, ಲೆಕ್ಕ ಪರಿಶೋಧನೆಗೆ ನಿಗದಿ ಪಡಿಸಿದ ದಿನದಂದು ಗ್ರಾಮ ಪಂಚಾಯತಿಗಳಲ್ಲಿ ಹಾಜರಿಲ್ಲದೇ ಇರುವುದು, ಇತ್ಯಾದಿ ಕಾರಣಗಳಿಂದ ಲೆಕ್ಕಪರಿಶೋಧನೆಯಲ್ಲಿ ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುವುದಿಲ್ಲ. ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಹಾಜರುಪಡಿಸದಿದ್ದ ಸಂದರ್ಭದಲ್ಲಿ, ಕೆಲವೊಮ್ಮೆ ಆ ಗ್ರಾಮ ಪಂಚಾಯತಿಗಳಿಗೆ ಬದಲಿ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಸಹ ಕೈಗೊಳ್ಳಲಾಗಿದೆ. ಆದರೂ ಸಹ 2016-17ನೇ ಸಾಲಿಗೆ ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಹಾಜರುಪಡಿಸದಿರುವ ಕಾರಣದಿಂದಾಗಿ ಈ ಕೆಳಕಂಡ 6 ಜಿಲ್ಲೆಗಳಲ್ಲಿ ಒಟ್ಟು 147 ಮಾನವ ದಿನಗಳು ನಷ್ಟವಾಗಿರುತ್ತವೆ.

| ಕ್ರ. ಸಂ. | ಜಿಲ್ಲೆಯ ಹೆಸರು | ಗ್ರಾಮಪಂಚಾಯತಿಗಳ ಒಟ್ಟು ಸಂಖ್ಯೆ | ಮಾನವ ದಿನಗಳ ನಷ್ಟ |
|---|---|---|---|
| 1 | 2 | 3 | 4 |
| 1 | ಬೆಂ.ನಗರ ಜಿಲ್ಲೆ | 5 | 30 |

| | | | |
|---|---|---|---|
| 2 | ಬೀದರ್ | 9 | 54 |
| 3 | ಚಿತ್ರದುರ್ಗ | 22 | 27 |
| 4 | ದಾವಣಗೆರೆ | 1 | 6 |
| 5 | ಮಂಡ್ಯ | 1 | 6 |
| 6 | ರಾಯಚೂರು | 0 | 24 |
| ಒಟ್ಟು | | 38 | 147 |

ಲೆಕ್ಕಪರಿಶೋಧನೆಗೆ ಲೆಕ್ಕಪತ್ರ ದಾಖಲಾತಿಗಳನ್ನು ಒದಗಿಸದಿರುವ ವಿಷಯದ ಕುರಿತು ಲಗತ್ತಿಸಿರುವ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 29 ಲೆಪಬಿ 2006, ದಿನಾಂಕ:18.04.2007 ದಲ್ಲಿ ಕ್ರಮ ಸೂಚಿಸಲಾಗಿದೆ. ಸದರಿ ಆದೇಶದ ಕ್ರಮ ಸಂಖ್ಯೆ:(6)ರ ಪ್ರಕಾರ ಲೆಕ್ಕಪರಿಶೋಧನೆಗೆ ಲೆಕ್ಕಪತ್ರ ದಾಖಲಾತಿಗಳನ್ನು ಹಾಜರುಪಡಿಸದೇ ಇರುವುದರಿಂದ ಉಂಟಾದ ಮಾನವ ದಿನಗಳ ನಷ್ಟದ ಮೊತ್ತವನ್ನು ಸಂಬಂಧಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳಿಂದ ವಸೂಲಿ ಮಾಡಲು ಅವಕಾಶವಿರುತ್ತದೆ.

ಈ ಅಂಶವನ್ನು ಪತ್ರಗಳ ಮೂಲಕ ಸಂಬಂಧಿಸಿದ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಂಬಂಧಿಸಿದ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಪ್ರಕರಣಗಳ ಕುರಿತಂತೆ ವಿವರಗಳನ್ನು **ಅನುಬಂಧ-14**ರಲ್ಲಿ ಜಿಲ್ಲಾವಾರು ವಿವರ ಹಾಗೂ ಗ್ರಾಮ ಪಂಚಾಯತಿವಾರು ವಿವರವನ್ನು **ಅನುಬಂಧ-14**ಎರಲ್ಲಿ ನೀಡಲಾಗಿದೆ.

**3.9 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೇ ಬಾಕಿಯಿರುವ ಆಕ್ಷೇಪಣೆ ಮೊತ್ತ ರೂ.469567.83 ಲಕ್ಷಗಳು ಮತ್ತು ವಸೂಲಾತಿ ಮೊತ್ತ ರೂ.39846.51 ಲಕ್ಷಗಳು.**

ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ನಮೂದಿಸಲಾದ ಒಟ್ಟು ಆಕ್ಷೇಪಣೆ, ತೀರುವಳಿ, ವಸೂಲಾತಿಗೆ ಸೂಚಿಸಿದ ಮೊತ್ತದ ಘೋಷ್ವಾರೆಯನ್ನು ಈ ಕೆಳಗೆ ನೀಡಲಾಗಿದೆ.

(ಲಕ್ಷಗಳಲ್ಲಿ)

| ಕ್ರ ಸಂ | ವಿವರ | ಆಕ್ಷೇಪಣೆಗಳು | | ವಸೂಲಾತಿಗಳು | |
|---|---|---|---|---|---|
| | | ಕಂಡಿಕೆಗಳು | ಮೊತ್ತ | ಕಂಡಿಕೆಗಳು | ಮೊತ್ತ |
| 1. | ದಿನಾಂಕ:01.04.2016ರ ಆರಂಭ ಶಿಲ್ಕು | 381900 | 423167.86 | 186146 | 36587.83 |
| 2. | 2016-17ರಲೆಕ್ಕ ತಪಾಸಣಾ ವರದಿಗಳಲ್ಲಿ ಸೇರ್ಪಡೆ | 19316 | 48558.93 | 8528 | 3448.83 |
| 3. | ಒಟ್ಟು | 401216 | 471726.79 | 194674 | 40036.66 |
| 4. | 2016-17ರಲ್ಲಿ ಆದ ತೀರುವಳಿ | 2301 | 2158.96 | 768 | 190.15 |
| 5 | ದಿನಾಂಕ:31.03.2017ರ ಅಂತಿಮ ಶಿಲ್ಕು | 398915 | 469567.83 | 193906 | 39846.51 |

ಮೇಲಿನ ವಿವರಗಳನ್ನು ಅವಲೋಕಿಸಿದಾಗ ಗ್ರಾಮ ಪಂಚಾಯತಿಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ–113ರ ಪ್ರಕಾರ ಸೂಕ್ತ ಅನುಪಾಲನಾ ವರದಿಗಳನ್ನು ಸಲ್ಲಿಸದಿರುವುದು ಕಂಡು ಬರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಗ್ರಾಮ ಪಂಚಾಯತಿಗಳು ಅದ್ಯತೆ ಮೇಲೆ ಕ್ರಮ ಜರುಗಿಸಿ, ಸಂಭವನೀಯ ನಷ್ಟವನ್ನು ತಡೆಗಟ್ಟಲು ಲೆಕ್ಕಪರಿಶೋಧನೆಯಲ್ಲಿ ಸೂಚಿಸಲಾಗಿದೆ. ಆಕ್ಷೇಪಣೆ, ತೀರುವಳಿ ಮತ್ತು ಬಾಕಿ ಮೊತ್ತದ ಜಿಲ್ಲಾವಾರು ವಿವರಗಳನ್ನು **ಅನುಬಂಧ–15** ರಲ್ಲಿ ಹಾಗೂ ಗ್ರಾಮ ಪಂಚಾಯತಿವಾರು ವಿವರವನ್ನು **ಅನುಬಂಧ–15ಎ** ರಲ್ಲಿ ನೀಡಲಾಗಿದೆ.

### 3.10 ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಗಳನ್ನು ಸಲ್ಲಿಸಿರುವುದಿಲ್ಲ.

ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ, ಅನುಪಾಲನಾ ವರದಿಯನ್ನು ಬಹಳಷ್ಟು ಗ್ರಾಮ ಪಂಚಾಯತಿಗಳು ಸಲ್ಲಿಸಿರುವುದಿಲ್ಲ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 114ರಲ್ಲಿ ತಿಳಿಸಿರುವಂತೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 61–ಎ ಅಡಿಯಲ್ಲಿ ಗ್ರಾಮ ಪಂಚಾಯತಿಗಳು ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸಬೇಕಿದೆ. ಈ ರೀತಿ ರಚನೆಯಾಗಿರುವ ಲೆಕ್ಕಪರಿಶೋಧನಾ ಸಮಿತಿಯು 3 ತಿಂಗಳಿಗೊಮ್ಮೆ ಸಭೆ ಸೇರಿ ವಾರ್ಷಿಕ ಲೆಕ್ಕಪರಿಶೋಧನೆ ಮತ್ತು ಅಂತರಿಕ ಲೆಕ್ಕಪರಿಶೋಧನಾ ವರದಿಯ ಮೇಲೆ ಕೈಗೊಂಡ ಕ್ರಮಗಳ ಪರಿಶೀಲನೆ ಹಾಗೂ ಹಿಂದಿನ ವರದಿಗಳಲ್ಲಿ ತೀರುವಳಿಗೆ ಬಾಕಿ ಉಳಿದಿರುವ ಕಂಡಿಕೆಗಳಬಗ್ಗೆ ಹಾಗೂ ಸಂದೇಹಾಸ್ಪದ, ಮೋಸ/ವಂಚನೆ ಅಥವಾ ಅಕ್ರಮ, ಅಂತರಿಕ ನಿಯಂತ್ರಣ ವ್ಯವಸ್ಥೆಯಲ್ಲಿನ ವೈಫಲ್ಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಾಮರ್ಶಿಸಿ ಗ್ರಾಮ ಪಂಚಾಯತಿಗೆ ವರದಿ ಮಾಡಬೇಕಾಗಿರುತ್ತದೆ. ಗ್ರಾಮ ಪಂಚಾಯತಿ ಹಂತದಲ್ಲಿ ನಡೆಯುವ ಈ ಪ್ರಕ್ರಿಯೆ ಬಗ್ಗೆ ತಾಲ್ಲೂಕು ಪಂಚಾಯತಿ ಅಧಿಕಾರಿಗಳ ಹಂತದಲ್ಲಿ ಗಮನವಹಿಸಬೇಕಾಗುತ್ತದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು ಮತ್ತು ಆಯವ್ಯಯ) ನಿಯಮಗಳು 2006ರ, ನಿಯಮ 113ರ ಪ್ರಕಾರ ಕಾರ್ಯದರ್ಶಿಯು ವಾರ್ಷಿಕ ಲೆಕ್ಕಪರಿಶೋಧನಾ ವರದಿ ಸ್ವೀಕೃತವಾದ ಕೂಡಲೇ ವಸೂಲಾತಿಗೆ ಸೂಚಿಸಿರುವ ಮತ್ತು ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತದ ವಿವರವನ್ನು ನಮೂನೆ 58ರಲ್ಲಿ ನಿಗದಿ ಪಡಿಸಿದ ರಜಿಸ್ಟರ್‌ನಲ್ಲಿ ದಾಖಲಿಸಿ, ವರದಿಯಲ್ಲಿ ಎತ್ತಿ ತೋರಿಸಲಾದ ಲೋಪದೋಷಗಳು ಅಥವಾ ಅಕ್ರಮಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳತಕ್ಕದೆಂದು ಮತ್ತು ನಷ್ಟಕ್ಕೆ ಯಾರು ಹೊಣೆಗಾರರಾಗಿದ್ದಾರೋ, ಅಂತಹವರಿಂದ ನಷ್ಟದ ಮೊತ್ತವನ್ನು, ಬಡ್ಡಿ ಸಹಿತ ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ ಹಾಗೂ ಆಕ್ಷೇಪಣೆಗೊಳಗಾಗಿರುವ ವೆಚ್ಚಗಳ ಕುರಿತಂತೆ ಸಮರ್ಪಕ ದಾಖಲೆಯನ್ನು ಮತ್ತು ವಿವರಣೆಯನ್ನು ಒದಗಿಸಲು ಕ್ರಮ ಕೈಗೊಂಡು, ಅನುಪಾಲನಾ ವರದಿಯೊಂದಿಗೆ 3 ತಿಂಗಳ ಒಳಗಾಗಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಗ್ರಾಮ ಪಂಚಾಯತಿಯ ಸಭೆಯ ಮುಂದೆ

ಮಂಡಿಸಿ ನಂತರ ಸಂಬಂಧಿಸಿದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಬೇಕಾಗಿರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿಯು, ತನ್ನ ಷರಾದೊಂದಿಗೆ ಅನುಪಾಲನಾ ವರದಿಯನ್ನು ಸಂಬಂಧಿಸಿದ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಇವರಿಗೆ ಕಳುಹಿಸಿಕೊಡಬೇಕು. ಯಾವುದೇ ವಸೂಲಾತಿ ಅಥವಾ ಬಾಕಿ ಉಳಿದುಕೊಂಡಿರುವ ಆಕ್ಷೇಪಣೆಗಳಿಗೆ ಗ್ರಾಮ ಪಂಚಾಯತಿಯು ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯು ಅಂತಹ ವ್ಯಕ್ತಿಯ ಋಣಭಾರದ ಮೊಬಲಗನ್ನು ಅದು ಬಾಕಿಯಾದ ದಿನಾಂಕದಿಂದ ಬಾಕಿ ಮೊಬಲಗಿನ ಮೇಲೆ ಶೇ.15 ರ ಬಡ್ಡಿ ಸಹಿತ ಗ್ರಾಮ ಪಂಚಾಯತಿಗೆ ಸಂದಾಯ ಮಾಡತಕ್ಕದೆಂದು ಬರಹದಲ್ಲಿ ಆದೇಶದ ಮೂಲಕ ನಿರ್ದೇಶಿಸಬಹುದು. 2 ತಿಂಗಳ ಒಳಗಾಗಿ ಆ ಮೊಬಲಗನ್ನು ಸಂದಾಯ ಮಾಡದಿದ್ದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯು ಅದನ್ನು ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡಲು ಕ್ರಮ ಜರುಗಿಸಬೇಕಾಗುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ–1993ರ ಕಲಂ 246(8) ರಲ್ಲಿ ಕ್ರಮ ಜರುಗಿಸಲು ಅವಕಾಶವಿರುತ್ತದೆ. ಆದರೆ ಕಾರ್ಯನಿರ್ವಾಹಕ ಅಧಿಕಾರಿಗಳು ಈ ರೀತಿ ಯಾವುದೇ ಕ್ರಮ ಜರುಗಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

### 3.11 ಲೆಕ್ಕ ಪರಿಶೋಧನಾ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿರುವುದಿಲ್ಲ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾ.ಅ.ಪ 73. ಜಿ.ಪ.ಸ: 2004 ದಿನಾಂಕ:09–11–2005 ರಿಂದ ಜಾರಿಗೆ ಬಂದಿರುವಂತೆ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು ಮತ್ತು ಆಯವ್ಯಯ) ನಿಯಮಗಳು 2006 ರ, ನಿಯಮ 115 ರ ಪ್ರಕಾರ ಗ್ರಾಮ ಪಂಚಾಯಿತಿಯ ಲೆಕ್ಕ ಪರಿಶೋಧನಾ ಶುಲ್ಕವನ್ನು ಸರ್ಕಾರವು ನಿಗಧಿಪಡಿಸಿದ ದರದಲ್ಲಿ (ವಾರ್ಷಿಕ ರೂ.1000 ಚೆಕ್/ ಡಿಮಾಂಡ್ ಡ್ರಾಫ್ಟ್ ಮುಖಾಂತರ ಆಯಾ ವರ್ಷದ ಲೆಕ್ಕ ಪರಿಶೋಧನಾ ಕಾರ್ಯದ ನಂತರ ಸದರಿ ಮೊಬಲಗನ್ನು ರಾಜ್ಯ ಲೆಕ್ಕ ಪತ್ರ ಇಲಾಖೆಯ ಲೆಕ್ಕಶೀರ್ಷಿಕೆ 0070–60–110–0–01–000ಕ್ಕೆ ಜಮಾ ಮಾಡಲು ಸೂಚಿಸಿದೆ. ಆದರೆ 6 ಜಿಲ್ಲೆಗಳ 819 ಗ್ರಾಮಪಂಚಾಯಿತಿಗಳಲ್ಲಿ ಒಟ್ಟು ಲೆಕ್ಕ ಪರಿಶೋಧನಾ ಶುಲ್ಕ ಆಕ್ಷೇಪಣೆ ಮೊತ್ತ ರೂ.**32.57** ಲಕ್ಷಗಳು ಮತ್ತು ವಸೂಲಾತಿ ಮೊತ್ತ ರೂ.**3.98** ಲಕ್ಷಗಳು ಪಾವತಿಸದಿರುವುದು ಕಂಡುಬಂದಿದ್ದು. **ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2ರ 3.11ರಲ್ಲಿ ನೀಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಯ ಒಟ್ಟು ಸಂಖ್ಯೆ | ಲೆಕ್ಕಪರಿಶೋಧನಾ ಕಂಡಿಕೆ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 116 | 116 | 7.44 | 0.96 |
| 2 | ಬೆಳಗಾವಿ | 2 | 2 | 0.01 | 0.01 |
| 3 | ಚಾಮರಾಜನಗರ | 127 | 127 | 0.00 | 1.27 |
| 4 | ಮೈಸೂರು | 43 | 43 | 0.23 | 0.19 |
| 5 | ಶಿವಮೊಗ್ಗ | 243 | 243 | 23.14 | 0.12 |
| 6 | ತುಮಕೂರು | 288 | 288 | 1.75 | 1.43 |
| ಒಟ್ಟು | | 819 | | 32.57 | 3.98 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 36.55 | |

### 3.12 ಅಡ್‌ಹಾಕ್ ಸಮಿತಿ ಸಭೆಗಳನ್ನು 19 ಜಿಲ್ಲೆಗಳಲ್ಲಿ ನಡೆಸಿರುವುದಿಲ್ಲ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಅಪ 80 ಎಎಆರ್ 2000, ದಿನಾಂಕ: 14.05.2001 ರಲ್ಲಿ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳ ಪರಿಣಾಮಕಾರಿ ತೀರುವಳಿ ಮಾಡುವ ಉದ್ದೇಶದಿಂದ ಪ್ರತಿ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡ ಅಡ್‌ಹಾಕ್ ಸಮಿತಿ ರಚಿಸಲಾಗಿದ್ದು, ಈ ಸಮಿತಿಯು ಕನಿಷ್ಟ 3 ತಿಂಗಳಿಗೊಮ್ಮೆ ಸಭೆ ಸೇರಿ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಸಲ್ಲಿಸಿರುವ ಉತ್ತರಗಳನ್ನು ಪರಿಶೀಲಿಸಿ, ತೀರುವಳಿಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. 2016–17ನೇ ಸಾಲಿನಲ್ಲಿ ಕೆಳಗೆ ನೀಡಿರುವ ವಿವರದಂತೆ ಕೇವಲ 10 ಜಿಲ್ಲೆಗಳು ಮಾತ್ರ ಅಡ್‌ಹಾಕ್ ಸಮಿತಿ ಸಭೆಗಳನ್ನು ನಡೆಸಿದ್ದು, ಉಳಿದ 19 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅಡ್‌ಹಾಕ್ ಸಮಿತಿ ಸಭೆಗಳು ನಡೆದಿರುವುದಿಲ್ಲ. ವಿವರ ಈ ಕೆಳಕಂಡಂತಿವೆ.

| ಕ್ರ. ಸಂ. | ಜಿಲ್ಲೆಯ ಹೆಸರು | ಪ್ರಸ್ತುತ ಲೆಕ್ಕ ತನಿಖಾ ವರ್ಷದಲ್ಲಿ ಜರುಗಿದ ಅಡ್ ಹಾಕ್ ಸಮಿತಿಗಳ ಸಂಖ್ಯೆ |
|---|---|---|
| 1 | 2 | 3 |
| 1 | ಬಾಗಲಕೋಟೆ | 3 |
| 2 | ಚಿಕ್ಕಮಗಳೂರು | 4 |
| 3 | ದಕ್ಷಿಣಕನ್ನಡ | 41 |
| 4 | ಗದಗ | 4 |
| 5 | ಹಾಸನ | 2 |
| 6 | ಹಾವೇರಿ | 2 |
| 7 | ಮಂಡ್ಯ | 4 |
| 8 | ತುಮಕೂರು | 11 |
| 9 | ಉಡುಪಿ | 10 |
| 10 | ಉತ್ತರಕನ್ನಡ | 6 |
| ಒಟ್ಟು | | 87 |

ಅಡ್‌ಹಾಕ್ ಸಮಿತಿ ಸಭೆಗಳಲ್ಲಿ ತೀರುವಳಿ ಮಾಡಲಾದ ಮೌಲಿಕ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತದ ವಿವರಗಳು ಈ ಕೆಳಗಿನಂತಿದೆ;

(ಲಕ್ಷಗಳಲ್ಲಿ)

| –ಪ್ರಸ್ತುತ ವರ್ಷದಲ್ಲಿ ಜರುಗಿದ ಅಡ್‌ಹಾಕ್ ಸಮಿತಿ ಸಭೆಗಳ ಸಂಖ್ಯೆ | ಲೆಕ್ಕಪರಿಶೋಧನಾ ಕಂಡಿಕೆಗಳ ತೀರುವಳಿ | | ತೀರುವಳಿಯಾದ ಮೊತ್ತ | |
|---|---|---|---|---|
| | ಆಕ್ಷೇಪಣೆ | ವಸೂಲಾತಿ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
| 87 | 2983 | 779 | 2045.48 | 105.59 |

ಮೇಲ್ಕಾಣಿಸಿದ ತೀರುವಳಿ ವಿವರಗಳನ್ನು ಗಮನಿಸಲಾಗಿ, ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿಯ ತೀರುವಳಿ ಪ್ರಗತಿಯು ತೃಪ್ತಿದಾಯಕವಾಗಿರುವುದಿಲ್ಲ. ಜಿಲ್ಲಾವಾರು ವಿವರವನ್ನು **ಅನುಬಂಧ–17ರಲ್ಲಿ** ಹಾಗೂ ಗ್ರಾಮ ಪಂಚಾಯತಿವಾರು ವಿವರಗಳನ್ನು **ಅನುಬಂಧ–17ಎ ರಲ್ಲಿ** ನೀಡಲಾಗಿದೆ.

ಅಡ್‌ಹಾಕ್ ಸಮಿತಿ ಸಭೆಗಳು ಕ್ರಮಬದ್ಧವಾಗಿ ನಡೆದಲ್ಲಿ ಲೆಕ್ಕಪರಿಶೋಧನಾ ವರದಿಗಳು/ ಕಂಡಿಕೆಗಳು ಆಗಿಂದಾಗ್ಗೆ ಪರಿಶೀಲನೆಗೆ ಒಳಪಡುವುದರಿಂದ ದುರುಪಯೋಗದ ಪ್ರಕರಣಗಳು, ಸರ್ಕಾರಕ್ಕೆ ಪಾವತಿಸದಿರುವ ಶುಲ್ಕಗಳು ಇತ್ಯಾದಿಗಳಿಗೆ ಸಂಬಂಧಿಸಿದ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳು ಸಕಾಲದಲ್ಲಿ ತೀರುವಳಿಯಾಗುವುದರೊಂದಿಗೆ ಅಂತಹ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಾಗುವುದೆಂದು ಮತ್ತು ಈ ಬಗ್ಗೆ ಕಟ್ಟುನಿಟ್ಟಿನ ನಿರ್ದೇಶನದ ಅವಶ್ಯಕತೆ ಇರುತ್ತದೆ ಎಂದು ಲೆಕ್ಕಪರಿಶೋಧನೆಯು ಅಭಿಪ್ರಾಯಪಡುತ್ತದೆ.

### 3.13 ಪಂಚಾಯತಿ ಜಮಾಬಂಧಿ 1058 ಗ್ರಾಮ ಪಂಚಾಯಿತಿಗಳಲ್ಲಿ ನಡೆಸಿರುವುದಿಲ್ಲ.

ಗ್ರಾಮ ಪಂಚಾಯತಿಗಳು ನಿರ್ವಹಿಸಿದ ಲೆಕ್ಕಗಳು ಮತ್ತು ರಿಜಿಸ್ಟರುಗಳ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳ ವಾರ್ಷಿಕ ತನಿಖೆಗಾಗಿ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು 2004ನ್ನು ಹೊರಡಿಸಿದೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಜನತೆಯ ಪಾಲ್ಗೊಳ್ಳುವಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಪ್ರೋತ್ಸಾಹಿಸುವುದು, ಪಾರದರ್ಶಕತೆ ಖಚಿತಪಡಿಸುವುದು ಮತ್ತು ನಾಗರಿಕರಿಗೆ ಮಾಹಿತಿ ದೊರಕುವಂತೆ ಮಾಡುವುದು, ಸಾರ್ವಜನಿಕ ಕುಂದುಕೊರತೆ ಪರಿಹಾರ ಹಾಗೂ ಗ್ರಾಮ ಪಂಚಾಯತಿಗಳ ಸ್ಪಂದನಶೀಲ ಆಡಳಿತವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕೆ ಅವಶ್ಯವೆಂದು ಕಂಡುಬರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಪಂಚಾಯತ್ ಜಮಾಬಂದಿಯ ಉದ್ದೇಶವಾಗಿರುತ್ತದೆ. ಪ್ರತಿ ವರ್ಷದ ಆಗಸ್ಟ್ 16 ರಿಂದ ಸೆಪ್ಟೆಂಬರ್ 15ನೇ ದಿನಾಂಕದೊಳಗಿನ ಅವಧಿಯಲ್ಲಿ ಪಂಚಾಯತ್ ಜಮಾಬಂದಿಯನ್ನು ನಡೆಸಬೇಕಾಗುತ್ತದೆ. ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ನಿರ್ವಹಿಸಲು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರತಿ ವರ್ಷ ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡವನ್ನು ರಚಿಸಬೇಕಾಗಿರುತ್ತದೆ. ಸದರಿ ತಂಡವು ಒಬ್ಬ ತಾಲ್ಲೂಕು ಮಟ್ಟದ ಅಧಿಕಾರಿಯನ್ನು ಮುಖ್ಯಸ್ಥನನ್ನಾಗಿ ಮತ್ತು ಇಬ್ಬರು ಅಧಿಕಾರಿಗಳ ಸಹಾಯ ಹೊಂದಿರುತ್ತದೆ.

ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು–2004ರ ನಿಯಮ 8 ರಲ್ಲಿ ಸೂಚಿಸಿರುವಂತೆ ಲೆಕ್ಕಪರಿಶೋಧನಾ ವರದಿಗಳು ಹಾಗೂ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಅನುಸರಣೆಗಳನ್ನು ಪರಿಶೀಲಿಸುವುದು ಪಂಚಾಯತ್ ಜಮಾಬಂದಿ

ನಿರ್ವಹಣಾಧಿಕಾರಿಯ, ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ. 2016–17ನೇ ಸಾಲಿನಲ್ಲಿ ಅಸ್ತಿತ್ವದಲ್ಲಿರುವ 5461 ಗ್ರಾಮ ಪಂಚಾಯತಿಗಳ ಪೈಕಿ 3569 ಗ್ರಾಮ ಪಂಚಾಯತಿಗಳಲ್ಲಿ ಜಮಾಬಂದಿ ನಡೆಸಲಾಗಿದ್ದು ಉಳಿದ 1058 ಗ್ರಾಮ ಪಂಚಾಯತಿಗಳಲ್ಲಿ ಜಮಾಬಂದಿ ನಡೆದಿರುವುದಿಲ್ಲ. ಜಿಲ್ಲಾವಾರು ವಿವರ **ಅನುಬಂಧ–18ರಲ್ಲಿ** ಹಾಗೂ ಗ್ರಾಮ ಪಂಚಾಯತಿವಾರು ವಿವರಗಳನ್ನು **ಅನುಬಂಧ–18ಎ ರಲ್ಲಿ** ನೀಡಲಾಗಿದೆ.

**ಪಂಚಾಯತ್ ಜಮಾಬಂದಿ ನಿರ್ವಹಣಾ ಅವಧಿಯಲ್ಲಿ ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿಯು ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಬೇಕಾಗಿರುತ್ತದೆ.**

ಲೆಕ್ಕಪುಸ್ತಕಗಳು, ರಿಜಿಸ್ಟರುಗಳು ಮತ್ತು ದಾಖಲೆಗಳು, ವೆಚ್ಚದ ಇತರ ಬಾಬ್ತುಗಳಾದಂತಹ ವೇತನ, ನೀರು ಪೂರೈಕೆ ಕಾರ್ಯಗಳಿಗೆ ಮಾಡಿದ ದುರಸ್ತಿ ಮತ್ತು ವಿದ್ಯುತ್ ಬಿಲ್ಲುಗಳೂ ಸೇರಿದಂತೆ ಎಲ್ಲಾ ದಾಖಲೆಗಳು ಮತ್ತು ವೋಚರುಗಳನ್ನು ಪರಿಶೀಲಿಸುವುದು.

1. ಲೆಕ್ಕಪರಿಶೋಧನಾ ವರದಿಗಳು ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಕಾಣಿಸಲಾದ ಆಕ್ಷೇಪಣೆಗಳಿಗೆ ಅನುಸರಣೆಗಳನ್ನು ಪರೀಕ್ಷಿಸುವುದು.
2. ಹಣಕಾಸು ಅಕ್ರಮಗಳ ಮತ್ತು ಆಪಾದನೆಗಳ ಕುರಿತು ವಿಚಾರಣೆ ಮಾಡುವುದು.
3. ಮಾಸಿಕ ಲೆಕ್ಕಪತ್ರ ತಃಖ್ತೆ ಪರೀಕ್ಷಿಸುವುದು.
4. ನಿಯತಕಾಲಿಕ ಸಲ್ಲಿಕೆಗಳನ್ನು ಸಕಾಲದಲ್ಲಿ ಸಲ್ಲಿಸಿರುವುದನ್ನು ಪರೀಕ್ಷಿಸುವುದು.

ಪಂಚಾಯತಿಯ ಜಮಾಬಂದಿ ನಿರ್ವಹಿಸಿದ ನಂತರ ಪಂಚಾಯತಿ ಜಮಾಬಂದಿ ನಿರ್ವಹಣಾ ಅಧಿಕಾರಿಯು ಎರಡು ಕೆಲಸದ ದಿನಗಳ ಅವಧಿಯೊಳಗೆ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಯಾವುದೇ ಋಣಾತ್ಮಕ ಅಂಶಗಳು, ಅಕ್ರಮಗಳು ಮತ್ತು ಹಣಕಾಸು ದುರುಪಯೋಗಗಳನ್ನು ಗುರುತಿಸಿ ಗ್ರಾಮ ಪಂಚಾಯತಿ ಕಾರ್ಯದ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನೊಳಗೊಂಡ ವಿವರವಾದ ವರದಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಪಂಚಾಯತಿ ಜಮಾಬಂದಿಯ ಕಾರ್ಯ ಸಾರಾಂಶವನ್ನು ಸಿದ್ದಪಡಿಸತಕ್ಕದ್ದು.

ಜಮಾಬಂದಿ ಅಧಿಕಾರಿ ಮತ್ತು ಅವರ ಸಹಾಯಕ ಅಧಿಕಾರಿಗಳ ತಂಡ ಮೇಲ್ಕಂಡ ಅಂಶಗಳ ಬಗ್ಗೆ, ಕೂಲಂಕುಷವಾಗಿ ಪರಿಶೀಲಿಸಿ ವರದಿ ನೀಡಿದಲ್ಲಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಹಣ ದುರುಪಯೋಗದ ಮೊತ್ತಗಳ ವಸೂಲಿ, ಮಾಸಿಕ/ವಾರ್ಷಿಕ ಲೆಕ್ಕಪತ್ರಗಳ ಸಮರ್ಪಕ ನಿರ್ವಹಣೆ ಹಾಗೂ ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಗಳನ್ನು ಸಲ್ಲಿಸುವುದು ಇತ್ಯಾದಿ ಕ್ರಮಗಳ ಅನುಸರಣೆಯಿಂದ ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಸುಧಾರಣೆ ತರಬಹುದಾಗಿರುತ್ತದೆ. ಅಲ್ಲದೇ ಇದರಿಂದ ಲೆಕ್ಕಪರಿಶೋಧನೆಯ ಉದ್ದೇಶವೂ ಸಹ ಸಫಲವಾಗುತ್ತದೆ. ಆದರೆ ಈ ವರದಿಯ ಕಂಡಿಕೆ ಸಂಖ್ಯೆ 2.7ರಲ್ಲಿ ವಿವರಿಸಿರುವಂತೆ, ಗ್ರಾಮ ಪಂಚಾಯಿತಿಗಳು ತಮ್ಮ

ಮಾಸಿಕ/ಅರ್ಧವಾರ್ಷಿಕ/ವಾರ್ಷಿಕ ಲೆಕ್ಕಪತ್ರಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಅನುಮೋದನೆ ಪಡೆದುಕೊಂಡು ನಿಗದಿತ ಸಮಯದಲ್ಲಿ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಗಳಿಗೆ ಸಲ್ಲಿಸದೇ ಇರುವುದರಿಂದ ಗ್ರಾಮ ಪಂಚಾಯಿತಿಯ ಸಂಪನ್ಮೂಲ ಸಂಗ್ರಹಣೆಯಲ್ಲಿನ ಲೋಪದೋಷ ಮತ್ತು ದುರುಪಯೋಗ ಪ್ರಕರಣಗಳು, ಅಭಿವೃದ್ಧಿ ಕಾರ್ಯಗಳ ವೆಚ್ಚದ ಪ್ರಗತಿ ಹಾಗೂ ಲೆಕ್ಕಪತ್ರ ನಿರ್ವಹಣೆಗಳಲ್ಲಿರುವ ನ್ಯೂನ್ಯತೆಗಳ ಬಗ್ಗೆ ಸಕಾಲದಲ್ಲಿ ಗ್ರಾಮ ಪಂಚಾಯಿತಿಗಳ ಗಮನಕ್ಕೆ ತರಲು ಸಾಧ್ಯವಾಗಿರುವುದಿಲ್ಲ. ಜಮಾಬಂದಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸದೇ ಇರುವುದರಿಂದ ಈ ನ್ಯೂನ್ಯತೆಗಳು ಮರುಕಳಿಸುತ್ತಿದ್ದು, ಜಮಾಬಂದಿಯನ್ನು ನಿಯಮಾನುಸಾರ ಪರಿಣಾಮಕಾರಿಯಾಗಿ ನಿರ್ವಹಿಸುವುದು ಅಗತ್ಯವಾಗಿರುತ್ತದೆ.

### 3.14 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 (KTPP) ಉಲ್ಲಂಘನೆ ಪ್ರಕರಣಗಳಲ್ಲಿ ಆಕ್ಷೇಪಿತ ಮೊತ್ತ ರೂ2420.56 ಲಕ್ಷ ಹಾಗೂ ವಸೂಲಾತಿಗೆ ಸೂಚಿಸಿದ ಮೊತ್ತ ರೂ.11.32ಲಕ್ಷ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಇಇ) (ii) ರಲ್ಲಿ ಗ್ರಾಮ ಪಂಚಾಯತಿಯು 1.00ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಇತರೆ ಎಲ್ಲಾ ಸಂಗ್ರಹಣೆಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದ ಅನುಸಾರ ಕಡ್ಡಾಯವಾಗಿ ಟೆಂಡರ್ ಪ್ರಕ್ರಿಯೆ ಪಾಲಿಸಬೇಕಾಗಿರುತ್ತದೆ. 5.00ಲಕ್ಷ ಮೀರಿದ ಪ್ರಕರಣಗಳಲ್ಲಿ ವಿದ್ಯುನ್ಮಾನ ವೇದಿಕೆ (e-Procurement Platform) ಬಳಸಿ ಟೆಂಡರ್ ಕರೆಯಬೇಕಾಗುತ್ತದೆ. ಆದರೆ 2016–17ನೇ ಸಾಲಿನಲ್ಲಿ 13 ಜಿಲ್ಲೆಗಳಲ್ಲಿನ 529 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 (KTPP) ಪಾಲಿಸದಿರುವುದು ಕಂಡುಬಂದಿರುತ್ತದೆ. ಬೀದಿ ದೀಪ ಖರೀದಿಯಲ್ಲಿ ಟೆಂಡರ್ ಕರೆಯದೇ ಇರುವುದು, ನೀರು ಸರಬರಾಜು ಸಾಮಗ್ರಿಗಳ ಖರೀದಿಯಲ್ಲಿ ಟೆಂಡರ್ ಕರೆಯದೇ ಇರುವುದು ಹಾಗೂ ಕೊಟೇಶನ್‌ಗಳನ್ನು ಕರೆಯದೇ ಇರುವುದು, ಕೊಟೇಶನ್‌ಗಳಿಗೆ ಸಹಿ ಇಲ್ಲದೇ ಇರುವುದು ಇತ್ಯಾದಿ ನ್ಯೂನ್ಯತೆಗಳಿರುವುದು ಕಂಡುಬಂದಿದ್ದು ನಮೂನೆ 15ಎ ಅಡಿ ಬರುವ ಗಂಭೀರ ಪ್ರಕರಣಗಳಂತೆ ರೂ.**2420.56** ಲಕ್ಷಗಳನ್ನು ಆಕ್ಷೇಪಿಸಿ ಹಾಗೂ ರೂ.**11.32** ಲಕ್ಷಗಳನ್ನು ವಸೂಲಾತಿಗೆ ವರದಿಗಳಲ್ಲಿ ಸೂಚಿಸಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.14ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 17 | 17 | 121.07 | 0.06 |
| 2 | ಬಾಗಲಕೋಟ | 159 | 159 | 470.88 | 10.56 |
| 3 | ಬೆಳಗಾವಿ | 74 | 74 | 59.51 | 0.00 |
| 4 | ಬೀದರ್ | 5 | 5 | 2.34 | 0.00 |
| 5 | ಚಾಮರಾಜನಗರ | 6 | 6 | 20.59 | 0.00 |
| 6 | ದಾವಣಗೆರೆ | 144 | 144 | 1359.91 | 0.49 |
| 7 | ಧಾರವಾಡ | 12 | 12 | 34.71 | 0 |
| 8 | ಗದಗ | 29 | 29 | 117.69 | 0.00 |
| 9 | ಹಾವೇರಿ | 8 | 8 | 35.91 | 0.00 |
| 10 | ಕೊಡುಗು | 10 | 10 | 5.47 | 0.00 |
| 11 | ಮೈಸೂರು | 19 | 19 | 104.83 | 0.00 |
| 12 | ಶಿವಮೊಗ್ಗ | 36 | 36 | 70.09 | 0.20 |
| 13 | ತುಮಕೂರು | 10 | 10 | 17.56 | 0.01 |
| | ಒಟ್ಟು | 529 | 529 | 2420.56 | 11.32 |
| ಒಟ್ಟು ಮೊತ್ತ (ಆಕ್ಷೆಪಣೆ+ವಸೂಲಾತಿ) | | | | 2431.88 | |

## 3.15 ಸ್ವಂತಕ್ಕೆ ಚೆಕ್‌ನ ಮೇಲೆ ಹಣ ಡ್ರಾ ಮಾಡಿರುವ ಪ್ರಕರಣಗಳಲ್ಲಿ ಆಕ್ಷೇಪಿತ ಮೊತ್ತ ರೂ.30.43 ಲಕ್ಷ ಹಾಗೂ ವಸೂಲಾತಿಗೆ ಸೂಚಿಸಿದ ಮೊತ್ತ ರೂ.13.14 ಲಕ್ಷ.

ಸರ್ಕಾರದ ಸುತ್ತೋಲೆ ಸಂಖ್ಯೆ:RDP 23/AFN/(2) 200 ದಿನಾಂಕ:14/06/2000 ರಂತೆ ಸ್ವಂತಕ್ಕಾಗಿ ಎಂಬುದಾಗಿ ನಮೂದಿಸಿ (Self Cheques) ಯಾವುದೇ ಧನಾದೇಶಗಳನ್ನು ಡ್ರಾ ಮಾಡಕೂಡದೆಂದು ಹಾಗೂ ಧನಾದೇಶಗಳನ್ನು ಕಡ್ಡಾಯವಾಗಿ ವ್ಯಕ್ತಿ, ಕಂಪನಿ, ಸಂಸ್ಥೆ, ನಿಗಮ ಇವರ ಹೆಸರಿಗೆ ಮಾತ್ರ ನೀಡಬಹುದಾಗಿದೆ ಎಂದು ಸೂಚನೆಯನ್ನು ಹೊರಡಿಸಲಾಗಿದೆ. ಆದರೆ 6 ಜಿಲ್ಲೆಗಳಲ್ಲಿನ 68 ಗ್ರಾಮಪಂಚಾಯಿತಿಗಳ 68 ಪ್ರಕರಣಗಳಲ್ಲಿ, ವಿವಿಧ ಯೋಜನೆಗಳಲ್ಲಿನ ಖರೀದಿ/ಕಾಮಗಾರಿ ವೆಚ್ಚಗಳಿಗೆಂದು ಸ್ವಂತ ಹೆಸರಿನ ಮೇಲೆ ಚೆಕ್‌ನ ಹಣ ಡ್ರಾ ಮಾಡಿ ವಿವರವನ್ನು ಪರಿಶೀಲನೆಗೆ ನೀಡಿಲ್ಲದಿರುವುದು ಕಂಡುಬಂದಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.15ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|

| 1 | 2 | 3 | 4 | 5 | 6 |
|---|---|---|---|---|---|
| 1 | ಬೆಂಗಳೂರು | 4 | 4 | 3.73 | 0.00 |
| 2 | ಬೆಳಗಾವಿ | 2 | 2 | 0.85 | 1.41 |
| 3 | ಬೀದರ್ | 1 | 1 | 0.12 | 0.00 |
| 4 | ದಾವಣಗೆರೆ | 23 | 23 | 1.32 | 7.90 |
| 5 | ಗದಗ | 1 | 1 | 0.53 | 0.00 |
| 6 | ಶಿವಮೊಗ್ಗ | 37 | 37 | 23.88 | 3.83 |
| | ಒಟ್ಟು | 68 | 68 | 30.43 | 13.14 |
| ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ) | | | | 43.57 | |

### 3.16 ತಾಂತ್ರಿಕ ಮಂಜೂರಾತಿ ಪಡೆಯದೆ ಕಾಮಗಾರಿ ನಿರ್ವಹಿಸಿರುವುದು ಒಟ್ಟು ಮೊತ್ತ ರೂ.46.82 ಲಕ್ಷಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006, ನಿಯಮ 77 (ii) ಮತ್ತು (iv) ರ ಪ್ರಕಾರ ಒಂದು ಕಾಮಗಾರಿಗೆ ತಯಾರಿಸಲ್ಪಟ್ಟ ಅಂದಾಜು ತಾಂತ್ರಿಕವಾಗಿ ವಾಸ್ತವಿಕವಾಗಿ ತಯಾರಿಸಲ್ಪಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದು. ಆದರೆ, 5 ಜಿಲ್ಲೆಗಳ 7 ಗ್ರಾಮ ಪಂಚಾಯತಿಗಳಲ್ಲಿ ಅಂದಾಜು ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಪಡೆಯದೆ ಕಾಮಗಾರಿ ನಿರ್ವಹಿಸಿರುವುದು ಕಂಡು ಬಂದಿರುತ್ತದೆ. ಇದರ ಒಟ್ಟು ಆಕ್ಷೇಪಿತ ಮೊತ್ತ ರೂ.**46.59** ಲಕ್ಷ ಹಾಗೂ ವಸೂಲಾತಿ ಮೊತ್ತ ರೂ.**0.23** ಲಕ್ಷ. ವಿವರಗಳು ಈ ಕೆಳಕಂಡಂತಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.16ರಲ್ಲಿ ನೀಡಲಾಗಿದೆ.

**(ರೂ.ಲಕ್ಷಗಳಲ್ಲಿ)**

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಪ್ರಕರಣಗಳ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 1 | 1 | 0.45 | 0.00 |
| 2 | ಬೆಳಗಾವಿ | 2 | 2 | 12.04 | 0.00 |
| 3 | ಚಿಕ್ಕಮಗಳೂರು | 2 | 2 | 31.83 | 0.23 |
| 4 | ಗದಗ | 1 | 1 | 0.52 | 0.00 |
| 5 | ಶಿವಮೊಗ್ಗ | 1 | 1 | 1.75 | 0.00 |
| ಒಟ್ಟು | | 7 | 7 | 46.59 | 0.23 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 46.82 | |

### 3.17 ನಿಯಮ ಬಾಹಿರ ವೆಚ್ಚ ಭರಿಸಿರುವುದು

9 ಜಿಲ್ಲೆಗಳ 25 ಗ್ರಾಮ ಪಂಚಾಯತಿಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಅಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 68, 69, 70 ಹಾಗೂ ಕೆ.ಎಫ್.ಸಿ. 1958ರ ಅನುಚ್ಛೇದ 14, 128, 164, 169 ಹಾಗೂ ಕೆ.ಟಿ.ಪಿ.ಪಿ. ನಿಯಮ 1999

ಮತ್ತು 2000 ಉಲ್ಲಂಘಿಸಿ ಕಾಮಗಾರಿಗೆ ಮತ್ತು ಸಾಮಗ್ರಿ ಖರೀದಿಗೆ ಹಣ ಸಂದಾಯ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದೆ. ಇದರ ಒಟ್ಟು ಮೊತ್ತ ರೂ.**115.95** ಲಕ್ಷಗಳಾಗಿದ್ದು, ರೂ.**100.34** ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.**15.61** ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.17ರಲ್ಲಿ ನೀಡಲಾಗಿದೆ.

**(ರೂ.ಲಕ್ಷಗಳಲ್ಲಿ)**

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 3 | 4 | 32.86 | 0.00 |
| 2 | ಬೆಳಗಾವಿ | 3 | 3 | 4.40 | 0.84 |
| 3 | ಬೀದರ್ | 1 | 1 | 0.40 | 0.00 |
| 4 | ಚಾಮರಾಜನಗರ | 1 | 1 | 0.20 | 0.00 |
| 5 | ಚಿಕ್ಕಮಗಳೂರು | 1 | 1 | 59.03 | 0 |
| 6 | ದಾವಣಗೆರೆ | 7 | 7 | 0.15 | 10.71 |
| 7 | ಧಾರವಾಡ | 2 | 2 | 0.90 | 0.00 |
| 8 | ಕೊಡುಗು | 3 | 3 | 1.76 | 4.00 |
| 9 | ತುಮಕೂರು | 3 | 3 | 0.64 | 0.06 |
| **ಒಟ್ಟು ಮೊತ್ತ** | | **25** | **25** | **100.34** | **15.61** |
| **ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)** | | | | **115.95** | |

**3.18 ಕಾಮಗಾರಿಗಳ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸದೆ ಮತ್ತು ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡೆಸದೇ ಇರುವ ಪ್ರಕರಣಗಳ ಮೊತ್ತ ರೂ. 35.27ಲಕ್ಷ.**

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006, ನಿಯಮಗಳು 85 ಮತ್ತು 85(10) (11)ರ ಪ್ರಕಾರ ಅಳತೆಗಳನ್ನು ನಮೂನೆ–37ರಲ್ಲಿ ನಿಗದಿ ಪಡಿಸಿದ ಅಳತೆ ಪುಸ್ತಕದಲ್ಲಿ ದಾಖಲಿಸತಕ್ಕದ್ದು ಹಾಗೂ ಹಣ ಸಂದಾಯ ಮಾಡಬೇಕಾದ ಪ್ರತಿಯೊಂದು ಅಳತೆಯ ಕೊನೆಯ ಭಾಗದಲ್ಲಿ ಗುತ್ತಿಗೆದಾರನಿಂದ ಸ್ವೀಕೃತಿ ಪಡೆದುಕೊಳ್ಳತಕ್ಕದ್ದು ಮತ್ತು ಅಳತೆ ಪುಸ್ತಕದಲ್ಲಿ ಅಳತೆಯನ್ನು ನಮೂದಿಸುವ ಮೊದಲು ಕಾಮಗಾರಿ, ಗುತ್ತಿಗೆದಾರನ ವಿವರವನ್ನು ದಾಖಲಿಸತಕ್ಕದ್ದು. ಆದರೆ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಯೋಜನೆಗಳ ಕಾಮಗಾರಿಗಳ ಅನುಷ್ಠಾನದಲ್ಲಿ 6 ಜಿಲ್ಲೆಯ 14 ಗ್ರಾಮ ಪಂಚಾಯಿತಿಗಳ 14 ಪ್ರಕರಣಗಳಲ್ಲಿ ಒಟ್ಟು ಆಕ್ಷೇಪಿತ ಮೊತ್ತ ರೂ.35.27ಲಕ್ಷಗಳಿಗೆ ಕಾಮಗಾರಿ ಅಳತೆ ಮತ್ತು ಬಿಲ್ಲುಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸದೆ ಹಣ ಪಾವತಿಸಿದ್ದು ಮತ್ತು ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡೆಸದೇ ಇರುವುದು 2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ಕುರಿತು ವಿವರ ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.18ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ |
|---|---|---|---|---|
| 1 | ಬೆಳಗಾವಿ | 2 | 2 | 7.58 |
| 2 | ಚಾಮರಾಜನಗರ | 2 | 2 | 2.51 |
| 3 | ಚಿಕ್ಕಮಗಳೂರು | 3 | 3 | 5.44 |
| 4 | ಹಾಸನ | 2 | 2 | 10.06 |
| 5 | ಕೊಡುಗು | 1 | 1 | 0.40 |
| 6 | ಶಿವಮೊಗ್ಗ | 4 | 4 | 9.29 |
| | **ಒಟ್ಟು** | **14** | **14** | **35.27** |
| **ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)** | | | | **35.27** |

## 3.19 ಕಾಮಗಾರಿ ಅಳತೆಗಳನ್ನು ಇಲಾಖೆಯ ಅಭಿಯಂತರರಿಂದ ಪರಿಶೀಲನೆ ಮಾಡಿಸದೇ ಇರುವ (Check Measurement) ಮೊತ್ತ ರೂ 202.04ಲಕ್ಷಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) 2006ರ ನಿಯಮ 86ರಂತೆ ಕಾಮಗಾರಿಯ ಅಂದಾಜು ಮೊತ್ತ ರೂ.25000ಕ್ಕಿಂತ ಕಡಿಮೆ ಇದ್ದಲ್ಲಿ ಗ್ರಾಮ ಪಂಚಾಯಿತಿ ಇಂಜಿನಿಯರ್ ಮತ್ತು ಅಧ್ಯಕ್ಷರು, ಕಾಮಗಾರಿಯ ಅಂದಾಜು ಮೊತ್ತ ರೂ. 25000 ಮೀರಿದ್ದಲ್ಲಿ, ಕಾಮಗಾರಿ ಅಳತೆಯನ್ನು ಅಧ್ಯಕ್ಷರು ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿಯ ಅಂದಾಜು ಮೊತ್ತ ರೂ.4 ಲಕ್ಷಗಳಗಿಂತ ಮೀರಿದ್ದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರು ಜಂಟಿಯಾಗಿ ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ಅಳತೆ ಪರಶೀಲಿಸಿದ ಬಗ್ಗೆ ಧೃಡೀಕರಿಸಬೇಕಾಗಿರುತ್ತದೆ. ವಿವಿಧ ಯೋಜನೆಗಳಲ್ಲಿನ ಕಾಮಗಾರಿ ಅಳತೆಗಳನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಇಂಜಿನಿಯರ್/ಸಹಾಯಕ ಕಾರ್ಯಪಾಲಕರ ಅಭಿಯಂತರ/ ಕಾರ್ಯಪಾಲಕರ ಅಭಿಯಂತರರಿಂದ ಪರಿಶೀಲನೆ (Check Measurement) ಮಾಡಿಸದೇ ಇರುವುದು ಕಂಡುಬಂದಿರುತ್ತದೆ. ಕೆಳಕಂಡ 6 ಜಿಲ್ಲೆಗಳಲ್ಲಿನ 60 ಗ್ರಾಮ ಪಂಚಾಯಿತಿಗಳಲ್ಲಿ ರೂ.**198.19**ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದೆ. ಹಾಗೂ ರೂ.**3.85**ಲಕ್ಷಗಳು ವಸೂಲಾತಿಗೆ ಸೂಚಿಸಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 3.19ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಪ್ರಕರಣಗಳ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | ಬೆಳಗಾವಿ | 27 | 27 | 118.88 | 2.69 |
| 2 | ದಾವಣಗೆರೆ | 1 | 1 | 13.08 | 0.00 |

| | | | | | |
|---|---|---|---|---|---|
| 3 | ಕೊಡಗು | 1 | 1 | 7.46 | 0.00 |
| 4 | ಮೈಸೂರು | 10 | 10 | 32.21 | 1.16 |
| 5 | ಶಿವಮೊಗ್ಗ | 20 | 20 | 25.67 | 0.00 |
| 6 | ತುಮಕೂರು | 1 | 1 | 0.89 | 0.00 |
| **ಒಟ್ಟು** | | **60** | **60** | **198.19** | **3.85** |
| **ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)** | | | | **202.04** | |

## 3.20 ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಳ್ಳದೇ ಸಾಮಗ್ರಿ/ಇತರೆ ಬಿಲ್ಲಿನ ಮೊತ್ತ ಪಾವತಿಸಿರುವುದು.

3 ಜಿಲ್ಲೆಗಳ 25 ಗ್ರಾಮ ಪಂಚಾಯತಿಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗದೆ ಸಾಮಗ್ರಿ/ವಿವಿಧ ಬಿಲ್ಲಿನ ಒಟ್ಟು ಮೊತ್ತ ರೂ.**17.27**ಲಕ್ಷಗಳನ್ನು ಪಾವತಿಸಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಇದರಲ್ಲಿ ರೂ.**17.27**ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 3.20ರಲ್ಲಿ ನೀಡಲಾಗಿದೆ.

| | | | | (ರೂ. ಲಕ್ಷಗಳಲ್ಲಿ) |
|---|---|---|---|---|
| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಪ್ರಕರಣಗಳ ಸಂಖ್ಯೆ | ಆಕ್ಷೇಪಣೆ ಮೊತ್ತ |
| 1 | 2 | 3 | 4 | 5 |
| 1 | ಬೆಳಗಾವಿ | 1 | 1 | **0.83** |
| 2 | ಕೊಡಗು | 23 | 23 | **13.98** |
| 3 | ಮೈಸೂರು | 1 | 1 | 2.46 |
| **ಒಟ್ಟು** | | 25 | 25 | **17.27** |
| **ಒಟ್ಟು ಮೊತ್ತ** | | | | **17.27** |

## 3.21 ಮೋಟಾರ್ ರೀವೈಂಡಿಂಗ್ ಕಾಮಗಾರಿಯಲ್ಲಿ ಹಳೇ ಸಾಮಗ್ರಿ ಮೌಲ್ಯ ಶೇ.10 ರಷ್ಟನ್ನು ಬಿಲ್ಲುಗಳಲ್ಲಿ ಕಡಿತ ಮಾಡದೇ ಇರುವುದು.

ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಮೋಟಾರ್ ರೀವೈಂಡಿಂಗ್‌ಗಳನ್ನು ಮಾಡಿಸಿ ಬಿಲ್ಲುಗಳನ್ನು ಪಾವತಿಸಲಾಗಿದೆ. ಮೋಟಾರ್ ರೀವೈಂಡಿಂಗ್ ಕೆಲಸದಲ್ಲಿ ತಾಮ್ರದ ತಂತಿ ಹಾಗೂ ಇನ್ನಿತರೆ ಬಿಡಿ ಭಾಗಗಳ ಸಾಮಗ್ರಿ ಮೌಲ್ಯ ಶೇ.10ರಷ್ಟನ್ನು ಬಿಲ್ಲಿನಲ್ಲಿ ಕಡಿತ ಮಾಡಬೇಕಾಗಿಕಿರುತ್ತದೆ. ಆದರೆ ಅನುಬಂಧ-23ರಲ್ಲಿ ತೋರಿಸಲಾದ 5 ಜಿಲ್ಲೆಗಳ 74 ಪ್ರಕರಣಗಳಲ್ಲಿ ಶೇ.10ರಷ್ಟು ಮೌಲ್ಯವನ್ನು ಬಿಲ್ಲಿನಲ್ಲಿ ಕಡಿತ ಮಾಡಿರುವುದಿಲ್ಲ. ಇದರಿಂದಾಗಿ ಸರಕಾರಕ್ಕೆ ನಷ್ಟ ಉಂಟಾಗಿರುತ್ತದೆ. ಈ ಸಂಬಂದ ರೂ.32.00 ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.2.01 ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ನಿರ್ದಿಷ್ಟ ನ್ಯೂನ್ಯತೆಗಳನ್ನು ಆಯಾ ಸಂಸ್ಥೆಯ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಲಾಗಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.21ರಲ್ಲಿ ನೀಡಲಾಗಿದೆ.

| (ರೂ. ಲಕ್ಷಗಳಲ್ಲಿ) | | | | | |
|---|---|---|---|---|---|
| ಕ್ರ ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
| **1** | **2** | **3** | **4** | **5** | **6** |
| 1 | ಬೆಂಗಳೂರು | 1 | 1 | 0.00 | 0.07 |
| 2 | ಬೆಳಗಾವಿ | 1 | 1 | 0.50 | 0.00 |
| 3 | ಚಾಮರಾಜನಗರ | 55 | 55 | 29.32 | 0.85 |
| 4 | ಗದಗ | 16 | 16 | 2.18 | 1.09 |
| 5 | ತುಮಕೂರು | 1 | 1 | 0.00 | 0.02 |
| **ಒಟ್ಟು** | | **74** | **74** | **32.00** | **2.01** |
| **ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)** | | | | **34.01** | |

## 3.22 ಸಾಮಗ್ರಿಗಳನ್ನು ಖರೀದಿಸಿ ದಾಸ್ತಾನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದು.

ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 164 (ಎ) ಪ್ರಕಾರ ದಾಸ್ತಾನು ಲೆಕ್ಕ ಹಾಗೂ ವಿತರಣೆ ದಾಖಲಾತಿಗಳನ್ನು ನಿರ್ವಹಿಸಬೇಕಾಗಿರುತ್ತದೆ.ಹಾಗೂ ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ಅಧಿನಿಯಮ 68ರಲ್ಲಿ ಸೂಚಿಸಿರುವಂತೆ ಖರೀದಿಸಿರುವ ಚರಾಸ್ತಿಗಳ ವಿವರವನ್ನು ನಮೂನೆ 28ರ ಖರೀದಿ ಪುಸ್ತಕದಲ್ಲಿ ನಮೂದಿಸಬೇಕು ಹಾಗೂ ನಮೂದಿಸಲಾದ ಪರಿಮಾಣವನ್ನು ನಮೂನೆ 29ರಲ್ಲಿನ ಚರಾಸ್ತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕಾಗಿರುತ್ತದೆ. ಆದರೆ 9 ಜಿಲ್ಲೆಗಳಲ್ಲಿನ 119 ಗ್ರಾಮ ಪಂಚಾಯತಿಗಳ 119 ಪ್ರಕರಣಗಳಲ್ಲಿ ಖರೀದಿಸಿದ ಸಾಮಾಗ್ರಿಗಳನ್ನು ದಾಸ್ತಾನು ವಹಿಗೆ ದಾಖಲಿಸದಿರುವುದು, ಬೀದಿ ದೀಪದ ಸಾಮಾಗ್ರಿಗಳನ್ನು ದಾಸ್ತಾನು ತೆಗೆದುಕೊಂಡ ಬಗ್ಗೆ ವಿವರ ಒದಗಿಸದೇ ಇರುವುದು, ಖರೀದಿ ನಿಯಮ ಉಲ್ಲಂಘನೆ, ವಿದ್ಯುತ್ ಸಾಮಾಗ್ರಿಗಳನ್ನು ಖರೀದಿಸಿ ದಾಸ್ತಾನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದು ಹಾಗೂ ಖರೀದಿಸಿರುವ ಸಾಮಾಗ್ರಿಗಳ ಬಿಲ್ಲುಗಳಲ್ಲಿ ದರಪಟ್ಟಿ/ ತುಲನಾತ್ಮಕ ಪಟ್ಟಿ ಇಲ್ಲದಿರುವುದು ಲೆಕ್ಕ ಪರಿಶೋಧನೆ ವೇಳೆ ಕಂಡುಬಂದಿರುತ್ತದೆ. ಒಟ್ಟು ಮೊತ್ತ ರೂ327.32 ಲಕ್ಷಗಳು ಇದರಲ್ಲಿ 119 ಪ್ರಕರಣಗಳಲ್ಲಿ ರೂ.**326.53** ಲಕ್ಷಗಳನ್ನು ಅಕ್ಷೇಪಣೆಯಲ್ಲಿ ಹಾಗೂ ರೂ.0.78 ಲಕ್ಷಗಳನ್ನು ವಸೂಲಾತಿಗೆ ಸೂಚಿಸಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 3.22ರಲ್ಲಿ ನೀಡಲಾಗಿದೆ.

| (ರೂ. ಲಕ್ಷಗಳಲ್ಲಿ) | | | | | |
|---|---|---|---|---|---|
| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
| **1** | 2 | **3** | **4** | **5** | **6** |
| 1 | ಬೆಂಗಳೂರು | 8 | 8 | 3.76 | 0.02 |
| 2 | ಬೀದರ್ | 8 | 8 | 7.46 | 0.00 |
| 3 | ಚಿಕ್ಕಮಗಳೂರು | 1 | 1 | 9.04 | 0.00 |
| 4 | ಧಾರವಾಡ | 66 | 66 | 245.15 | 0.00 |

| | | | | | |
|---|---|---|---|---|---|
| 5 | ಗದಗ | 8 | 8 | 14.38 | 0.00 |
| 6 | ಹಾಸನ | 1 | 1 | 0.49 | 0.00 |
| 7 | ಮೈಸೂರು | 9 | 9 | 10.16 | 0.00 |
| 8 | ಶಿವಮೊಗ್ಗ | 8 | 8 | 8.29 | 0.00 |
| 9 | ತುಮಕೂರು | 10 | 10 | 27.81 | 0.76 |
| | **ಒಟ್ಟು** | **119** | **119** | **326.53** | **0.78** |
| **ಒಟ್ಟು ಮೊತ್ತ** | | | | **327.32** | |

### 3.23 ಗ್ರಾಮಪಂಚಾಯಿತಿಯ ವಿವಿಧ ಯೋಜನೆ/ನಿಧಿಗಳಿಂದ ಮುಂಗಡಗಳನ್ನು ಪಡೆದು ಹಣ ಹೊಂದಾಣಿಕೆ ಮಾಡದೇ ಇರುವುದು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 98ರಲ್ಲಿ ಸೂಚಿಸಿರುವಂತೆ ಗ್ರಾಮ ಪಂಚಾಯಿತಿಯ ವಿವಿಧ ಯೋಜನೆ/ನಿಧಿಗಳಿಂದ ಪಡೆದ ಮುಂಗಡಹಣಕ್ಕೆ 2 ಜಿಲ್ಲೆಗಳಲ್ಲಿನ 2 ಗ್ರಾಮಪಂಚಾಯಿತಿಗಳಲ್ಲಿ ಒಟ್ಟು ಒಟ್ಟು ರೂ.0.30ಲಕ್ಷಗಳು ಲೆಕ್ಕ ಹೊಂದಾಣಿಕೆ ಮಾಡದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 3.23ರಲ್ಲಿ ನೀಡಲಾಗಿದೆ.

### 3.24 ಗ್ರಾಮ ಪಂಚಾಯಿತಿಗಳಿಂದ ನೀಡಲಾದ ಮಳಿಗೆಗಳಿಗೆ ಬಾಡಿಗೆ ವಸೂಲಿ ಮಾಡದಿರುವುದು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 34ರಲ್ಲಿ ಸೂಚಿಸಿರುವಂತೆ ಸ್ವಂತ ಆದಾಯಗಳನ್ನು ಕ್ರೋಢೀಕರಿಸುವ ಕುರಿತು ರಿಜಿಸ್ಟರ್‌ನ್ನು ನಿರ್ವಹಿಸಿ ಆದಾಯ ಹೆಚ್ಚಿಸಲು ತಿಳಿಸಲಾಗಿದೆ. ಗ್ರಾಮಪಂಚಾಯಿತಿಗಳಿಂದ ನೀಡಲಾದ ಮಳಿಗೆಗಳಿಗೆ ಬಾಡಿಗೆಯನ್ನು ವಸೂಲಿ ಮಾಡದೇ ಇರುವ ಪ್ರಕರಣಗಳು ಅನುಬಂಧದಲ್ಲಿ ವಿವರಿಸಿರುವಂತೆ ರೂ.3.20 ಲಕ್ಷಗಳನ್ನು ಆಕ್ಷೇಪಣೆಯಲಿಟಿದೆ. ರೂ.43.81 ಲಕ್ಷಗಳು ವಸೂಲಿಗೆ ಸೂಚಿಸಿರುತ್ತದೆ. ಮಳಿಗೆಗಳ ಬಾಡಿಗೆ ಬಾಕಿಯನ್ನು ವಸೂಲಿ ಮಾಡಲು ಗ್ರಾಮಪಂಚಾಯಿತಿಗಳು ಕ್ರಮವಹಿಸಬೇಕಾಗಿದೆ. ನಿರ್ದಿಷ್ಟ ನ್ಯೂನ್ಯತೆಗಳನ್ನು ಆಯಾಸಂಸ್ಥೆಯ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಲಾಗಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 3.24ರಲ್ಲಿ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| **1** | **2** | **3** | **4** | **5** | **6** |
| 1 | ಬೆಂಗಳೂರು | 11 | 11 | 0.00 | 8.47 |
| 2 | ಬೀದರ್ | 3 | 3 | 2.04 | 0.00 |

| | | | | | |
|---|---|---|---|---|---|
| 3 | ಚಿಕ್ಕಮಗಳೂರು | 1 | 1 | 0.00 | 0.07 |
| 4 | ಗದಗ | 2 | 2 | 0.02 | 0.24 |
| 5 | ಕೊಪ್ಪಳ | 4 | 4 | 0.00 | 0.72 |
| 6 | ಕೊಡುಗು | 1 | 1 | 0.00 | 0.16 |
| 7 | ಮೈಸೂರು | 1 | 1 | 0.18 | 0.00 |
| 8 | ತುಮಕೂರು | 13 | 13 | 0.96 | 34.15 |
| ಒಟ್ಟು | | 36 | 36 | 3.20 | 43.81 |
| ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ) | | | | 47.01 | |

## 3.25 ಹರಾಜು ಪ್ರಕರಣಗಳಲ್ಲಿ ಆಕ್ಷೇಪಣೆ ಮೊತ್ತ ರೂ.2.08ಲಕ್ಷಗಳು ಹಾಗೂ ವಸೂಲಾತಿ ಮೊತ್ತ ರೂ.50.49ಲಕ್ಷಗಳು ವಸೂಲಿಯಾಗದಿರುವುದು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 34ರಲ್ಲಿ ಸೂಚಿಸಿರುವಂತೆ ಸ್ವಂತ ಆದಾಯಗಳನ್ನು ಕ್ರೋಢೀಕರಿಸುವ ಕುರಿತು ಗ್ರಾಮ ಪಂಚಾಯಿತಿಗಳಲ್ಲಿ ರಿಜಿಸ್ಟರ್‌ನ್ನು ನಿರ್ವಹಿಸಿ ಆದಾಯ ಹೆಚ್ಚಿಸಬೇಕಿರುತ್ತದೆ. ಗ್ರಾಮಪಂಚಾಯಿತಿಗಳಲ್ಲಿ ಸಂತೆ ಹರಾಜು, ಅಮರಾಯಿ ಫಸಲಿನ ಹರಾಜು, ಜಾನುವಾರು ದೊಡ್ಡಿ ಹರಾಜು, ಅರೆಬಂಡೆ ಹರಾಜು ಇತ್ಯಾದಿ ರೂ.**52.57** ಲಕ್ಷ ಬಾಕಿ ಉಳಿದುಕೊಂಡಿರುವ/ಆಕ್ಷೇಪಿತ ಪ್ರಕರಣಗಳು ಈ ಕೆಳಗಿನಂತಿರುತ್ತದೆ ಹಾಗೂ ನ್ಯೂನ್ಯತೆಗಳನ್ನು ಆಯಾ ಸಂಸ್ಥೆಯ ಲೆಕ್ಕಪರಿಶೋದನಾ ವರದಿಯಲ್ಲಿ ವಿವರಿಸಲಾಗಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.25ರಲ್ಲಿ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| **1** | **2** | **3** | **4** | **5** | **6** |
| 1 | ಬೆಂ.ನಗರ | 3 | 3 | 0.00 | 3.69 |
| 2 | ಚಿಕ್ಕಮಗಳೂರು | 4 | 4 | 0.00 | 2.48 |
| 3 | ದಾವಣಗೆರೆ | 1 | 1 | 0.00 | 0.02 |
| 4 | ಹಾವೇರಿ | 2 | 2 | 2.08 | 0.00 |
| 5 | ಕೊಡುಗು | 1 | 1 | 0.00 | 7.60 |
| 6 | ತುಮಕೂರು | 9 | 9 | 0.00 | 36.70 |
| | **ಒಟ್ಟು** | **19** | **19** | **2.08** | **50.49** |
| **ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)** | | | | **52.57** | |

## 3.26 ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೆಚ್ಚವು ಗ್ರಾಮ ಪಂಚಾಯತಿಗಳ ವಾರ್ಷಿಕ ಆದಾಯದ ಶೇ.40ನ್ನು ಮೀರಿರುವುದು.

ಸರ್ಕಾರದ ಅದೇಶ ಸಂಖ್ಯೆ: ಗ್ರಾ.ಅಪ/102/ವಿಇಎಲ್/90, ದಿ.10–1–1994 ರಂತೆ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಒಟ್ಟು ವಾರ್ಷಿಕ ವೆಚ್ಚವು ಆ ಗ್ರಾಮ ಪಂಚಾಯತಿಯ ಒಟ್ಟು ವಾರ್ಷಿಕ ಆದಾಯದ (ದಿ.10–01–1994ರ ಆದೇಶದ ಟಿಪ್ಪಣಿ–2 ರಲ್ಲಿ ತಿಳಿಸಿರುವ ಆದಾಯಗಳನ್ನು ಹೊರತುಪಡಿಸಿ) ಶೇ.40 ಮೀರಬಾರದೆಂದು ಸೂಚಿಸಲಾಗಿದೆ. ಆದರೆ 24 ಜಿಲ್ಲೆಗಳ 3523 ಗ್ರಾಮ ಪಂಚಾಯತಿಗಳಲ್ಲಿ (ಈ ಆದೇಶವನ್ನು ಪಾಲಿಸದೇ) ಮಿತಿಯನ್ನು ಮೀರಿ ಸಿಬ್ಬಂದಿ ವೇತನ ಇತ್ಯಾದಿಗಳಿಗೆ ವೆಚ್ಚವಾಗಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದೆ. ಒಟ್ಟು ಆದಾಯದ ಶೇ.40% ಕ್ಕಿಂತ ಹೆಚ್ಚು ಖರ್ಚು ಮಾಡಿರುವ ಕುರಿತಂತೆ ಜಿಲ್ಲಾವಾರು ವಿವರಗಳನ್ನು **ಅನುಬಂಧ–16**ರಲ್ಲಿ ಹಾಗೂ ಗ್ರಾಮ ಪಂಚಾಯತಿವಾರು ವಿವರಗಳನ್ನು **ಅನುಬಂಧ–16ಎ** ರಲ್ಲಿ ನೀಡಲಾಗಿದೆ.

## 3.27 ಗುತ್ತಿಗೆದಾರರು, ಸರಬರಾಜುದಾರರು ಮತ್ತು ಇತರರ ಹೆಸರಿಗೆ ನೀಡಬೇಕಾಗಿರುವ ಬಿಲ್ಲು ಪಾವತಿಯ ಬಾಬ್ತನ್ನು ಗ್ರಾಮಪಂಚಾಯಿತಿ ಸಿಬ್ಬಂದಿಯ ಹೆಸರಿಗೆ ಧನಾದೇಶವನ್ನು (ಚೆಕ್) ಬರೆದು ಸಂದಾಯ ಮಾಡಿರುವುದು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 49ರ ಪ್ರಕಾರ ಗ್ರಾ.ಪಂಗಳು ರೂ 50–00ಕ್ಕಿಂತ ಹೆಚ್ಚಿನ ಮೊತ್ತದ ಪಾವತಿಗಳನ್ನು ಸಂಬಂದಿಸಿದ ಸಂಸ್ಥೆಯ ಹೆಸರಿಗೆ ಬರೆದ ಅಕೌಂಟ್ ಪೇಯಿ ಧನಾದೇಶಗಳ ಮೂಲಕ ಮಾಡಬೇಕಾಗಿರುತ್ತದೆ. ಬದಲಾಗಿ ಧನಾದೇಶಗಳನ್ನು ಗ್ರಾಮ ಪಂಚಾಯಿತಿಯ ಜವಾನ, ವಸೂಲಿಗಾರ, ನೀರು ಸರಬರಾಜುದಾರ (ವಾಟರ್ ಮ್ಯಾನ್) ಇತ್ಯಾದಿ ಸಿಬ್ಬಂದಿಗಳ ಹೆಸರಿಗೆ ಬರೆದು ಹಣ ಪಡೆದುಕೊಳ್ಳಲಾಗುತ್ತಿದೆ. ಇದಕ್ಕೆ ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳ ವೇತನ ಬಟವಾಡೆ ವಹಿಗಳಲ್ಲಿರುವ ಹೆಸರುಗಳು ಸಾಕ್ಷಿ ಮತ್ತು ದಾಖಲೆ ಆಗಿರುತ್ತದೆ. ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿಗಳು ನಿಯಮಾನುಸಾರ ಪಾವತಿಗಳನ್ನು ಮಾಡದೇ ಇರುವುದು ದೃಢಪಟ್ಟಿರುತ್ತದೆ. ಗ್ರಾಮ ಪಂಚಾಯಿತಿವಾರು ಪ್ರಕರಣಗಳ ಬಗ್ಗೆ ಅನುಬಂಧದಲ್ಲಿ ವಿವರಿಸಿರುವಂತೆ ಆಕ್ಷೇಪಿಣೆ ಮೊತ್ತರೂ. **23.74** ಲಕ್ಷಗಳು ಹಾಗೂ ವಸೂಲಾತಿ ಮೊತ್ತ ರೂ.**5.94**ಲಕ್ಷಗಳನ್ನು ಸೂಚಿಸಲಾಗಿದೆ. ಹಾಗೂ ಸಂಬಂಧಪಟ್ಟ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಗಳನ್ನು ನೀಡಲಾಗಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.27ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| **1** | **2** | **3** | **4** | **5** | **6** |
| 1 | ದಾವಣಗೆರೆ | 11 | 11 | 5.00 | 5.70 |
| 2 | ಹಾವೇರಿ | 2 | 2 | 4.29 | 0 |
| 3 | ಶಿವಮೊಗ್ಗ | 17 | 17 | 14.45 | 0.24 |
| | | **29** | **29** | **23.74** | **5.94** |
| **ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)** | | | | **29.68** | |

**3.28 ಗ್ರಾಮಪಂಚಾಯಿತಿಯ ಸಿಬ್ಬಂದಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳ ಆಕ್ಷೇಪಣೆ ಮೊತ್ತ ರೂ.63.44/-ಲಕ್ಷಗಳು.**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 112(2) ರ ಪ್ರಕಾರ ಜಿಲ್ಲಾಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳುರವರ ಪೂರ್ವಾನುಮೋದನೆಯೊಂದಿಗೆ ಸಿಬ್ಬಂದಿಗಳ ನೇಮಕಾತಿಯನ್ನು ಮಾಡಿಕೊಳ್ಳತಕ್ಕದ್ದು. ಆದರೆ 3 ಜಿಲ್ಲೆಗಳಲ್ಲಿನ ಒಟ್ಟು 32 ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿದ್ದು ಇದರ ಒಟ್ಟು ವೆಚ್ಚ ರೂ.63.44ಲಕ್ಷಗಳನ್ನು ಆಕ್ಷೆಪಣೆಯಲ್ಲಿ ಇಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 3.28ರಲ್ಲಿ ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ |
|---|---|---|---|---|
| **1** | **2** | | **3** | **4** |
| 1 | ಚಾಮರಾಜನಗರ | 1 | 1 | 0.60 |
| 2 | ಕೊಪ್ಪಳ | 1 | 1 | 0.55 |
| 3 | ಶಿವಮೊಗ್ಗ | 30 | 30 | 61.14 |
| | ಒಟ್ಟು | 32 | 32 | 63.44 |

**3.29 ವೇತನ ಖಾತೆಯಲ್ಲಿ ಸಿಬ್ಬಂದಿಗೆ ಹೆಚ್ಚುವರಿ ಪಾವತಿ ಮತ್ತು ಗ್ರಾಮ ಪಂಚಾಯತಿ ಗೌರವಧನ ಹೆಚ್ಚಿಗೆ ಪಾವತಿ ಪ್ರಕರಣಗಳು.**

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 60ರಲ್ಲಿ ಸೂಚಿಸಿರುವಂತೆ ವೇತನ ಬಿಲ್ಲುಗಳ ನಿರ್ವಹಣೆ ಮತ್ತು ಬಟವಾಡೆ ಮಾಡುವ ಜವಾಬ್ದಾರಿ ಕಾರ್ಯದರ್ಶಿಗೆ ನೀಡಲಾಗಿದೆ. ಆದರೆ 8 ಜಿಲ್ಲೆಗಳ 48 ಗ್ರಾಮ

ಪಂಚಾಯಿತಿಗಳಲ್ಲಿ ವೇತನ ಮತ್ತು ಗೌರವಧನ ರೂ.**5.83ಲಕ್ಷ**ಗಳು ಹೆಚ್ಚುವರಿಯಾಗಿ ಪಾವತಿಸಲಾಗಿದ್ದು, ಸದರಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿ ಮಾಡಲು ಕ್ರಮ ವಹಿಸಬೇಕಾಗಿದೆ. ಹಾಗೂ ರೂ.**37.54**ಲಕ್ಷಗಳ ಸ್ಪಷ್ಟ ದಾಖಲಾತಿಗಳನ್ನು ಒದಗಿಸುವವರೆಗೂ ಆಕ್ಷೇಪಣೆಯಲ್ಲಿಟ್ಟಿದೆ. ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 3.29ರಲ್ಲಿ ನೀಡಲಾಗಿದೆ.

**( ರೂ.ಲಕ್ಷಗಳಲ್ಲಿ)**

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಒಟ್ಟು ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| **1** | **2** | **3** | **4** | **5** | **7** |
| 1 | ಬೆಂಗಳೂರು | 1 | 1 | 3.16 | 0.11 |
| 2 | ಬೆಳಗಾವಿ | 6 | 6 | 3.41 | 0.21 |
| 3 | ಚಿಕ್ಕಮಗಳೂರು | 1 | 1 | 0.29 | 0.00 |
| 4 | ದಾವಣಗೆರೆ | 12 | 12 | 8.91 | 4.25 |
| 5 | ಗದಗ | 3 | 3 | 0.66 | 0.91 |
| 6 | ಕೊಪ್ಪಳ | 1 | 1 | 0.00 | 0.23 |
| 7 | ಶಿವಮೊಗ್ಗ | 21 | 22 | 21.11 | 0.12 |
| 8 | ತುಮಕೂರು | 2 | 2 | 0.00 | 0.00 |
| **ಒಟ್ಟು** | | **47** | **48** | **37.54** | **5.83** |
| **ಒಟ್ಟು ಮೊತ್ತ** | | | | **43.37** | |

**3.30 ಅಧಿಕಾರ ವ್ಯಾಪ್ತಿಗಿಂತ ಹೆಚ್ಚುವರಿ ವಕೀಲರ ಶುಲ್ಕ ಪಾವತಿಸಿರುವುದು.**

ಕರ್ನಾಟಕ ಪಂಚಾಯತ್ ರಾಜ್(ಗ್ರಾಮ ಪಂಚಾಯತ್ ನಿಧಿಗಳನ್ನು ಬಳಸುವುದು) ನಿಯಮಗಳು 1994 ನಿಯಮ 3ರ ಪ್ರಕಾರ ಗ್ರಾಮ ಪಂಚಾಯತಿಗಳಿಗೆ ವಕೀಲರ ಶುಲ್ಕ ಬರೆಸಲು ರೂ.1,000/-ಗಳನ್ನು ಪಾವತಿಸಲು ಮಾತ್ರ ಅವಕಾಶವಿರುತ್ತದೆ. ಆದರೆ **2** ಜಿಲ್ಲೆಗಳ **5** ಗ್ರಾಮ ಪಂಚಾಯತಿಗಳಲ್ಲಿ ಅಧಿಕಾರ ವ್ಯಾಪ್ತಿಗಿಂತ ಹೆಚ್ಚುವರಿ ಶುಲ್ಕ ರೂ.0.83ಲಕ್ಷಗಳನ್ನು ಪಾವತಿಸಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 3.30 ರಲ್ಲಿ ನೀಡಲಾಗಿದೆ.

# ಅಧ್ಯಾಯ-4

## ಗ್ರಾಮ ಪಂಚಾಯತಿಗಳಿಂದ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ

### 4.1 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪಡೆದ ಅನುದಾನದಲ್ಲಿ ಬಳಕೆಯಾಗದೇ ಉಳಿದಿರುವ ಮೊತ್ತ ರೂ.17967.62ಲಕ್ಷಗಳು ಹಾಗೂ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳ ಮೊತ್ತ ರೂ.3372.45ಲಕ್ಷಗಳು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ, 4ನೇ ಕಲಂನಡಿ ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕರಿಗೆ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗ ಒದಗಿಸುವುದಕ್ಕಾಗಿ, ಭಾರತ ಸರ್ಕಾರ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ನ್ನು (ಕೇಂದ್ರ ಅಧಿನಿಯಮ ಸಂಖ್ಯೆ: 42/2005) ಜಾರಿಗೆ ತಂದಿದ್ದು, ಕೇಂದ್ರ ಸರ್ಕಾರ ಕಾಲಕಾಲಕ್ಕೆ ಅಧಿಸೂಚಿಸುವ ಜಿಲ್ಲೆಗಳಲ್ಲಿ ಈ ಅಧಿನಿಯಮ ಆಯಾ ದಿನಾಂಕಗಳಿಂದ ಜಾರಿಗೆ ಬರುವುದು. ಕೂಲಿಯಾಧಾರಿತ ಉದ್ಯೋಗವನ್ನು ಸೃಜಿಸಿ, ಗ್ರಾಮೀಣ ಜನರ ಜೀವನಕ್ಕೆ ಭದ್ರತೆಯನ್ನು ಒದಗಿಸುವುದು ಈ ಅಧಿನಿಯಮದ ಉದ್ದೇಶವಾಗಿದ್ದು, ಇದರಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳು, ಬರಗಾಲ, ಅರಣ್ಯನಾಶ ಮತ್ತು ಮಣ್ಣಿನ ಸವೆತ ಇವುಗಳಿಂದಾಗಿ ಉದ್ಭವಿಸುವ ದೀರ್ಘಕಾಲದ ಸಮಸ್ಯೆಗಳಿಂದ ಉಂಟಾಗುವ ಬಡತನಕ್ಕೆ ಸೂಕ್ತ ಪರಿಹಾರ ಸೂಚಿಸುತ್ತವೆ. ಈ ಅಧಿನಿಯಮದ ಆಶಯವನ್ನು ಸಮರ್ಪಕವಾಗಿ ಜಾರಿಗೊಳಿಸಿದಲ್ಲಿ, ಗ್ರಾಮೀಣ ಭಾಗದ ಬಡತನದ ಚಿತ್ರಣವನ್ನೇ ಬದಲಿಸುವ ಸಾಮರ್ಥ್ಯ ಇರುವುದರಿಂದ ಅಧಿನಿಯಮದ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರಗಳು ಅಧಿನಿಯಮದ ಅನುಸೂಚಿ-1 ಮತ್ತು ಅನುಸೂಚಿ-2 ರಲ್ಲಿ ಸೂಚಿಸಿರುವ ಕನಿಷ್ಠ ಅಂಶಗಳನ್ನು ಒಳಗೊಂಡಂತೆ ಇತರೆ ಅಗತ್ಯ ಅಂಶಗಳೊಂದಿಗೆ ತಮ್ಮ ರಾಜ್ಯಗಳ ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳನ್ನು ರೂಪಿಸಬೇಕಾಗಿರುವುದರಿಂದಲೂ, ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕರಿಗೆ, ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗವನ್ನು ಅಧಿನಿಯಮ ಮತ್ತು ಈ ಯೋಜನೆಯಡಿಯಲ್ಲಿನ ಷರತ್ತುಗಳಿಗೆ ಒಳಪಟ್ಟು ಒದಗಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ ಪ್ರಕರಣ (4)ರ ಉಪಪ್ರಕರಣ(1)ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರಾಮೀಣ ಪ್ರದೇಶಗಳ ಕುಟುಂಬಗಳಿಗೆ ಖಾತರಿ ಉದ್ಯೋಗ ಒದಗಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಆರ್ಥಿಕ ಹಾಗೂ ಸಾಮಾಜಿಕ ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವ ಮೂಲಕ ಉದ್ಯೋಗದ ಹಕ್ಕನ್ನು ಸಾಕಾರಗೊಳಿಸುವ ಹಾಗೂ ಹಂತ ಹಂತವಾಗಿ ಬದುಕಿಗೆ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಈ ಅಧಿನಿಯಮ ಪ್ರಮುಖ ಹೆಜ್ಜೆಯಾಗಿದೆ. ರಾಜ್ಯದಲ್ಲಿ ಈ

ಯೋಜನೆಯನ್ನು ಕೇಂದ್ರ ಪ್ರಾಯೋಜಿತ ಯೋಜನೆಯೊಂದರ ರೂಪದಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳ ನಡುವೆ ಸರಿ ಸುಮಾರು 90:10ರ ಅನುಪಾತದಲ್ಲಿ ನಿಧಿ ಹಂಚಿಕೆಯೊಂದಿಗೆ ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಈ ಯೋಜನೆಯ ಅನುಷ್ಠಾನಕ್ಕೆ ಗ್ರಾಮಗಳ ಹಂತದಲ್ಲಿ ಗ್ರಾಮ ಪಂಚಾಯತಿಯು ಜವಾಬ್ದಾರಿಯುತ ಪ್ರಾಧಿಕಾರವಾಗಿರುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ತಮ್ಮ ತಮ್ಮ ಪಾಲಿನ ಯೋಜನೆಯ ಅನುದಾನದ ಮೊತ್ತವನ್ನು ಇದೇ ಉದ್ದೇಶಕ್ಕಾಗಿ ಸ್ಥಾಪಿಸಿದ 'ರಾಜ್ಯ ಉದ್ಯೋಗ ಖಾತರಿ ನಿಧಿ' ಎಂಬ ಒಂದು ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತದೆ. ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿರ್ದೇಶಕರು ಈ ನಿಧಿಯ ರಕ್ಷಕರಾಗಿರುತ್ತಾರೆ ಮತ್ತು ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ/ಗ್ರಾಮಪಂಚಾಯತಿಗಳಿಗೆ ಪ್ರಥಮ ಹಂತದಲ್ಲಿ ರಾಜ್ಯದ 05 ಜಿಲ್ಲೆಗಳಲ್ಲಿ ದಿನಾಂಕ:02.02.2006ರಿಂದ, ಎರಡನೇ ಹಂತದಲ್ಲಿ 06 ಜಿಲ್ಲೆಗಳಲ್ಲಿ ದಿನಾಂಕ:01.04.2007ರಿಂದ ಹಾಗೂ ಉಳಿದ ಎಲ್ಲಾ ಜಿಲ್ಲೆಗಳಿಗೆ ದಿನಾಂಕ:01.04.2008ರಿಂದ ಅನ್ವಯವಾಗುವಂತೆ ಈ ಅಧಿನಿಯಮದಡಿ ಕಾರ್ಯಕ್ರಮವನ್ನು ವಿಸ್ತರಿಸಲಾಗಿರುತ್ತದೆ. ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿಯಮ-19 ರಂತೆ ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಿಸುವ ಲೆಕ್ಕಗಳಿಗೆ ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರು ಶಾಸನ ಬದ್ಧ ಲೆಕ್ಕ ಪರಿಶೋಧಕರಾಗಿರುತ್ತಾರೆ. ಈ ಅಧಿನಿಯಮದಡಿಯಲ್ಲಿ 2016-17ನೇ ಸಾಲಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಒಟ್ಟು ರೂ.**218385.28** ಲಕ್ಷಗಳು ಅನುದಾನ ಸ್ವೀಕೃತವಾಗಿದ್ದು, ಇತರೇ ಮೂಲಗಳಿಂದ ಒಟ್ಟು ರೂ.**743.27 ಲ**ಕ್ಷಗಳು ಸೇರ್ಪಡೆಯಾಗಿ ಹಿಂದಿನ ಸಾಲಿನ ಆರಂಭಿಕ ಶಿಲ್ಕು ರೂ.**7434.68 ಲ**ಕ್ಷಗಳು ಸೇರಿ, ಒಟ್ಟು ವರ್ಷದ ಅಂತ್ಯಕ್ಕೆ ರೂ.**226563.22** ಲಕ್ಷಗಳು ಮೊತ್ತ ಲಭ್ಯವಾಗಿರುತ್ತದೆ. ಈ ಯೋಜನೆಯಡಿಯಲ್ಲಿ 2016-17ನೇ ಸಾಲಿನಲ್ಲಿ ಒಟ್ಟು ರೂ.**208595.61** ಲಕ್ಷಗಳ ವೆಚ್ಚ ನಿರ್ವಹಿಸಿ ರೂ.**17967.62**ಲಕ್ಷಗಳು ವೆಚ್ಚವಾಗದೇ ಉಳಿದಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-6 ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-6(ಎ) ನಲ್ಲಿ ನೀಡಲಾಗಿದೆ.

ಗ್ರಾಮಪಂಚಾಯಿತಿವಾರು ವಿವರಗಳನ್ನು ಕಂಡಿಕೆ 4.1ರಲ್ಲಿ ಲೆಕ್ಕ ಪರಿಶೋಧನೆಗೆ ಓಚರ್/ ದಾಖಲಾತಿಗಳನ್ನು ಒದಗಿಸದಿರುವ ಬಗ್ಗೆ ಸರ್ಕಾರದ **ಆದೇಶ ಸಂಖ್ಯೆ:ಗ್ರಾಅಪ 29 ಲೆಪಬಿ 2006 ಬೆಂಗಳೂರು, ದಿನಾಂಕ:18.04.2007ರಲ್ಲಿ** ವಿವರಿಸಿರುವಂತೆ ಮೇಲ್ಕಂಡ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ 2016-17ನೇ ಸಾಲಿನ ಅರ್ಥಿಕ ವರ್ಷಕ್ಕೆ 15 ಜಿಲ್ಲೆಗಳ 156 ಗ್ರಾಮಪಂಚಾಯತಿಗಳಲ್ಲಿ ಒಟ್ಟು ರೂ.3372.45ಲಕ್ಷ ಮೊತ್ತದಷ್ಟು ಓಚರ್/

ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಈ ಯೋಜನೆಯಡಿ ಓಚರ್/ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವ ರೂ.3372.45ಲಕ್ಷ ವ್ಯವಹಾರಗಳ ಪರಿಶೀಲನೆ ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಯೋಜನೆಯ ಹಣ ಎಷ್ಟರಮಟ್ಟಿಗೆ ಉದ್ಯೋಗ ಖಾತರಿ ಯೋಜನೆಗೆ ಬಳಕೆಯಾಗಿದೆ ಎಂಬ ಬಗ್ಗೆ ಅನುಮಾನಕ್ಕೆ ಆಸ್ಪದವಾಗಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.1ಎ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳು.**

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಆಕ್ಷೇಪಣೆ ಮೊತ್ತ |
|---|---|---|---|---|
| 1 | 2 | 3 | 4 | 5 |
| 1 | ಬಾಗಲಕೋಟೆ | 5 | 5 | 6.45 |
| 2 | ಬೆಳಗಾವಿ | 21 | 21 | 564.66 |
| 3 | ಚಾಮರಾಜನಗರ | 4 | 4 | 4.72 |
| 4 | ಧಾರವಾಡ | 6 | 6 | 66.40 |
| 5 | ಗದಗ | 1 | 1 | 49.42 |
| 6 | ಹಾವೇರಿ | 11 | 11 | 272.15 |
| 7 | ಕಲಬುರಗಿ | 20 | 20 | 76.40 |
| 8 | ಕೋಲಾರ | 1 | 1 | 4.50 |
| 9 | ಕೊಪ್ಪಳ | 40 | 40 | 1692.89 |
| 10 | ಕೊಡುಗು | 2 | 2 | 2.28 |
| 11 | ಮಂಡ್ಯ | 22 | 22 | 235.97 |
| 12 | ಮೈಸೂರು | 4 | 4 | 20.02 |
| 13 | ರಾಯಚೂರು | 1 | 1 | 6.98 |
| 14 | ಶಿವಮೊಗ್ಗ | 1 | 1 | 0.01 |
| 15 | ತುಮಕೂರು | 17 | 17 | 369.61 |
| | ಒಟ್ಟು | 156 | 156 | 3372.45 |
| ಒಟ್ಟು ಮೊತ್ತ | | | | 3372.45 |

## 4.2 ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ಲೋಪಗಳು.

ಗ್ರಾಮಪಂಚಾಯತಿಗಳ ಲೆಕ್ಕ ಪರಿಶೋಧನಾ ವೇಳೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಲ್ಲಿ ಸಾಮಾನ್ಯವಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿದ್ದು, ಸಂಬಂಧಪಟ್ಟ ಲೆಕ್ಕ ಪರಿಶೋಧನಾ ವರದಿಗಳಲ್ಲಿ ವಿವರಿಸಿದೆ. ಈ ಬಗ್ಗೆ ಸೂಕ್ತ ಮೇಲ್ವಿಚಾರಣೆ ಅಗತ್ಯ.

1. ನೋಂದಣಿ ಮತ್ತು ಉದ್ಯೋಗ ಚೀಟಿ ವಿತರಣೆ ಬಗ್ಗೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಕೈಪಿಡಿ ಕಂಡಿಕೆ 9 ಮತ್ತು 10ರಲ್ಲಿ ಸೂಚಿಸಿರುವಂತೆ ವಿತರಣೆ ಮಾಡಿರುವ ನಮೂನೆ–1ರಿಂದ ನಮೂನೆ–7ರವರೆಗೆ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಿಲ್ಲ.
2. ಕಾಮಗಾರಿ ಬಿಲ್ಲುಗಳಲ್ಲಿ ನಮೂನೆ–6,8 ಮತ್ತು 9 ಮಾತ್ರ ಲಭ್ಯವಿರುತ್ತದೆ.
3. ನಮೂನೆ–1ರಲ್ಲಿ ಸ್ವಯಂಪ್ರೇರಣೆಯಿಂದ ಕೆಲಸಕ್ಕಾಗಿ ಅರ್ಜಿ ಸಲ್ಲಿಸುವ ಅಕುಶಲ ಕೂಲಿಕಾರ್ಮಿಕರಲ್ಲಿ ಕೆಲವರು ಅಕ್ಷರಸ್ಥರು ಹಾಗೂ ಕೆಲವರು ಅನಕ್ಷರಸ್ಥರು ಇದ್ದು ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿದ ಬಳಿಕ ಎನ್.ಎಂ.ಆರ್.ಗಳಲ್ಲಿ ಕಾಮಗಾರಿ ನಿರ್ವಹಿಸಲು ನಿಯೋಜನೆಗೊಂಡ ಕೂಲಿಕಾರ್ಮಿಕರಲ್ಲಿ ಕೆಲವರು ಸಹಿ ನೀಡಿದ್ದು ಮತ್ತೆ ಕೆಲವರು ಹೆಬ್ಬೆಟ್ಟು ಗುರುತು ಹಾಕಿದ್ದು ಗಮನಕ್ಕೆ ಬಂದಿದೆ. ನಮೂನೆ–1ನ್ನು ಪರಿಶೀಲನೆಗೆ ಒದಗಿಸಿಲ್ಲದ ಕಾರಣ ಎನ್.ಎಂ.ಆರ್.ಗಳಲ್ಲಿ ಸಹಿ/ಹೆಬ್ಬೆಟ್ಟು ಕೂಲಿ ಕಾರ್ಮಿಕರಿಗೆ ನಿಖರವಾಗಿ ಪಾವತಿಯಾಗಿರುವುದನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ.
4. ಎನ್.ಎಂ.ಆರ್.ಗಳಲ್ಲಿ ಹೆಬ್ಬೆಟ್ಟು ಗುರುತು ಹಾಕಿದ ಬಹುತೇಕ ಪ್ರಕರಣಗಳಲ್ಲಿ ಇದನ್ನು ಕಾರ್ಯದರ್ಶಿಗಳಿಂದಾಗಲೀ/ಅಧ್ಯಕ್ಷರಿಂದಾಗಲೀ ಧೃಢೀಕರಿಸಿರುವುದಿಲ್ಲ.
5. ಉದ್ಯೋಗ ಖಾತರಿ ಯೋಜನೆಯ ಕೈಪಿಡಿ ಕಂಡಿಕೆ–12ರಲ್ಲಿ ತಿಳಿಸಿದಂತೆ ಗಿಡನೆಡುವ ಕಾಮಗಾರಿಗಳಿಗೆ ಹೆಚ್ಚಿನ ಮೊತ್ತವನ್ನು ವಿನಿಯೋಗಿಸುವ ದೃಷ್ಟಿಯಿಂದ ಪ್ರತಿ ಗ್ರಾಮಪಂಚಾಯಿತಿಗಳಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಗ್ರಾಮಪಂಚಾಯಿತಿಯು ನಿಯೋಜಿಸತಕ್ಕದ್ದು, ರಸ್ತೆಗಳನ್ನು ಕೊನೆಯ ಆದ್ಯತೆಯಾಗಿ ಒಟ್ಟು ಮೊತ್ತದ 10%ಗಿಂತ ಕಡಿಮೆ ಮೊತ್ತದಲ್ಲಿ ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದ್ದಾಗ್ಯೂ ಇದನ್ನು ಪಾಲಿಸಿಲ್ಲ.
6. ಉದ್ಯೋಗ ಖಾತರಿ ಯೋಜನೆಯ ಕೈಪಿಡಿ ಕಂಡಿಕೆ–22ರಲ್ಲಿ ತಿಳಿಸಿದಂತೆ ಈ ಯೋಜನೆಯಡಿಯಲ್ಲಿ 100% ರಷ್ಟು ಕಾಮಗಾರಿಗಳನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ಕನಿಷ್ಠ 2%ರಷ್ಟು ಕಾಮಗಾರಿಗಳನ್ನು ರಾಜ್ಯ ಮಟ್ಟದ ಅಧಿಕಾರಿಗಳು ತಪಾಸಣೆ ಮಾಡಬೇಕು ಎಂದು ತಿಳಿಸಿದ್ದಾಗ್ಯೂ ಈ ರೀತಿ ತಪಾಸಣೆ ಮಾಡಿದ ಬಗ್ಗೆ ಲೆಕ್ಕತನಿಖೆ ಸಮಯದಲ್ಲಿ ಮಾಹಿತಿಯು ಲಭ್ಯವಿಲ್ಲ.
7. ಉದ್ಯೋಗ ಖಾತರಿ ಯೋಜನೆಯ ಕೈಪಿಡಿ ಅನುಬಂಧ–3ರಲ್ಲಿ ತಿಳಿಸಿರುವಂತೆ ಕಾರ್ಯನಿರ್ವಾಹಣಾ ಇಲಾಖೆಗಳಿಂದ ಕಾಮಗಾರಿಗಳನ್ನು ನಿರ್ವಹಿಸಿದ್ದ ಬಗ್ಗೆ ಕಾಮಗಾರಿಗಳ ಅಳತೆ ಪುನರ್ ಪರಿಶೀಲನೆ ಮಾಡಿದ್ದ ಬಗ್ಗೆ ಅಳತೆ ಪುಸ್ತಕದಲ್ಲಿ ಅವಶ್ಯ ದಾಖಲೆ ಮಾಡಿ ಧೃಢೀಕಸಿರುವುದಿಲ್ಲ.

8. ಉದ್ಯೋಗ ಖಾತರಿ ಯೋಜನೆಯು ಅಧಿನಿಯಮದ ಪ್ರಕರಣ 3(3)ರಂತೆ ಕೆಲಸ ಮಾಡುವ ಕೂಲಿಕಾರ್ಮಿಕರಿಗೆ ನಂತರ, ದಿನಾಂಕದಿಂದ ಒಂದು ವಾರದೊಳಗೆ ಅಥವಾ 15 ದಿನಗಳಿಗೆ ಮೀರದಂತೆ ಕೂಲಿಯನ್ನು ಕಡ್ಡಾಯವಾಗಿ ಪಾವತಿ ಮಾಡಬೇಕಿದೆ. ಆದರೆ ಅನೇಕ ಪ್ರಕರಣಗಳಲ್ಲಿ ಈ ಸೂಚನೆ ಪಾಲಿಸಿರುವುದು ಕಂಡುಬಂದಿರುವುದಿಲ್ಲ, ಇದೇ ರೀತಿ ಪುನರಾವರ್ತನೆಯಾದಲ್ಲಿ, ಕೂಲಿ ಪಾವತಿ ಅಧಿನಿಯಮ 1936 (4/1936)ರನ್ವಯ, ಕೂಲಿಕಾರ್ಮಿಕರಿಗೆ ಪರಿಹಾರ ನೀಡಬೇಕಾದ ಹೊಣೆ ಕಾರ್ಯದರ್ಶಿ/ಅಧ್ಯಕ್ಷರಿಗೆ ಉಂಟಾಗುತ್ತದೆ ಎಂಬುದನ್ನು ಗಮನದಲ್ಲಿರಿಸಬೇಕು.
9. ಉದ್ಯೋಗ ಖಾತರಿ ಯೋಜನೆ ಅನುಷ್ಠಾನದಲ್ಲಿ ಯಂತ್ರಗಳನ್ನು ಬಳಸಬೇಕಾದ ಸಂದರ್ಭಗಳಲ್ಲಿ ಪತ್ರ ಸಂ:ಗ್ರಾಅಪಂ/5ಉಖಾಯೋ/2008(ಪಿ)ದಿನಾಂಕ:30.08.2009ರಲ್ಲಿ ಸರ್ಕಾರ ನೀಡಿದ ಸೂಚನೆಗಳನ್ನು ಅನುಸರಿಸದೇ ಇರುವುದು ಗಮನಕ್ಕೆ ಬಂದಿದೆ.
10. ಸರ್ಕಾರ ಪತ್ರ ಸಂ:ಗ್ರಾಅಪ 5 ಉಖಾಯೋ 2008 ದಿನಾಂಕ:09.04.2009ರಲ್ಲಿ ತಿಳಿಸಿದಂತೆ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಎಲ್ಲಾ ಕೂಲಿಕಾರ್ಮಿಕರು ಕಾಮಗಾರಿಗಳಲ್ಲಿಯ 50 ದಿನಗಳನ್ನು ಪೂರೈಸಿರುತ್ತಾರೋ, ಅಂತಹವರಿಗೆ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ ಆರೋಗ್ಯ ವಿಮೆಯನ್ನು ಹಾಗೂ ಆಮ್ ಆದ್ಮಿ ಭೀಮಾ ಯೋಜನೆಯನ್ನು ವಿಸ್ತರಿಸುವ ಬಗ್ಗೆ ನಮೂನೆ-3ನ್ನು ಪರಿಶೀಲನೆಗೆ ಒದಗಿಸಿಲ್ಲದ ಕಾರಣ ಇದನ್ನು ಪರಿಶೀಲಿಸಲಾಗಿಲ್ಲ.

11. 1) ಉದ್ಯೋಗ ಖಾತರಿ ಯೋಜನೆ ಕೈಪಿಡಿ ಕಂಡಿಕೆ-12(111)ರಲ್ಲಿ ತಿಳಿಸಿದಂತೆ ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ, ನೀರಾವರಿ ಕಾಲುವೆ ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಕಾಲುವೆಗಳಲ್ಲಿ ಬೆಳೆದಿರುವ ಪೊದೆ ಹಾಗೂ ಮಣ್ಣನ್ನು ತೆಗೆಯುವ ಕಾಮಗಾರಿಗಳ ಪ್ರಕರಣಗಳಲ್ಲಿ 4%ರಷ್ಟು ವ್ಯಾಟ್ ಕಳೆಯಬೇಕಾಗಿದ್ದು ಈ ನಿಯಮ ಅನುಸರಿಸಿಲ್ಲ.

2) ಎಂಬಾಂಕ್‌ಮೆಂಟ್ ಕಾಮಗಾರಿಗಳ ನಿರ್ವಹಣೆಯಲ್ಲಿ ಶೇ 15ರಷ್ಟು ಶ್ರಿಂಕೇಜ್ ಕಳೆದಿಲ್ಲ.

ಉದ್ಯೋಗ ಖಾತರಿ ಅಧಿನಿಯಮ 2005ರ ನಿಯಮ ಕಂಡಿಕೆ-15ರಲ್ಲಿ ತಿಳಿಸಿದಂತೆ ಅಂದಾಜುಗಳ ತಯಾರಿಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳು ಕೆಲಸದ ಅಳತೆ ಇತ್ಯಾದಿಗಳು, ಗ್ರಾಮಪಂಚಾಯಿತಿಗಳಿಗೆ ಸಂಬಂಧಿಸಿದಂತೆ, ರಚಿಸಲಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರ) ನಿಯಮಗಳು 2006ರಂತೆ ನಿಯಮಗಳನ್ನು ಪಾಲಿಸಬೇಕಾಗಿದ್ದು, ಇವುಗಳನ್ನು ಪಾಲಿಸಲು ತಿಳಿಸಲಾಗಿದೆ.

ಗ್ರಾಮಪಂಚಾಯಿತಿಯಲ್ಲಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ/13ನೇ ಹಣಕಾಸು/ ಇನ್ನಿತರೆ ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ಲೋಪಗಳು/ನ್ಯೂನ್ಯತೆ'ಗಳು ಪ್ರಕರಣಗಳಲ್ಲಿ ಕಂಡು ಬಂದ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತ ರೂ.1538.60ಲಕ್ಷಗಳು. ಈ ಕುರಿತಂತೆ ವಿವರಗಳು ಕೆಳಗಿನಂತಿವೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.2ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿಗಳ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 4 | 5 | 7 | 8 |
| 1 | ಬೆಂಗಳೂರು | 11 | 11 | 21.90 | 0.26 |
| 2 | ಬೆಳಗಾವಿ | 41 | 41 | 75.97 | 5.24 |
| 3 | ಬೀದರ್ | 37 | 37 | 136.16 | 0.00 |
| 4 | ಚಾಮರಾಜನಗರ | 66 | 66 | 2.06 | 40.19 |
| 5 | ಚಿಕ್ಕಮಗಳೂರು | 56 | 56 | 17.85 | 18.54 |
| 6 | ದಾವಣಗೆರೆ | 79 | 79 | 115.39 | 32.13 |
| 7 | ಗದಗ | 68 | 68 | 146.23 | 4.73 |
| 8 | ಹಾಸನ | 2 | 2 | 6.02 | 0.00 |
| 9 | ಹಾವೇರಿ | 46 | 46 | 80.69 | 2.89 |
| 10 | ಕೋಲಾರ | 2 | 2 | 0.20 | 0.02 |
| 11 | ಕೊಪ್ಪಳ | 47 | 47 | 196.90 | 5.07 |
| 12 | ಕೊಡುಗು | 15 | 15 | 8.91 | 0.28 |
| 13 | ಮೈಸೂರು | 8 | 8 | 27.15 | 20.69 |
| 14 | ರಾಯಚೂರು | 15 | 15 | 273.10 | 2.31 |
| 15 | ಶಿವಮೊಗ್ಗ | 82 | 82 | 76.74 | 2.72 |
| 16 | ತುಮಕೂರು | 236 | 236 | 195.51 | 18.65 |
| 17 | ಉಡುಪಿ | 2 | 2 | 3.93 | 0.11 |
| 18 | ವಿಜಯಪುರ | 1 | 1 | 0.06 | 0.00 |
| | ಒಟ್ಟು | 814 | 814 | 1384.77 | 153.82 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 1538.60 | |

## 4.3 ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆ ಬಿಲ್ ಪಾವತಿಸುವಾಗ ಒಂದೇ ಕಾಮಗಾರಿಗಳಿಗೆ ಎರಡು ಬಾರಿ ಪಾವತಿಸಿ ಹಣ ದುರುಪಯೋಗಪಡಿಸಿಕೊಂಡಿರುವುದು.

ಸದರಿ ಕಾಮಗಾರಿಗಳಿಗೆ ಎರಡು ಬಾರಿ ಹಣವನ್ನು ಸಂದಾಯಿಸಿದ್ದು ಹೆಚ್ಚುವರಿ ಸಂದಾಯಿಸಿದ ಮೊತ್ತವನ್ನು ಎಂ.ಜಿ.ಎನ್.ಆರ್.ಇ.ಜಿ.ಎ. ಖಾತೆಗೆ ಮರಳಿ ಜಮೆ ಮಾಡಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 246(8)ರಂತೆ ಇದು ತಾತ್ಕಾಲಿಕವಾಗಿ ಹಣ

ದುರುಪಯೋಗದ ಪ್ರಕರಣವಾಗಿದ್ದು ಸದರಿ ಅವಧಿಗೆ ಪ್ರತಿಶತ 15ರಂತೆ ಬಡ್ಡಿ **ರೂ.1.48ಲಕ್ಷ**ಗಳನ್ನು ಪಂಚಾಯತ್ ರಾಜ್ ಅಧಿಕಾರಿಗಳಿಂದ ವಸೂಲಿಸಿ ಎಂ.ಜಿ.ಎನ್.ಆರ್.ಇ.ಜಿ.ಎ. ಖಾತೆಗೆ ಜಮಾ ಮಾಡಿಸಲು ಹಾಗೂ ಸಂಬಂಧಪಟ್ಟ ಸಿಬ್ಬಂದಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.3ರಲ್ಲಿ ನೀಡಲಾಗಿದೆ.

## 4.4 ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (NREGA) ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಕೂಲಿದರಕ್ಕಿಂತ ರೂ.6.68ಲಕ್ಷಗಳು ಹೆಚ್ಚಿಗೆ ಕೂಲಿ ದರ ಪಾವತಿಸಿರುವುದು.

ಗ್ರಾಮಪಂಚಾಯಿತಿಗಳ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಈ ಕೆಳಕಂಡ ಜಿಲ್ಲಾವಾರು ಗ್ರಾಮಪಂಚಾಯಿತಿಗಳ ಪ್ರಕರಣಗಳಲ್ಲಿ ಹೆಚ್ಚಿಗೆ ಕೂಲಿ ದರ ಪಾವತಿಸಿರುವುದು ಆಕ್ಷೇಪಿಸಿದೆ. ಈ ಸಂಬಂದ ಈ ಕೆಳಕಂಡ ಆಕ್ಷೇಪಣೆ ಹಾಗೂ ವಸೂಲಾತಿಗಳನ್ನು ಸೂಚಿಸಿದ್ದು, ನಿರ್ದಿಷ್ಟ ನ್ಯೂನ್ಯತೆಗಳನ್ನು ಆಯಾ ಸಂಸ್ಥೆಯ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಲಾಗಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.4ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| **1** | **2** | **3** | **4** | **5** | **7** |
| 1 | ಶಿವಮೊಗ್ಗ | 9 | 9 | 0 | 0.28 |
| 2 | ತುಮಕೂರು | 9 | 9 | 0.13 | 6.26 |
| | | **18** | **18** | **0.13** | **6.55** |
| | **ಒಟ್ಟು** | | | **6.68** | |

1. ಅನಧಿಕೃತವಾಗಿ ಗೈರು ಹಾಜರಾಗಿರುವ ಅಕುಶಲ ಕಾರ್ಮಿಕರಿಗೆ ಹಾಜರಾತಿ ನೀಡಿ ಹೆಚ್ಚಿನ ಮೊಬಲಗು ಪಾವತಿಸಿರುವುದು.
2. ಹಾಜರುಪಟ್ಟಿಯಲ್ಲಿ ಇರುವ ಮೊಬಲಗುಗಿಂತ ಹೆಚ್ಚಿಗೆ ಪಾವತಿಸಿರುವುದು.
3. NMR ಮೊಬಲಗುಗಿಂತ ಹೆಚ್ಚುವರಿ ಪಾವತಿ.
4. ಕೆಲವೊಂದು ಸಾಮಗ್ರಿ ಸರಬರಾಜು (ಸಪ್ಲೈ) ಬಿಲ್ಲಿನ ಮೊತ್ತಕ್ಕಿಂತ ಹೆಚ್ಚುವರಿ ಪಾವತಿ.
5. ತಪ್ಪು ಲೆಕ್ಕಚಾರದಿಂದ ಹೆಚ್ಚುವರಿ ಪಾವತಿ ಹಾಗು ಕೆಲಸಗಾರರಿಗೆ ಕೆಲಸ ನಿರ್ವಹಿಸಿದ್ದಕ್ಕಿಂತ ಹೆಚ್ಚುವರಿ ಕೂಲಿ ಪಾವತಿ.
6. ಅಳತೆ ನಿರ್ವಹಿಸಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಕೂಲಿ ಪಾವತಿಸಿರುವುದು ಕಂಡುಬಂದಿರುತ್ತದೆ. ಇದು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006, ನಿಯಮ 87[(1)ರಿಂದ(8)] ಮತ್ತು 88(1)ರಲ್ಲಿ ವಿವರಿಸಿರುವುದಕ್ಕೆ ವಿರುದ್ಧವಾಗಿರುತ್ತದೆ.

**4.5 13 ಮತ್ತು 14ನೇ ಹಣಕಾಸು ಆಯೋಗದ ಯೋಜನೆಯಡಿ ಬಳಕೆಯಾಗದೇ ಉಳಿದಿರುವ ಮೊತ್ತ ರೂ.76829.92ಲಕ್ಷಗಳು. ಹಾಗೂ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳ ಮೊತ್ತ ರೂ.3598.74ಲಕ್ಷಗಳು.**

ರಾಜ್ಯದ ಗ್ರಾಮ ಪಂಚಾಯತಿಗಳ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರವು 13/14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಯೋಜನೆಗಳನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಗಳಡಿಯಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿದೆ. 2016-17ನೇ ಸಾಲಿನಂತ್ಯದ ಲೆಕ್ಕಪರಿಶೋಧನೆ ಕೈಗೊಂಡ 5461 ಗ್ರಾಮ ಪಂಚಾಯತಿಗಳಲ್ಲಿ ಈ ಯೋಜನೆಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ಒಟ್ಟು ರೂ.**138812.88** ಲಕ್ಷಗಳ ಅನುದಾನ ಸ್ವೀಕೃತವಾಗಿದ್ದು, ಇತರೇ ಮೂಲಗಳಿಂದ ಒಟ್ಟು ರೂ.**4818.78**ಲಕ್ಷ ಸೇರ್ಪಡೆಯಾಗಿ ಹಿಂದಿನ ಸಾಲಿನ ಆರಂಭಿಕ ಶಿಲ್ಕು ರೂ.**32699.41** ಲಕ್ಷಗಳು ಸೇರಿ, ಒಟ್ಟು ರೂ.**176331.07** ಲಕ್ಷಗಳಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಒಟ್ಟು ರೂ.**99501.15** ಲಕ್ಷಗಳ ವೆಚ್ಚವಾಗಿ ರೂ.**76829.92**ಲಕ್ಷಗಳು ವೆಚ್ಚವಾಗದೇ ಉಳಿದಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿದೆ.

ಗ್ರಾಮ ಪಂಚಾಯತಿಗಳು ಹಣಕಾಸು ಆಯೋಗದ ಶಿಫಾರಸ್ಸಿನ ಅನುದಾನದ ಸ್ವೀಕೃತಿ, ಭರಿಸಿದ ವೆಚ್ಚ ಹಾಗೂ ವರ್ಷಾಂತ್ಯದಲ್ಲಿ ಬಳಕೆಯಾಗದೇ ಬಾಕಿ ಉಳಿದ ಅನುದಾನದ ಜಿಲ್ಲಾವಾರು ವಿವರಗಳನ್ನು **ಅನುಬಂಧ-5** ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು **ಅನುಬಂಧ-5ಎ**ರಲ್ಲಿ ನೀಡಲಾಗಿದೆ.

2016-17ನೇ ಸಾಲಿನಂತ್ಯಕ್ಕೆ 13 ಮತ್ತು 14ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆಗೆ ಓಚರ್/ದಾಖಲಾತಿಗಳನ್ನು ಹಾಜರುಪಡಿಸದೇ ಇರುವುದರಿಂದ 24 ಜಿಲ್ಲೆಗಳ 619 ಗ್ರಾಮಪಂಚಾಯತಿಗಳಲ್ಲಿ ಒಟ್ಟು ರೂ. **3598.74**ಲಕ್ಷಗಳ ಮೊತ್ತದಷ್ಟು ಓಚರ್/ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರಿವುದಿಲ್ಲ. ಈ ಯೋಜನೆಯಡಿ ಓಚರ್/ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವ ಮೊತ್ತ ರೂ.**3598.74**ಲಕ್ಷ ವ್ಯವಹಾರಗಳ ಪರಿಶೀಲನೆ ಸಾಧ್ಯವಾಗಿರುವುದಿಲ್ಲ. ಇದರಿಂದ ಅವುಗಳಲ್ಲಿ ಆಗಿರಬಹುದಾದ ಸಂಭವನೀಯ ಅಕ್ರಮ/ವಂಚನೆ/ ದುರುಪಯೋಗಗಳನ್ನು ಪತ್ತೆ ಹಚ್ಚುವಲ್ಲಿ ಸಾಧ್ಯವಾಗದೆ ಇರುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.5ರಲ್ಲಿ ನೀಡಲಾಗಿದೆ.

ಸರ್ಕಾರದ ಆದೇಶದ ದಿನಾಂಕ:18.04.2007ರಲ್ಲಿ ಗ್ರಾಮ ಪಂಚಾಯಿತಿಗಳು ಸಕಾಲದಲ್ಲಿ ಅಂದರೆ ಏಪ್ರಿಲ್ 30ರ ಒಳಗಾಗಿ ವರ್ಷ್ಯಾಂತ್ಯ ವರದಿ ಮತ್ತು ಬ್ಯಾಂಕ್ ಸಮನ್ವಯ ತಃಖ್ತೆ ಸಿದ್ಧಪಡಿಸಿ ಇಟ್ಟುಕೊಂಡು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಯ ಆಡಿಟ್ ಸಿಬ್ಬಂದಿಯವರುಗಳು ಲೆಕ್ಕತಪಾಸಣೆಗೆ ಬಂದಾಗ ಅನುಮೋದಿತ ವಷ್ಯಾಂತ್ಯ ವರದಿ, ಬ್ಯಾಂಕ್ ಸಮನ್ವಯ ತಃಖ್ತೆ,

ಅನುಮೋದಿತ ಆಯವ್ಯಯ ಹಾಗೂ ಎಲ್ಲಾ ಕಡತಗಳು, ವಹಿಗಳು ಮತ್ತು ದಾಖಲಾತಿಗಳನ್ನು ಹಾಜರುಪಡಿಸದೇ ಇರುವುದರಿಂದ ಸಕಾಲದಲ್ಲಿ ಆಡಿಟ್ ಕಾರ್ಯ ಮುಗಿಸಲು ಸಾಧ್ಯವಾಗದೆ ಜೊತೆಗೆ ಮಾನವ ದಿನಗಳು ವ್ಯರ್ಥವಾಗುತ್ತವೆ. ವಿನಾಕಾರಣ ಇಲಾಖೆಯ ಸದರಿ ಸಿಬ್ಬಂದಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಾವತಿಸುವಂತಹ ಪ್ರಸಂಗ ಉಂಟಾಗುತ್ತಿದೆ. ಸದರಿ ಸರ್ಕಾರದ ಆದೇಶದ ಕಂಡಿಕೆ 9ರಲ್ಲಿ ಇಂತಹ ಪ್ರಕರಣಗಳು ಉದ್ಭವಿಸುವಂತಿಲ್ಲ ಎಂದು ಸೂಚನೆಯನ್ನು ನೀಡಲಾಗಿದೆ. ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದಿದೆ. ಇಂತಹ ಪ್ರಕರಣಗಳ ಬಗ್ಗೆ ಸರ್ಕಾರ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಜರುಗಿಸಲು ಕೋರಿದೆ.

## 4.6 ವಿವಿಧ ಯೋಜನೆಗಳ ಕೆಲವು ಕಾಮಗಾರಿಗಳಿಗೆ ಅನುಮೋದಿತ ಅಂದಾಜು ಪಟ್ಟಿ ಇಲ್ಲದೆ ಹಣ ಪಾವತಿ ಮಾಡಿರುವುದು.

ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006, ನಿಯಮ 74ರ ಪ್ರಕಾರ ಯಾವುದೇ ಕಾಮಗಾರಿಯನ್ನು ಅಂದಾಜುಪಟ್ಟಿ ಸಿದ್ದಪಡಿಸದೆ ಆರಂಭಿಸುವಂತಿಲ್ಲ, ನಿಯಮ 81ರ ಪ್ರಕಾರ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ಪಡೆದು ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಿರುತ್ತದೆ. ನಿಯಮ 85ರ ಪ್ರಕಾರ ಅಳತೆ ಪುಸ್ತಕವನ್ನು ನಿರ್ವಹಿಸಬೇಕಿರುತ್ತದೆ. ನಿಯಮ 92ರ ಪ್ರಕಾರ ಕಾಮಗಾರಿ ಮುಕ್ತಾಯ ವರದಿಯನ್ನು ಗ್ರಾಮಪಂಚಾಯಿತಿಯು ನೀಡಬೇಕಿರುತ್ತದೆ. ಆದರೆ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಯೋಜನೆಗಳಲ್ಲಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆಳಕಂಡ ನ್ಯೂನ್ಯತೆಗಳನ್ನು ಲೆಕ್ಕಪರಿಶೋಧನೆ ವೇಳೆಯಲ್ಲಿ ಗಮನಿಸಿದೆ,

1. ಅಂದಾಜು ಪಟ್ಟಿ ತಯಾರಿಸದೆ ಕಾಮಗಾರಿ ನಿರ್ವಹಿಸಿರುವುದು.
2. ಅಳತೆ ಪುಸ್ತಕದಲ್ಲಿ ದಾಖಲಿಸಿದೆ ಕಾಮಗಾರಿ ನಿರ್ವಹಿಸಿರುವುದು.
3. ಮೂಲ ಅಂದಾಜು ಪಟ್ಟಿ ಇಲ್ಲದೆ, ಕಾಮಗಾರಿ ಬಿಲ್ಲು ಪಾವತಿಸಿರುವುದು.
4. ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ಪಡೆಯದೇ ಇರುವುದು.
5. ಕಾಮಗಾರಿಗಳಿಗೆ ಸಂಬಂಧಿಸಿದ ಆಡಳಿತ ಮಂಜೂರಾತಿ, ತಾಂತ್ರಿಕ ಮಂಜೂರಾತಿ ಆಗದಿರುವುದು, ಬಿಲ್ಲು ಪಾಸಿಂಗ್ ನಮೂದಿಸದಿರುವುದು.
6. ಸಕ್ಷಮ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ, ಕಾಮಗಾರಿ ಕೈಗೊಂಡಿರುವುದು.
7. ಮುಕ್ತಾಯ ಪ್ರಮಾಣ ಪತ್ರ ಇಲ್ಲದಿರುವುದು.

ಈ ಮೇಲ್ಕಂಡ ನ್ಯೂನ್ಯತೆಗಳಿಂದ ಕಾಮಗಾರಿಗಳ ವೆಚ್ಚ ಸಂಬಂಧ ಈ ಕೆಳಕಂಡಂತೆ 5 ಜಿಲ್ಲೆಯಲ್ಲಿನ 14 ಪ್ರಕರಣಗಳಲ್ಲಿ ಒಟ್ಟು ಮೊತ್ತ ರೂ.**10.72** ಲಕ್ಷಗಳು. ಈ ಕುರಿತಂತೆ ವಿವರಗಳು ಕೆಳಗಿನಂತಿವೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.6ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| **1** | **2** | **3** | **4** | **5** | **6** |
| 1 | ಬೆಂಗಳೂರು | 1 | 1 | 1.91 | 0.00 |
| 2 | ಬೆಳಗಾವಿ | 1 | 1 | 0.35 | 0.00 |
| 3 | ಕೊಡುಗು | 4 | 4 | 3.35 | 0.00 |
| 4 | ಶಿವಮೊಗ್ಗ | 5 | 5 | 2.81 | 0.04 |
| 5 | ತುಮಕೂರು | 3 | 3 | 2.18 | 0.08 |
| | ಒಟ್ಟು | 14 | 14 | 10.60 | 0.12 |
| | **ಒಟ್ಟು ಮೊತ್ತ** | | | **10.72** | |

## 4.7 ಕಾಮಗಾರಿಗಳ ವಿವರವನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸದಿರುವುದು, ಕ್ರಿಯಾ ಯೋಜನೆಗೆ ಸಕ್ಷಮ ಪ್ರಾಧಿಕಾರದ ಅನುಮೊದನೆ ಪಡೆಯದೆ ಮಾಡಿರುವ ವೆಚ್ಚ ರೂ.21.04ಲಕ್ಷಗಳು.

05 ಜಿಲ್ಲೆಗಳಲ್ಲಿನ 20 ಗ್ರಾಮ ಪಂಚಾಯಿತಿಗಳಲ್ಲಿ 13ನೇ ಹಣಕಾಸು ಹಾಗೂ ಇತರೆ ಯೋಜನೆಗಳಡಿಯಲ್ಲಿ 20 ಪ್ರಕರಣಗಳಲ್ಲಿ ಕಾಮಗಾರಿಗಳ ವಿವರವನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸದಿರುವುದು, ಅಂದಾಜು ಪತ್ರಿಕೆಯನ್ನು ತಯಾರಿಸದಿರುವುದು, ಅಳತೆ ಪುಸ್ತಕದಲ್ಲಿ ನಮೂದಿಸದಿರುವುದು ಮತ್ತು ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳುರವರ ಸಹಿ ಆಗದಿರುವುದನ್ನು ಲೆಕ್ಕಪರಿಶೋಧನೆ ವೇಳೆಯಲ್ಲಿ ಗಮನಿಸಿದ್ದು, ನ್ಯೂನ್ಯತೆಗಳ ವಿವರವನ್ನು ಸಂಬಂಧಪಟ್ಟ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಿದೆ ಮತ್ತು ರೂ**21.04** ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತಂತೆ ವಿವರಗಳು ಕೆಳಗಿನಂತಿವೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.7ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ |
|---|---|---|---|---|
| **1** | **2** | **3** | **4** | **5** |
| **1** | **ಬೆಂಗಳೂರು** | **1** | **1** | **4.00** |
| **2** | **ದಾವಣಗೆರೆ** | **5** | **5** | **1.46** |
| **3** | **ಗದಗ** | **1** | **1** | **1.11** |
| **4** | **ಕೊಡುಗು** | **4** | **4** | **7.09** |
| **5** | **ಶಿವಮೊಗ್ಗ** | **9** | **9** | **7.38** |
| | **ಒಟ್ಟು** | **20** | **20** | **21.04** |
| | **ಒಟ್ಟು ಮೊತ್ತ** | | | **21.04** |

### 4.8 ವಿವಿಧ ಯೋಜನೆಗಳ ಕಾಮಗಾರಿ ಬಿಲ್ಲುಗಳಲ್ಲಿ ಪಾವತಿಸಿರುವ ಅಧಿಕ ಮೊತ್ತ ರೂ. 16.47ಲಕ್ಷಗಳು.

ಗ್ರಾಮ ಪಂಚಾಯಿತಿಗಳಲ್ಲಿ 13ನೇ ಹಣಕಾಸು, ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ನೀರು ಸರಬರಾಜು, ಮತ್ತು ಇತರೆ ಯೋಜನೆ ಕಾಮಗಾರಿ ಬಿಲ್ಲುಗಳನ್ನು ಪಾಸು ಮಾಡುವಲ್ಲಿ 10 ಜಿಲ್ಲೆಗಳ 86 ಗ್ರಾಮ ಪಂಚಾಯಿತಿಗಳ 86 ಪ್ರಕರಣಗಳಲ್ಲಿ ಆಕ್ಷೇಪಿತ ಮೊತ್ತ ರೂ.**12.69**ಲಕ್ಷ ಹಾಗೂ ವಸೂಲಾತಿ ಮೊತ್ತ ರೂ.3.78ಲಕ್ಷಗಳು ಬಿಲ್ಲುಗಳ ಮೊತ್ತಕ್ಕಿಂತ ಅಧಿಕ ಮೊತ್ತ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ಇದು ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 16ಕ್ಕೆ ವಿರುದ್ಧವಾಗಿದ್ದು, ಒಟ್ಟು ಮೊತ್ತ ರೂ.**3.78**ಲಕ್ಷಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಯೋಜನೆಗಳ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ಹಾಗೂ ರೂ.**16.47**ಲಕ್ಷಗಳಿಗೆ ಸೂಕ್ತದಾಖಲೆಗಳನ್ನು ಒದಗಿಸುವ ಬಗ್ಗೆ ಸಂಬಂಧಪಟ್ಟ ಗ್ರಾಮಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿದ್ದು ಈ ಕುರಿತು ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಿದೆ. ಈ ಕುರಿತಂತೆ ವಿವರಗಳು ಕೆಳಗಿನಂತಿವೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.7ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 12 | 12 | 0.00 | 0.72 |
| 2 | ಚಿಕ್ಕಮಗಳೂರು | 1 | 1 | 0.00 | 0.04 |
| 3 | ದಾವಣಗೆರೆ | 5 | 5 | 0.00 | 0.14 |
| 4 | ಕೋಲಾರ | 1 | 1 | 0.00 | 0.10 |
| 5 | ಕೊಡುಗು | 7 | 7 | 0.21 | 0.17 |
| 6 | ಮೈಸೂರು | 3 | 3 | 0.02 | 0.03 |
| 7 | ರಾಯಚೂರು | 2 | 2 | 0.00 | 0.00 |
| 8 | ಶಿವಮೊಗ್ಗ | 47 | 47 | 12.46 | 1.76 |
| 9 | ತುಮಕೂರು | 7 | 7 | 0.00 | 0.71 |
| 10 | ಉಡುಪಿ | 1 | 1 | 0.00 | 0.12 |
| ಒಟ್ಟು | | 86 | 86 | 12.69 | 3.78 |
| ಒಟ್ಟು ಮೊತ್ತ | | | | 16.47 | |

### 4.9 ವಿವಿಧ ಕಾಮಗಾರಿ/ಸಾಮಗ್ರಿ/ ಇತರೆ ಪಾವತಿಗಳಲ್ಲಿ ಕಂಡು ಬಂದ ನ್ಯೂನ್ಯತೆಗಳು

2016-17ನೇ ಸಾಲಿನ ವಿವಿಧ ಯೋಜನೆಯಡಿಯಲ್ಲಿ ಬರುವ ಕಾಮಗಾರಿಗಳಲ್ಲಿ ಕಂಡುಬರುವ ನ್ಯೂನ್ಯತೆಗಳ ಒಟ್ಟು ಆಕ್ಷೇಪಿತ ಮೊತ್ತ ರೂ.**483.10** ಲಕ್ಷ ಹಾಗೂ ವಸೂಲಾತಿ ಮೊತ್ತ ರೂ.**36.35**ಲಕ್ಷಗಳಷ್ಟು ಆಗಿದ್ದು. ಇದು ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 16ಕ್ಕೆ ವಿರುದ್ಧವಾಗಿರುತ್ತದೆ. ಈ ಕುರಿತು ಆಕ್ಷೇಪಣೆ ವಸೂಲಾತಿ ಮೊತ್ತಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ಸೂಕ್ತ ಕ್ರಮಕ್ಕೆ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ

ಮಾಡಿದೆ. ಈ ಕುರಿತಂತೆ ವಿವರಗಳು ಕೆಳಗಿನಂತಿವೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.9ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 4 | 5 | 6 | 7 |
| 1 | ಬೆಂಗಳೂರು | 26 | 26 | 125.05 | 2.99 |
| 2 | ಬೆಳಗಾವಿ | 14 | 14 | 3.04 | 17.78 |
| 3 | ಬೀದರ್ | 1 | 1 | 14.10 | 0.00 |
| 4 | ಚಿಕ್ಕಮಗಳೂರು | 1 | 1 | 0.37 | 0.00 |
| 5 | ದಾವಣಗೆರೆ | 8 | 8 | 6.96 | 2.28 |
| 6 | ಗದಗ | 40 | 40 | 174.45 | 9.59 |
| 7 | ಹಾಸನ | 2 | 2 | 6.32 | 0.00 |
| 8 | ಹಾವೇರಿ | 7 | 7 | 16.95 | 3.40 |
| 9 | ಕೋಲಾರ | 2 | 2 | 0.00 | 0.06 |
| 10 | ಕೊಪ್ಪಳ | 15 | 15 | 74.28 | 0.00 |
| 11 | ಮೈಸೂರು | 4 | 4 | 5.97 | 0.00 |
| 12 | ಶಿವಮೊಗ್ಗ | 43 | 43 | 15.83 | 0.68 |
| 13 | ತುಮಕೂರು | 8 | 8 | 12.23 | 0.08 |
| 14 | ಉಡುಪಿ | 2 | 2 | 14.15 | 0.00 |
| 15 | ವಿಜಯಪುರ | 8 | 8 | 13.39 | 0.00 |
| | ಒಟ್ಟು | 181 | 181 | 483.10 | 36.85 |
| | ಒಟ್ಟು ಮೊತ್ತ | | | 519.45 | |

## 4.10 ವಿವಿಧ ಯೋಜನೆಗಳಡಿ ಮಂಜೂರಾದ ಅನುದಾನವನ್ನು ಬಳಕೆ ಮಾಡದೆಯಿರುವುದು/ಭಾಗಶಃ ಬಳಕೆ ಮಾಡಿರುವ ಪ್ರಕರಣಗಳು

2016–17ನೇ ಸಾಲಿನ ವಿವಿಧ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವನ್ನು ಬಳಕೆ ಮಾಡದೆಯಿರುವುದು/ಭಾಗಶಃ ಬಳಕೆ ಮಾಡಿರುವ ಪ್ರಕರಣಗಳು ಒಟ್ಟು ಮೊತ್ತ ರೂ.**79.48** ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಆಗಿದ್ದು. ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 4.10ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ | ಆಕ್ಷೇಪಣೆ ಮೊತ್ತ |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು | 1 | 1 | 0.76 |
| 2 | ಬೆಳಗಾವಿ | 2 | 2 | 73.31 |
| 3 | ತುಮಕೂರು | 1 | 2 | 5.41 |
| ಒಟ್ಟು ಮೊತ್ತ | | 4 | 5 | 79.48 |

**4.11 ಕಾಮಗಾರಿಗಳ ಅಳತೆಯನ್ನು ಅಳತೆ ಪುಸ್ತಕದಲ್ಲಿ ನಮೂದಿಸಿದ್ದು ಸಂಬಂಧಪಟ್ಟ ಇಂಜಿನಿಯರ್ ಸಹಿ ಮತ್ತು ಹೆಸರನ್ನು ನಮೂದಿಸದೆ ಇರುವ ಪ್ರಕರಣಗಳ ಆಕ್ಷೇಪಣೆ ಮೊತ್ತ ರೂ.8.32ಲಕ್ಷಗಳು.**

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 85ರ ಪ್ರಕಾರ ಕಾಮಗಾರಿ ನಿರ್ವಹಿಸಿದ ಸ್ಥಳದಲ್ಲಿಯೇ ಅಳತೆ ಪುಸ್ತಕದಲ್ಲಿ ವಿವರವನ್ನು ದಾಖಲಿಸಿ, ಅಳತೆ ಪುಸ್ತಕವನ್ನು ಬಳಸುವ ಇಂಜಿನಿಯರ್ ಹೆಸರನ್ನು ನಮೂದಿಸಿ ಸಹಿಯನ್ನು ಒಳಗೊಂಡಿರಬೇಕಾಗಿರುತ್ತದೆ. ದಿನಾಂಕ:31-03-2017ರ ಅಂತ್ಯಕ್ಕೆ ಗ್ರಾಮಪಂಚಾಯತಿಗಳು ವಿವಿಧ ಕಾಮಗಾರಿಗಳನ್ನು ಕೈಗೊಂಡಿದ್ದು ವಿವರವನ್ನು ಪರಿಶೀಲಿಸಲಾಗಿ ಈ ಕೆಳಗಿನ ಪ್ರಕರಣಗಳಲ್ಲಿ ಕಾಮಗಾರಿಯ ಅಳತೆ ಪುಸ್ತಕಗಳಲ್ಲಿನ ದಾಖಲೆಗಳಿಗೆ ಸಂಬಂಧಿಸಿದ ಇಂಜಿನಿಯರ್ ರುಜುವಿಲ್ಲದೆ ಮತ್ತು ಹೆಸರನ್ನು ನಮೂದಿಸದೆ ಇರುವುದರಿಂದ ರೂ.**8.32**ಗಳನ್ನು ಆಕ್ಷೇಪಣೆಯಲ್ಲಿಟ್ಟಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 4.11ರಲ್ಲಿ ನೀಡಲಾಗಿದೆ.

**ರೂ.ಲಕ್ಷಗಳಲ್ಲಿ)**

| ಕ್ರಸಂ. | ಜಿಲ್ಲೆಯ ಹೆಸರು | ತಾಲ್ಲೂಕು ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಳಗಾವಿ | ಚಿಕ್ಕೋಡಿ | ಸಿದ್ನಾಳ | 58 | 3.81 |
| | | | ಶಿರದವಾಡ | 56/1 | 4.07 |
| | | | ಉಮರಾಣಿ | 57 | 0.44 |
| | | 1 | 3 | 3 | 8.32 |

**4.12 ಗ್ರಾಮ ಸ್ವರಾಜ್ ಯೋಜನೆಯಡಿ 2016-17ನೇ ಸಾಲಿನ ಅಂತ್ಯಕ್ಕೆ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳ ಆಕ್ಷೇಪಣೆ ಮೊತ್ತ ರೂ.1.72 ಲಕ್ಷಗಳು.**

2016-17ನೇ ಸಾಲಿನಂತ್ಯಕ್ಕೆ ಕೊಪ್ಪಳ ಜಿಲ್ಲೆಯ ಕಿಲ್ಲಾರಹಟ್ಟಿ ಗ್ರಾಮಪಂಚಾಯತಿಯಲ್ಲಿ **ರೂ.1.72 ಲಕ್ಷಗಳ ಆಕ್ಷೇಪಣೆ** ಮೊತ್ತದಷ್ಟು ಓಚರ್/ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಈ ಯೋಜನೆಯಡಿ ಓಚರ್/ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**4.13 ಕಾಮಗಾರಿಗಳ ವಸತಿ ಮತ್ತು ಇತರ ಯೋಜನೆಗಳಲ್ಲಿ ಗ್ರಾಮಪಂಚಾಯತಿಗಳಿಂದ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದ ರೂ.17980.74ಲಕ್ಷಗಳ ಮೊತ್ತದ ದಾಖಲೆಗಳು ಹಾಗೂ ಓಚರ್ಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.**

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 43 ಮತ್ತು 44ರನ್ವಯ ಲೆಕ್ಕ ತನಿಖೆಗೆ ಓಚರ್ಸ್ ಮತ್ತು **ಸಂಬಂಧಿಸಿದ** ದಾಖಲೆಗಳನ್ನು ಹಾಜರುಪಡಿಸಬೇಕಾಗಿರುತ್ತದೆ. ಸರಕಾರಿ **ಆದೇಶ ಸಂಖ್ಯೆ: ಗ್ರಾಅಪ 29 ಲೆಪಬಿ 2006**

**ಬೆಂಗಳೂರು, ದಿನಾಂಕ:18.04.2007.ರಂತೆ** 35 ವಿವಿಧ ಯೋಜನೆಗಳ ಅಡಿಯಲ್ಲಿ ಬಿಡುಗಡೆ ಮಾಡಿದ ಒಟ್ಟು ಮೊತ್ತದ ಅನುದಾನಕ್ಕೆ ಎದುರಾಗಿ ಆಕ್ಷೇಪಿತ ಮೊತ್ತ ರೂ.**17904.93**ಲಕ್ಷಗಳು ಮತ್ತು ವಸೂಲಾತಿ ಮೊತ್ತ ರೂ.**75.81**ಲಕ್ಷಗಳು ವೋಚರ್ಸ್/ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆ ಮಾಡಿದ ಮೊತ್ತಕ್ಕೆ ಓಚರ್ಸ್ ಇನ್ನಿತರ ದಾಖಲಾತಿಗಳನ್ನು ಒದಗಿಸದೇ ಇರುವ ಸಂಧರ್ಭದಲ್ಲಿ ಸದರಿ ಯೋಜನೆಗಳಡಿಯಲ್ಲಿ ಶೇಕಡಾವಾರು ಸಾಧಿಸಿರುವ ಪ್ರಗತಿ ಮತ್ತು ಇದರಲ್ಲಿ ಕೆಲವು ಯೋಜನೆಗಳು ನಿರ್ದಿಷ್ಟ ಜಾತಿ/ಪಂಗಡಕ್ಕೆ ಸೇರಿದ್ದು, ಆ ಬಗ್ಗೆ ಶೇಕಡಾವಾರು ಸಾಧಿಸಿದ ಪ್ರಗತಿ ಬಗ್ಗೆ ವಿವರಗಳು ದೊರೆಯುವುದಿಲ್ಲ.

ಗ್ರಾಮಪಂಚಾಯಿತಿಗಳಲ್ಲಿ ಮುಖ್ಯವಾಗಿ ನಿರ್ವಹಿಸಿರುವ ವಿವಿಧ ಯೋಜನೆಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ವಿವಿಧ ಯೋಜನೆಗಳ ಅಡಿಯಲ್ಲಿ ಓಚರ್ ಮತ್ತು ದಾಖಲಾತಿಗಳನ್ನು ಹಾಜರುಪಡಿಸದಿರುವ ಯೋಜನಾವಾರು ಹಾಗೂ ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.13ರಲ್ಲಿ ನೀಡಲಾಗಿದೆ.

### 4.14 ಅನುದಾನ ಮಾರ್ಗಪಲ್ಲಟ ಮಾಡಿರುವ ಪ್ರಕರಣಗಳಲ್ಲಿ ಆಕ್ಷೇಪಣೆ ಮೊತ್ತ ರೂ.88.18 ಲಕ್ಷ ಹಾಗೂ ವಸೂಲಾತಿಗೆ ಸೂಚಿಸಿದ ಮೊತ್ತ ರೂ.1.78ಲಕ್ಷ.

ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 161 (ಬಿ)(5)ರ ಪ್ರಕಾರ ಯಾವುದೇ ನಿರ್ದಿಷ್ಟ ಯೋಜನೆಗೆ ಬಿಡುಗಡೆ ಮಾಡಲಾದ ಅನುದಾನವನ್ನು ಬೇರೆ ಉದ್ದೇಶಗಳಿಗೆ ಉಪಯೋಗ/ಮಾರ್ಗಪಲ್ಲಟ ಮಾಡಿ ಬಳಸುವಂತಿಲ್ಲ. ಆದರೆ ಮೇಲಿನ ನಿಯಮಗಳನ್ನು ಕಡೆಗಣಿಸಿ 9 ಜಿಲ್ಲೆಗಳಲ್ಲಿನ 32 ಗ್ರಾಮ ಪಂಚಾಯಿತಿಗಳಲ್ಲಿ ನಿಗಧಿತ ಯೋಜನೆಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾದ ಅನುದಾನವನ್ನು ಸಂಬಂಧಪಟ್ಟ ಯೋಜನೆಗಳಿಗೆ ಬಳಸದೆ ಮಾರ್ಗಪಲ್ಲಟ ಮಾಡಿ ಬೇರೆ ಯೋಜನೆಗಳಿಗೆ ಬಳಸಿರುವುದು ಕಂಡುಬಂದಿರುತ್ತದೆ. ಇದರಿಂದ ಅನುದಾನ ಬಿಡುಗಡೆ ಉದ್ದೇಶವು ಸಫಲವಾಗುವುದಿಲ್ಲ. ಸಂಪುಟ 2ರ 4.14ರಲ್ಲಿ ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು | 3 | 3 | 48.72 | 0.00 |
| 2 | ಬೆಳಗಾವಿ | 6 | 6 | 10.26 | 0.00 |
| 3 | ಬೀದರ್ | 3 | 3 | 2.04 | 0.00 |
| 4 | ಚಿಕ್ಕಮಗಳೂರು | 4 | 4 | 14.32 | 0.00 |
| 5 | ದಾವಣಗೆರೆ | 6 | 6 | 2.30 | 1.78 |

| | | | | | |
|---|---|---|---|---|---|
| 6 | ಧಾರವಾಡ | 1 | 1 | 0.24 | 0.00 |
| 7 | ಮೈಸೂರು | 1 | 1 | 0.92 | 0.00 |
| 8 | ಶಿವಮೊಗ್ಗ | 4 | 4 | 2.12 | 0.00 |
| 9 | ತುಮಕೂರು | 4 | 4 | 7.27 | 0.00 |
| | ಒಟ್ಟು | 32 | 32 | 88.18 | 1.78 |
| ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ) | | | | 89.97 | |

## 4.15 ಅನುಮೋದಿತ ಟೆಂಡರ್ ಷೆಡ್ಯೂಲ್ 'ಬಿ' ಪರಿಮಾಣ ಕ್ಕಿಂತ ಹೆಚ್ಚಿನ ಪರಿಮಾಣಕ್ಕೆ ಬಿಲ್ ಪಾವತಿಸಿರುವುದು ಮತ್ತು ಮಂಜೂರಾದ ಅಂದಾಜು ಪತ್ರಿಕೆ ಮೊತ್ತಕ್ಕಿಂತ ಹೆಚ್ಚಿಗೆ ಪಾವತಿಸಿರುವುದು.

ಅನುಮೋದಿತ ಟೆಂಡರ್ ಷೆಡ್ಯೂಲ್ 'ಬಿ'ಗಿಂತ ಹೆಚ್ಚಿನ ಪ್ರಮಾಣಕ್ಕೆ ಹಾಗೂ ಮಂಜೂರಾದ ಅಂದಾಜು ಪತ್ರಿಕೆ ದರಕ್ಕಿಂತ ಹೆಚ್ಚಾಗಿ ಬಿಲ್ ಪಾವತಿಸಿರುವುದು ಈ ಕೆಳಕಂಡ 4 ಜಿಲ್ಲೆಗಳಲ್ಲಿ 14 ಪ್ರಕರಣಗಳು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದೆ. ಆಕ್ಷೇಪಣೆ ಮೊತ್ತ **3.42** ಲಕ್ಷಗಳನ್ನು ಹಾಗೂ ರೂ.**0.47** ಲಕ್ಷಗಳನ್ನು ವಸೂಲಾತಿಗೆ ಸೂಚಿಸಿದೆ .ವಿವರ ಈ ಕೆಳಕಂಡಂತಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2ರ 4.15ರಲ್ಲಿ ನೀಡಲಾಗಿದೆ.

## 4.16 ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಹಣ ಸಂದಾಯ ಮಾಡಿರುವ ಪ್ರಕರಣಗಳ ಆಕ್ಷೇಪಣೆ ಮೊತ್ತ ರೂ. 29.53ಲಕ್ಷಗಳು ಹಾಗೂ ವಸೂಲಾತಿ ಮೊತ್ತ ರೂ.14.33 ಲಕ್ಷಗಳು.

ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಹಣ ಸಂದಾಯ ಮಾಡಿರುವಜಿಲ್ಲೆಗಳ 30 ಗ್ರಾಮ ಪಂಚಾಯಿತಿಗಳಲ್ಲಿ 30 ಪ್ರಕರಣಗಳು ಕಂಡುಬಂದಿದ್ದು ಸಂಬಂಧಪಟ್ಟ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಿಸಲಾಗಿದೆ.

ವಿವಿಧ ಯೋಜನೆಗಳಡಿಯಲ್ಲಿ ವಿವಿಧ ಕಾಮಗಾರಿಗಳಗಾಗಿ ವೆಚ್ಚ ನಿರ್ವಹಿಸಲು ಸರ್ಕಾರವು ಅನುದಾನವನ್ನು ಒದಗಿಸಿದ್ದು, ಯೋಜನೆಗಳ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಹಣ ಸಂದಾಯ ಮಾಡಿರುವ ಪ್ರಕರಣಗಳು ಗಮರ್ನಾಹ ನ್ಯೂನ್ಯತೆಯಾಗಿರುತ್ತದೆ. ಆಕ್ಷೇಪಣೆ ಮೊತ್ತ ರೂ.**29.53** ಲಕ್ಷಗಳು ಹಾಗೂ ರೂ.**14.33** ಲಕ್ಷಗಳನ್ನು ವಸೂಲಾತಿಗೆ ಸೂಚಿಸಿದ್ದು, ನಿರ್ದಿಷ್ಟ ನ್ಯೂನ್ಯತೆಗಳನ್ನು ಆಯಾ ಸಂಸ್ಥೆಯ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಲಾಗಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ 4.16ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿ ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 4 | 5 | 6 | 7 |
| 1 | ದಾವಣಗೆರೆ | 23 | 23 | 26.19 | 12.15 |
| 2 | ಧಾರವಾಡ | 6 | 6 | 2.50 | 2.17 |

| | | | | | |
|---|---|---|---|---|---|
| 3 | ಹಾವೇರಿ | 1 | 1 | 0.85 | 0.00 |
| | ಒಟ್ಟು | 30 | 30 | 29.53 | 14.33 |
| **ಒಟ್ಟು ಮೊತ್ತ** | | | | **43.86** | |

### 4.17 ಬೀದಿ ದೀಪ ನಿರ್ವಹಣೆ ಹಾಗೂ ಇತರೆ ದುರಸ್ತಿ ಮತ್ತು ನ್ಯೂನ್ಯತೆಗಳು

2016–17ನೇ ಸಾಲಿನ ಲೆಕ್ಕಪರಿಶೋಧನೆಯ ಕಂಡಿಕೆ ಸಂಖ್ಯೆ–45 & 36 ರಲ್ಲಿ ತಿಳಿಯಪಡಿಸಿರುವಂತೆ ಬೀದಿ ದೀಪಗಳ ನಿರ್ವಹಣೆಯಲ್ಲಿ ಆಗಿರುವ ನ್ಯೂನ್ಯತೆಗಳಿಂದಾಗಿ ರೂ3.75 ಲಕ್ಷಗಳು ಹೆಚ್ಚಿಗೆ ಪಾವತಿಸಿರುವುದು ಕಂಡುಬಂದಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ 2 ರ **4.17**ರಲ್ಲಿ ನೀಡಲಗಿದೆ.

### 4.18 ಸಾಮಾನ್ಯ ಅಭಿಪ್ರಾಯ:

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 246(1) ಪ್ರಕಾರ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ ಇವರು ಶಾಸನಬದ್ಧ ಲೆಕ್ಕಪರಿಶೋಧಕರಾಗಿದ್ದು ರಾಜ್ಯದ ಒಟ್ಟು 6033 ಗ್ರಾಮ ಪಂಚಾಯತಿಗಳಲ್ಲಿ 5461 ಗ್ರಾಮ ಪಂಚಾಯತಿಗಳ 2016–17ರ ಆರ್ಥಿಕ ವರ್ಷದ ಲೆಕ್ಕ ಪರಿಶೋಧನೆಯನ್ನು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿರುವ ಸಹಾಯಕ ನಿಯಂತ್ರಕರು/ಅಧೀನ ಸಿಬ್ಬಂದಿಯವರಿಂದ ಕೈಗೊಂಡು ವರದಿಗಳನ್ನು ಬಿಡುಗಡೆ ಮಾಡಿಲಾಗಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್(ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 108 ಮತ್ತು 109ರಲ್ಲಿ ಸೂಚಿಸಿರುವಂತೆ, ಗ್ರಾಮ ಪಂಚಾಯತಿಗಳು ಸಕಾಲದಲ್ಲಿ ತಮ್ಮ ಲೆಕ್ಕಪತ್ರಗಳನ್ನು ಸಲ್ಲಿಸಿದಲ್ಲಿ, ನಿಗದಿತ ಸಮಯದಲ್ಲಿ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲು ಸಾಧ್ಯವಾಗುವುದಲ್ಲದೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಲೆಕ್ಕ ಪರಿಶೋಧನ ಕಾರ್ಯ ಹೆಚ್ಚು ಪರಿಣಾಮಕಾರಿ ಹಾಗೂ ಪೂರಕವಾಗಬಹುದಾಗಿದೆ. ಲೆಕ್ಕ ಪರಿಶೋಧನೆಯಲ್ಲಿ ಕಾರ್ಯ ವಿಧಾನದಲ್ಲಿಯ ಲೋಪಗಳು, ನಿಯಮಗಳನ್ನು ಪಾಲಿಸದಿರುವ ಪ್ರಕರಣಗಳು, ಫಲಪ್ರದವಲ್ಲದ ವೆಚ್ಚಗಳು, ಸರ್ಕಾರಕ್ಕೆ ಜಮಾ ಮಾಡಬೇಕಾದ ತೆರಿಗೆಯ ಮೊತ್ತವನ್ನು ಗ್ರಾಮಪಂಚಾಯತಿಗಳೇ ಉಳಿಸಿಕೊಂಡು ಮಾರ್ಗಪಲ್ಲಟ ಮಾಡಿ ಬಳಕೆ ಮಾಡಿ ಎಸಗಿರುವ ತಾತ್ಕಾಲಿಕ ಹಣ ದುರುಪಯೋಗದ ಪ್ರಕರಣಗಳು, ಹಣ ದುರುಪಯೋಗದ ಪ್ರಕರಣಗಳು ಮತ್ತು ನಿಗದಿತ ತೆರಿಗೆಗಳನ್ನು ಕಡಿಮೆ ವಸೂಲಿ ಮಾಡಿರುವ ಪ್ರಕರಣಗಳು ಮುಂತಾದ ಅಂಶಗಳಿಗೆ ಲೆಕ್ಕ ಪರಿಶೋಧನೆಯಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಇಂತಹವುಗಳು ಪುನರಾವರ್ತನೆ ಆಗದಂತೆ ಗ್ರಾಮ ಪಂಚಾಯತಿಯ ಆಡಳಿತ ವರ್ಗವು ನಿಗದಿತ ಅವಧಿಯೊಳಗೆ ಸೂಕ್ತ ಕ್ರಮ ಜರುಗಿಸಬೇಕಾಗುತ್ತದೆ.

ಪ್ರತಿ ಗ್ರಾಮಪಂಚಾಯತಿಯು ಬ್ಯಾಂಕ್ ಖಾತೆಗಳಲ್ಲಿನ ವಹಿವಾಟನ್ನು ಪ್ರತಿ ತಿಂಗಳು ನಿಯಮಿತವಾಗಿ ಲೆಕ್ಕ ಸಮನ್ವಯ ಮಾಡುವುದರಿಂದ ಹಣ ದುರುಪಯೋಗ/ವಂಚನೆ ಪ್ರಕರಣಗಳನ್ನು ಸಕಾಲದಲ್ಲಿ ಪತ್ತೆ ಹಚ್ಚಲು ಸಾಧ್ಯವಾಗುತ್ತದೆ. ಈ ಬಗ್ಗೆ ಕಟ್ಟುನಿಟ್ಟಿನ ಉಸ್ತುವಾರಿ ಕ್ರಮದ ಅಗತ್ಯವಿದೆ. ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಲೆಕ್ಕ ಸಮನ್ವಯ ಮಾಡಿರುವ ಅಂಶವನ್ನು ಕಾಲಕಾಲಕ್ಕೆ ಖಚಿತಪಡಿಸಿಕೊಳ್ಳುವುದು

ಅವಶ್ಯವಿರುತ್ತದೆ ಹಾಗೂ ಪ್ರತಿ ಮಾಹೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯಿತಿ ಸ್ವೀಕೃತಿ ಮತ್ತು ವೆಚ್ಚಗಳ ಮಾಸಿಕ ಲೆಕ್ಕ ಸಿದ್ಧಪಡಿಸಿ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳಿಗೆ ಸಲ್ಲಿಸದಿರುವುದು ಕಂಡುಬಂದಿದೆ.

ಗ್ರಾಮಪಂಚಾಯಿತಿ ಯೋಜನೆಗಳ ಅನುಷ್ಠಾನದಲ್ಲಿ ಕಂಡುಬಂದ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತದೆ.

1. ದ್ವಿನಮೂದು ಲೆಕ್ಕನಿರ್ವಹಣೆ ಪಾವತಿಸಿರುವ ಪ್ರಕರಣಗಳು
2. ಗ್ರಾಮಪಂಚಾಯಿತಿಗೆ ಬಂದಿರುವ ಆದಾಯಕ್ಕೆ ರಶೀದಿ ಪುಸ್ತಕಗಳನ್ನು ಪಾಸು ಮಾಡಿರುವ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವುದು ಮತ್ತು ನಿರ್ವಹಿಸದೇ ಇರುವ ಪ್ರಕರಣಗಳು.
3. ಠೇವಣಿಗಳ ವಹಿ ಚರ ಮತ್ತು ಸ್ಥಿರಾಸ್ಥಿ ವಹಿ ನಿರ್ವಹಿಸಿದಿರುವ ಪ್ರಕರಣಗಳು
4. ಗ್ರಾಮಪಂಚಾಯಿತಿ ನಿಧಿಯಿಂದ ಸಿಬ್ಬಂದಿ ವೇತನವನ್ನು ಶೇ40 ಕ್ಕಿಂತ ಹೆಚ್ಚಿಗೆ ಪಾವತಿಸಿರುವ ಪ್ರಕರಣಗಳು
5. ವಾಹನದ ಲಾಗ್ ಪುಸ್ತಕ ಮತ್ತು ರಿಜಿಸ್ಟರ್ ನಿರ್ವಹಿಸದಿರುವುದು ಮತ್ತು ವಾಹನದ ದಾಖಲೆಗಳನ್ನು ಹಾಜರುಪಡಿಸದೇ ಇರುವುದು
6. ಅನುಮೋದಿತ ದರಪಟ್ಟಿಗಿಂತ ಹೆಚ್ಚುವರಿ ಪಾವತಿ ಪ್ರಕರಣಗಳು

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಅಪ 80 ಎಎಆರ್ 2000, ದಿನಾಂಕ:14.05.2001 ರಂತೆ, ಲೆಕ್ಕಪರಿಶೋಧನಾ ಕಂಡಿಕೆಗಳ ಸೂಕ್ತ ಮತ್ತು ಪರಿಣಾಮಕಾರಿ ತೀರುವಳಿಗಾಗಿ, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಡ್‌ಹಾಕ್ ಸಮಿತಿಗಳನ್ನು ರಚಿಸಿದ್ದು, ಸದರಿ ಸಮಿತಿಗಳು ಸಭೆಯನ್ನು

ನಿಯಮಿತವಾಗಿ ನಡೆಸುವುದರ ಮೂಲಕ ಲೆಕ್ಕಪರಿಶೋಧನಾ ವರದಿಗಳಲ್ಲಿನ ಕಂಡಿಕೆಗಳ ತೀರುವಳಿಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಈ ಪ್ರಕ್ರಿಯೆ ಮಾಡುತ್ತಿಲ್ಲದಿರುವುದು ಕಂಡುಬಂದಿದೆ. ಕಾಲಕಾಲಕ್ಕೆ ಗ್ರಾಮ ಸಭೆಗಳನ್ನು ಆಯೋಜಿಸುವುದರ ಮೂಲಕ ಆಯಾ ಗ್ರಾಮದ ಜನತೆಯು ನೇರವಾಗಿ ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳ್ನು ರೂಪಿಸಿ ಅನುಷ್ಠಾನ ಗೊಳಿಸಿಕೊಳ್ಳುವಂತಹ ಮುಕ್ತ ವಾತಾವರಣವನ್ನು ಸಹ ಗ್ರಾಮ ಪಂಚಾಯತಿಗಳು ಕಲ್ಪಿಸಿಕೊಡಬೇಕಾಗಿರುತ್ತದೆ.

ರಾಜ್ಯ ಹಾಗೂ ಕೇಂದ್ರ ಹಣಕಾಸು ಆಯೋಗಗಳ ಶಿಫಾರಸ್ಸಿನ ಮೇರೆಗೆ ನೀಡುವ ಅನುದಾನಗಳನ್ನು ಗ್ರಾಮ ಪಂಚಾಯತಿಗಳು ಸಮರ್ಪಕವಾಗಿ ಸಕಾಲದಲ್ಲಿ ಬಳಸಿಕೊಂಡು ಅನುದಾನ ನೀಡುವಾಗ ನಿಗದಿಪಡಿಸಲಾದ ನಿಬಂಧನೆಗಳನ್ನು ಪಾಲಿಸುವುದರ ಮೂಲಕ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳುವತ್ತ ಹೆಚ್ಚಿನ ನಿಗಾ ವಹಿಸಬೇಕಾಗುತ್ತದೆ. ಬಹುತೇಕ ಗ್ರಾಮ ಪಂಚಾಯತಿಗಳು ಸ್ವಂತ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡದೇ ಸರ್ಕಾರದ ಅನುದಾನದ ಮೇಲೆ

ಅವಲಂಬಿತವಾಗಿರುವುದರಿಂದ ಅಭಿವೃದ್ಧಿ ಕಾರ್ಯ ಕುಂಠಿತವಾಗಿರುತ್ತದೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತಿಗಳು ಕ್ರಿಯಾಶೀಲ ಪಾತ್ರ ವಹಿಸಿ ಅಭಿವೃದ್ಧಿಯ ಗತಿಯನ್ನು ಹೆಚ್ಚಿಸಬೇಕಾಗುತ್ತದೆ.

ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸ್ವಚ್ಛ ಭಾರತ್ ಯೋಜನೆ, ಗ್ರಾಮ ಸ್ವರಾಜ್ ಯೋಜನೆ ಮತ್ತು ರಾಜ್ಯ ಸರ್ಕಾರದ ವಸತಿ ಯೋಜನೆಗಳು ಹಾಗೂ ಇತರೆ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಸರ್ಕಾರದ ಮಾರ್ಗದರ್ಶಿ ಸೂತ್ರಗಳನ್ವಯ ಅನುಷ್ಠಾನಗೊಳಿಸುವುದು ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಪಾರದರ್ಶಕ ನಿಯಮಗಳನ್ನು ಅನುಸರಿಸುವುದು ಇತ್ಯಾದಿ ಕ್ರಮಗಳಿಂದ ಆರ್ಥಿಕ ಶಿಸ್ತನ್ನು ಕಾಪಾಡುವುದರ ಜೊತೆಗೆ ಗಾಮೀಣಾಭಿವೃದ್ಧಿ ಕ್ಷೇತ್ರದ ಉದ್ದೇಶಿತ ಅಭಿವೃದ್ಧಿಯನ್ನು ಸಾಧಿಸಬಹುದಾಗಿರುತ್ತದೆ.

ಲೆಕ್ಕಪರಿಶೋಧನಾ ವರದಿಗಳಲ್ಲಿ ನಮೂದಿಸಲಾದ ನಷ್ಟ/ಕಾನೂನು ಬಾಹಿರ ಪಾವತಿಗಳಿಗೆ ಜವಾಬ್ದಾರರಾದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೇಲೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 246(8)ರನ್ವಯ ಋಣಭಾರ (Surcharge) ಹೊರಿಸುವ ಪ್ರಕ್ರಿಯೆ ಕೈಗೊಂಡಲ್ಲಿ ನಷ್ಟದ ಮೊತ್ತ ವಸೂಲಾಗುವುದರ ಜೊತೆಗೆ ಎಚ್ಚರಿಕೆಯ ಸಂಕೇತ ರವಾನೆಯಾಗಬಹುದು.

ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ, ದಕ್ಷತೆ, ಹಾಗೂ ಪಾರದರ್ಶಕತೆಯನ್ನು ತರುವ ನಿಟ್ಟಿನಲ್ಲಿ ಪಂಚಾಯತಿ ಜಮಾಬಂದಿ ಕಾರ್ಯಕ್ರಮ ಹಾಗೂ ಗ್ರಾಮ ಸಭೆಗಳ ಪಾತ್ರ ಮಹತ್ವದ್ದಾಗಿದ್ದು, ಇವುಗಳು ಕೇವಲ ಯಾಂತ್ರಿಕ ಕಾರ್ಯಕ್ರಮಗಳಾಗದೇ ಗ್ರಾಮ ಪಂಚಾಯತಿಗಳ ಸಮಗ್ರ ಅಭಿವೃದ್ಧಿಗೆ ಪೂರಕವಾಗುವಂತಹ ರಚನಾತ್ಮಕ ಹಾಗೂ ಕ್ರಿಯಾತ್ಮಕ ಸಲಹೆಗಳನ್ನು ನೀಡುವ ಕಾರ್ಯಕ್ರಮಗಳಾಗಬೇಕು. ಇದರಿಂದಾಗಿ ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

ಪ್ರಧಾನ ನಿರ್ದೇಶಕರು(ಪ್ರಭಾರ),
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ.

ಬೆಂಗಳೂರು
ದಿನಾಂಕ:

| ಕಂಡಿಕೆ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| | ಪ್ರಸ್ತಾವನೆ | |
| | ಅಧ್ಯಾಯ 1<br>ಗ್ರಾಮ ಪಂಚಾಯತಿಗಳ ಸ್ಥೂಲ ನೋಟ | |
| 1.1 | ಹಿನ್ನೆಲೆ. | 1 |
| 1.2 | ಗ್ರಾಮಪಂಚಾಯತಿಗಳ ಸಾಂಸ್ಥಿಕ ರಚನೆ. | 2 |
| 1.3 | ಗ್ರಾಮಪಂಚಾಯತಿಗಳ ಸ್ಥಾಯಿ ಸಮಿತಿಗಳ ರಚನೆ. | 2 |
| 1.4 | ಗ್ರಾಮಪಂಚಾಯತಿಗಳ ಆಂತರಿಕ ಹೊಣೆಗಾರಿಕೆಯ ಸ್ಥೂಲ ಪರಿಚಯ. | 3 |
| | ಅಧ್ಯಾಯ–2<br>ಗ್ರಾಮ ಪಂಚಾಯತಿಗಳ ಹಣಕಾಸಿನ ಪರಿಸ್ಥಿತಿ | |
| 2.1 | ಗ್ರಾಮಪಂಚಾಯತಿಗಳಿಗೆ ಹಣಕಾಸಿನ ಹರಿವು. | 4 |
| 2.2 | ಕಳೆದ 3 ವರ್ಷಗಳಲ್ಲಿ ಲೆಕ್ಕಪರಿಶೋಧನೆ ಕೈಗೊಂಡ ಗ್ರಾಮ ಪಂಚಾಯತಿಗಳ ವಿವರಗಳು | 4–5 |
| 2.3 | ಗ್ರಾಮ ಪಂಚಾಯತಿಗಳ ಹಣಕಾಸಿನ ಪರಿಸ್ಥಿತಿ. | 5–6 |
| 2.4 | ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಭರಿಸಲಾದ ವೆಚ್ಚಗಳ ವಿವರಗಳು. | 6–7 |
| 2.5 | ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ ಶಾಸನಬದ್ಧ ಅನುದಾನ/ಸ್ವೀಕೃತಿಯಾದ ರಾಜಸ್ವ | 6–7 |
| 2.6 | ಗ್ರಾಮ ಪಂಚಾಯತಿಗಳು ವಿಧಿಸಿದ ತೆರಿಗೆಗಳ ಬೇಡಿಕೆ, ವಸೂಲಾತಿ ಹಾಗೂ ಬಾಕಿಯ ವಿವರ | 7–8 |
| 2.7 | ಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿರುವುದಿಲ್ಲ. | 8–9 |
| 2.8 | ಗ್ರಾಮ ಪಂಚಾಯತಿಗಳಲ್ಲಿ ಜೋಡಿ ದಾಖಲೆ ಲೆಕ್ಕ ಪದ್ದತಿಯನ್ನು ನಿರ್ವಹಿಸಿರುವುದಿಲ್ಲ. | 9–10 |
| | ಅಧ್ಯಾಯ 3<br>ಲೆಕ್ಕಪರಿಶೋಧನೆಯ ಫಲಿತಾಂಶಗಳು | |
| 3.1 | ಗ್ರಾಮ ಪಂಚಾಯತಿಗಳಲ್ಲಿ 682.29ಲಕ್ಷಗಳ ರಾಜಸ್ವ ಸ್ವೀಕೃತಿಯನ್ನು ಪಂಚಾಯತಿ ನಿಧಿಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಳ್ಳಲಾಗಿದೆ. | 11 |
| 3.1(ಎ) | ಗ್ರಾಮ ಪಂಚಾಯತಿಗಳಲ್ಲಿ ರಾಜಸ್ವ ಸ್ವೀಕೃತಿಯನ್ನು ಪಂಚಾಯತಿ ನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು. | 11–12 |
| 3.2 | ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ/ಸುಂಕ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಗಳ ಮೊಬಲಗು ಮೊತ್ತ ರೂ.439.22 ಲಕ್ಷಗಳನ್ನು ಕಡಿಮೆ ಕಟಾಯಿಸಲಾಗಿದೆ ಹಾಗೂ ಮೊತ್ತ ರೂ.448.25 ಲಕ್ಷಗಳನ್ನು ಕಟಾಯಿಸಿರುವುದಿಲ್ಲ. | 12–13 |
| 3.2(ಎ) | ವಿವಿಧ ಯೋಜನೆಯ ಬಿಲ್ಲುಗಳಲ್ಲಿ ಪಾವತಿಸುವಾಗ ತೆರಿಗೆಗಳನ್ನು ಕಟಾಯಿಸದೆ ಪಾವತಿಸಿರುವುದು/ಕಡಿಮೆ ಕಟಾಯಿಸದೆ ಇರುವ ಪ್ರಕರಣಗಳು. | 13–14 |
| 3.3 | ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ, ಮಾರಾಟ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಗಳ ಮೊಬಲಗು ರೂ.13350.96 ಲಕ್ಷಗಳನ್ನು ಸರ್ಕಾರ/ಮಂಡಳಿಗೆ ಜಮಾ ಮಾಡದೇ ಗ್ರಾಮ ಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಳ್ಳಲಾಗಿದೆ. | 14 |

| | | |
|---|---|---|
| **3.3**(ಎ) | ಕಾಮಗಾರಿ ಬಿಲ್ಲಿನಲ್ಲಿ ಕಟಾಯಿಸಿದ ಆದಾಯ ಕರ, ಮಾರಾಟ ಕರ, ರಾಜಧನ ಮತ್ತು ಕಾರ್ಮಿಕ ಕಲ್ಯಾಣ ನಿಧಿಯನ್ನು ಸರ್ಕಾರಕ್ಕೆ ಜಮಾ ಮಾಡದೇ ಗ್ರಾಮ ಪಂಚಾಯಿತಿ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು. | 15 |
| 3.4 | ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾಗಿರುವ ಮಾರಾಟ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಗಳ ಹಾಗೂ ಕಾರ್ಮಿಕ ಕಲ್ಯಾಣ ನಿದಿಗಳ ಬಾಬ್ತು 48.42ಲಕ್ಷ ಮೊಬಲಗನ್ನು ಸರ್ಕಾರ /ಮಂಡಳಿಗೆ ಜಮಾ ಮಾಡುವ ಸಲುವಾಗಿ ಗ್ರಾಮ ಪಂಚಾಯತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಳ್ಳಲಾಗಿದೆ. | 15–16 |
| **3.4**(ಎ) | ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ತೆರಿಗೆಗಳನ್ನು ಪಾವತಿಸಲು ಡ್ರಾ ಮಾಡಿ ಪೂರ್ತಿಯಾಗಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು. | 16–17 |
| 3.5 | ವಸೂಲಿ ಮಾಡಿದ 45740.05 ಲಕ್ಷಗಳ ಮೊತ್ತದ ಉಪಕರಗಳನ್ನು ಸರ್ಕಾರದ ವಿವಿಧ ಇಲಾಖೆಗಳ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಗ್ರಾಮಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು. | 17 |
| **3.5**(ಎ) | ಮನೆ ಮತ್ತು ಕಂದಾಯಗಳ ಮೇಲೆ ವಸೂಲಿಸಿರುವ ಉಪಕರಗಳನ್ನು ಸರ್ಕಾರಕ್ಕೆ ಜಮಾ ಮಾಡದೆ ಇರುವುದು. | 17–18 |
| 3.6 | ಗ್ರಾಮ ಪಂಚಾಯತಿಗಳಿಂದ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ 9.68 ಲಕ್ಷಗಳಷ್ಟು ಮೊತ್ತದ ಓಚರುಗಳನ್ನು ಹಾಜರುಪಡಿಸಿರುವುದಿಲ್ಲ. | 18–19 |
| 3.7 | ಹಣ ದುರುಪಯೋಗ ಪ್ರಕರಣಗಳೆಂದು ಶಂಕಿಸಿರುವ ಕಂಡಿಕೆಗಳು | 19–20 |
| 3.8 | ಗ್ರಾಮ ಪಂಚಾಯತಿಗಳ ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ನಷ್ಟವಾಗಿರುವ 147 ಮಾನವ ದಿನಗಳು. | 20–21 |
| 3.9 | ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೇ ಬಾಕಿಯಿರುವ ಆಕ್ಷೇಪಣೆ ಮೊತ್ತ ರೂ.469567.83 ಲಕ್ಷಗಳು ಮತ್ತು ವಸೂಲಾತಿ ಮೊತ್ತ ರೂ.39846.51 ಲಕ್ಷಗಳು. | 21–22 |
| 3.10 | ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಗಳನ್ನು ಸಲ್ಲಿಸಿರುವುದಿಲ್ಲ. | 22–23 |
| 3.11 | ಲೆಕ್ಕ ಪರಿಶೋಧನಾ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿರುವುದಿಲ್ಲ. | 23 |
| 3.12 | ಅಡ್‌ಹಾಕ್ ಸಮಿತಿ ಸಭೆಗಳನ್ನು 19 ಜಿಲ್ಲೆಗಳಲ್ಲಿ ನಡೆಸಿರುವುದಿಲ್ಲ. | 24–25 |
| 3.13 | ಪಂಚಾಯತಿ ಜಮಾಬಂಧಿ 1058 ಗ್ರಾಮ ಪಂಚಾಯಿತಿಗಳಲ್ಲಿ ನಡೆಸಿರುವುದಿಲ್ಲ. | 25–27 |
| 3.14 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 (KTPP) ಉಲ್ಲಂಘನೆ ಪ್ರಕರಣಗಳಲ್ಲಿ ಆಕ್ಷೇಪಿತ ಮೊತ್ತ ರೂ2420.56 ಲಕ್ಷ ಹಾಗೂ ವಸೂಲಾತಿಗೆ ಸೂಚಿಸಿದ ಮೊತ್ತ ರೂ. 11.32ಲಕ್ಷ. | 27–28 |
| 3.15 | ಸ್ವಂತಕ್ಕೆ ಚೆಕ್‌ನ ಮೇಲೆ ಹಣ ಡ್ರಾ ಮಾಡಿರುವ ಪ್ರಕರಣಗಳಲ್ಲಿ ಆಕ್ಷೇಪಿತ ಮೊತ್ತ ರೂ.30.43 ಲಕ್ಷ ಹಾಗೂ ವಸೂಲಾತಿಗೆ ಸೂಚಿಸಿದ ಮೊತ್ತ ರೂ.13.14 ಲಕ್ಷ. | 28–29 |
| 3.16 | ತಾಂತ್ರಿಕ ಮಂಜೂರಾತಿ ಪಡೆಯದೆ ಕಾಮಗಾರಿ ನಿರ್ವಹಿಸಿರುವುದು ಒಟ್ಟು ಮೊತ್ತ ರೂ.46.82 ಲಕ್ಷಗಳು. | 29 |
| 3.17 | ನಿಯಮ ಬಾಹಿರ ವೆಚ್ಚ ಭರಿಸಿರುವುದು | 29–30 |
| 3.18 | ಕಾಮಗಾರಿಗಳ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸದೆ ಮತ್ತು ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡೆಸದೇ ಇರುವ ಪ್ರಕರಣಗಳ ಮೊತ್ತ ರೂ.35.27ಲಕ್ಷಗಳು. | 30–31 |

| | | |
|---|---|---|
| 3.19 | ಕಾಮಗಾರಿ ಅಳತೆಗಳನ್ನು ಇಲಾಖೆಯ ಅಭಿಯಂತರರಿಂದ ಪರಿಶೀಲನೆ ಮಾಡಿಸದೇ ಇರುವ (**Check Measurement**) ಮೊತ್ತ ರೂ 202.04ಲಕ್ಷಗಳು. | 31–32 |
| 3.20 | ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಳ್ಳದೇ ಸಾಮಗ್ರಿ/ಇತರೆ ಬಿಲ್ಲಿನ ಮೊತ್ತ ಪಾವತಿಸಿರುವುದು. | 32 |
| 3.21 | ಮೋಟಾರ್ ರೀವೈಂಡಿಂಗ್ ಕಾಮಗಾರಿಯಲ್ಲಿ ಹಳೇ ಸಾಮಗ್ರಿ ಮೌಲ್ಯ ಶೇ.10ರಷ್ಟನ್ನು ಬಿಲ್ಲುಗಳಲ್ಲಿ ಕಡಿತ ಮಾಡದೇ ಇರುವುದು. | 32–33 |
| 3.22 | ಸಾಮಗ್ರಿಗಳನ್ನು ಖರೀದಿಸಿ ದಾಸ್ತಾನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದು. | 33–34 |
| 3.23 | ಗ್ರಾಮಪಂಚಾಯಿತಿಯ ವಿವಿಧ ಯೋಜನೆ/ನಿಧಿಗಳಿಂದ ಮುಂಗಡಗಳನ್ನು ಪಡೆದು ಹಣ ಹೊಂದಾಣಿಕೆ ಮಾಡದೇ ಇರುವುದು. | 34 |
| 3.24 | ಗ್ರಾಮ ಪಂಚಾಯಿತಿಗಳಿಂದ ನೀಡಲಾದ ಮಳಿಗೆಗಳಿಗೆ ಬಾಡಿಗೆ ವಸೂಲಿ ಮಾಡದಿರುವುದು. | 34–35 |
| 3.25 | ಹರಾಜು ಪ್ರಕರಣಗಳಲ್ಲಿ ಆಕ್ಷೇಪಣೆ ಮೊತ್ತ ರೂ.2.08ಲಕ್ಷಗಳು ಹಾಗೂ ವಸೂಲಾತಿ ಮೊತ್ತ ರೂ.50.49ಲಕ್ಷಗಳು ವಸೂಲಿಯಾಗದಿರುವುದು. | 35 |
| 3.26 | ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೆಚ್ಚವು ಗ್ರಾಮ ಪಂಚಾಯತಿಗಳ ವಾರ್ಷಿಕ ಆದಾಯದ ಶೇ.40ನ್ನು ಮೀರಿರುವುದು | 36 |
| 3.27 | ಗುತ್ತಿಗೆದಾರರು, ಸರಬರಾಜುದಾರರು ಮತ್ತು ಇತರರ ಹೆಸರಿಗೆ ನೀಡಬೇಕಾಗಿರುವ ಬಿಲ್ಲು ಪಾವತಿಯ ಬಾಬ್ತನ್ನು ಗ್ರಾಮಪಂಚಾಯಿತಿ ಸಿಬ್ಬಂದಿಯ ಹೆಸರಿಗೆ ಧನಾದೇಶವನ್ನು (ಚೆಕ್) ಬರೆದು ಸಂದಾಯ ಮಾಡಿರುವುದು. | 36–37 |
| 3.28 | ಗ್ರಾಮಪಂಚಾಯಿತಿಯ ಸಿಬ್ಬಂದಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳ ಆಕ್ಷೇಪಣೆ ಮೊತ್ತ ರೂ.63.44/–ಲಕ್ಷಗಳು. | 37 |
| 3.29 | ವೇತನ ಖಾತೆಯಲ್ಲಿ ಸಿಬ್ಬಂದಿಗೆ ಹೆಚ್ಚುವರಿ ಪಾವತಿ ಮತ್ತು ಗ್ರಾಮ ಪಂಚಾಯತಿ ಗೌರವಧನಹೆಚ್ಚಿಗೆ ಪಾವತಿ ಪ್ರಕರಣಗಳು. | 37–38 |
| 3.30 | ಅಧಿಕಾರ ವ್ಯಾಪ್ತಿಗಿಂತ ಹೆಚ್ಚುವರಿ ವಕೀಲರ ಶುಲ್ಕ ಪಾವತಿಸಿರುವುದು | 38 |
| | ಅಧ್ಯಾಯ–4<br>ಗ್ರಾಮ ಪಂಚಾಯತಿಗಳಿಂದ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ | |
| 4.1 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪಡೆದ ಅನುದಾನದಲ್ಲಿ ಬಳಕೆಯಾಗದೇ ಉಳಿದಿರುವ ಮೊತ್ತ ರೂ.17967.62ಲಕ್ಷಗಳು ಹಾಗೂ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳ ಮೊತ್ತ ರೂ.3372.45ಲಕ್ಷಗಳು. | 39–41 |
| 4.2 | ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ಲೋಪಗಳು. | 41–44 |
| 4.3 | ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆ ಬಿಲ್ ಪಾವತಿಸುವಾಗ ಒಂದೇ ಕಾಮಗಾರಿಗಳಿಗೆ ಎರಡು ಬಾರಿ ಪಾವತಿಸಿ ಹಣ ದುರುಪಯೋಗಪಡಿಸಿಕೊಂಡಿರುವುದು. | 44–45 |
| 4.4 | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (**NREGA**) ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಕೂಲಿದರಕ್ಕಿಂತ ರೂ.6.68ಲಕ್ಷಗಳು ಹೆಚ್ಚಿಗೆ ಕೂಲಿ ದರ ಪಾವತಿಸಿರುವುದು. | 45 |
| 4.5 | 13 ಮತ್ತು 14ನೇ ಹಣಕಾಸು ಆಯೋಗದ ಯೋಜನೆಯಡಿ ಬಳಕೆಯಾಗದೇ ಉಳಿದಿರುವ ಮೊತ್ತ ರೂ.74959.00ಲಕ್ಷಗಳು. ಹಾಗೂ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳ ಮೊತ್ತ ರೂ.3498.42ಲಕ್ಷಗಳು. | 46–47 |

| | | |
|---|---|---|
| 4.6 | ವಿವಿಧ ಯೋಜನೆಗಳ ಕೆಲವು ಕಾಮಗಾರಿಗಳಿಗೆ ಅನುಮೋದಿತ ಅಂದಾಜು ಪಟ್ಟಿ ಇಲ್ಲದೆ ಹಣ ಪಾವತಿ ಮಾಡಿರುವುದು. | 47–48 |
| 4.7 | ಕಾಮಗಾರಿಗಳ ವಿವರವನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸದಿರುವುದು, ಕ್ರಿಯಾ ಯೋಜನೆಗೆ ಸಕ್ಷಮ ಪ್ರಾಧಿಕಾರದ ಅನುಮೊದನೆ ಪಡೆಯದೆ ಮಾಡಿರುವ ವೆಚ್ಚ ರೂ. 21.04ಲಕ್ಷಗಳು. | 48 |
| 4.8 | ವಿವಿಧ ಯೋಜನೆಗಳ ಕಾಮಗಾರಿ ಬಿಲ್ಲುಗಳಲ್ಲಿ ಪಾವತಿಸಿರುವ ಅಧಿಕ ಮೊತ್ತ ರೂ. **16.47**ಲಕ್ಷಗಳು. | 49 |
| 4.9 | ವಿವಿಧ ಕಾಮಗಾರಿ/ಸಾಮಗ್ರಿ/ ಇತರೆ ಪಾವತಿಗಳಲ್ಲಿ ಕಂಡು ಬಂದ ನ್ಯೂನ್ಯತೆಗಳು | 49–50 |
| 4.10 | ವಿವಿಧ ಯೋಜನೆಗಳಡಿ ಮಂಜೂರಾದ ಅನುದಾನವನ್ನು ಬಳಕೆ ಮಾಡದೆಯಿರುವುದು/ಭಾಗಶಃ ಬಳಕೆ ಮಾಡಿರುವ ಪ್ರಕರಣಗಳು | 50 |
| 4.11 | ಕಾಮಗಾರಿಗಳ ಅಳತೆಯನ್ನು ಅಳತೆ ಪುಸ್ತಕದಲ್ಲಿ ನಮೂದಿಸಿದ್ದು ಸಂಬಂಧಪಟ್ಟ ಇಂಜಿನಿಯರ್ ಸಹಿ ಮತ್ತು ಹೆಸರನ್ನು ನಮೂದಿಸದೆ ಇರುವ ಪ್ರಕರಣಗಳ ಆಕ್ಷೇಪಣೆ ಮೊತ್ತ ರೂ.8.32ಲಕ್ಷಗಳು. | 51 |
| 4.12 | ಗ್ರಾಮ ಸ್ವರಾಜ್ ಯೋಜನೆಯಡಿ 2016–17ನೇ ಸಾಲಿನ ಅಂತ್ಯಕ್ಕೆ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳ ಮೊತ್ತ ರೂ. 1.72ಲಕ್ಷಗಳು. | 51 |
| 4.13 | ಕಾಮಗಾರಿಗಳ ವಸತಿ ಮತ್ತು ಇತರ ಯೋಜನೆಗಳಲ್ಲಿ ಗ್ರಾಮಪಂಚಾಯತಿಗಳಿಂದ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದ ರೂ.17980.74ಲಕ್ಷಗಳ ಮೊತ್ತದ ದಾಖಲೆಗಳು ಹಾಗೂ ಓಚರ್ಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. | 51–52 |
| 4.14 | ಅನುದಾನ ಮಾರ್ಗಪಲ್ಲಟ ಮಾಡಿರುವ ಪ್ರಕರಣಗಳಲ್ಲಿ ಆಕ್ಷೇಪಿತ ಮೊತ್ತ ರೂ. 88.18ಲಕ್ಷಗಳು ಹಾಗೂ ವಸೂಲಾತಿಗೆ ಸೂಚಿಸದ ಮೊತ್ತ ರೂ. 1.78 ಲಕ್ಷಗಳು. | 52–53 |
| 4.15 | ಅನುಮೋದಿತ ಟೆಂಡರ್ ಷೆಡ್ಯೂಲ್ 'ಬಿ' ಪರಿಮಾಣ ಕ್ಕಿಂತ ಹೆಚ್ಚಿನ ಪರಿಮಾಣಕ್ಕೆ ಬಿಲ್ ಪಾವತಿಸಿರುವುದು ಮತ್ತು ಮಂಜೂರಾದ ಅಂದಾಜು ಪತ್ರಿಕೆ ಮೊತ್ತಕ್ಕಿಂತ ಹೆಚ್ಚಿಗೆ ಪಾವತಿಸಿರುವುದು | 53 |
| 4.16 | ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಹಣ ಸಂದಾಯ ಮಾಡಿರುವ ಪ್ರಕರಣಗಳ ಆಕ್ಷೇಪಣೆ ಮೊತ್ತ ರೂ. 29.53 ಲಕ್ಷಗಳು ಹಾಗೂ ವಸೂಲಾತಿ ಮೊತ್ತ ರೂ.14.33 ಲಕ್ಷಗಳು. | 53–54 |
| 4.17 | ಬೀದಿ ದೀಪ ನಿರ್ವಹಣೆ ಹಾಗೂ ಇತರೆ ದುರಸ್ತಿ ಮತ್ತು ನ್ಯೂನ್ಯತೆಗಳು | 54 |
| 4.18 | ಸಾಮಾನ್ಯ ಅಭಿಪ್ರಾಯ | 54–56 |

## ಅನುಬಂಧಗಳ ವಿವರಗಳು



| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1 | **2016-17ನೇ ಸಾಲಿನಂತ್ಯಕ್ಕೆ ಲೆಕ್ಕಪರಿಶೋಧನೆ ಕೈಗೊಳ್ಳಬೇಕಾಗಿರುವ, ಪೂರ್ಣಗೊಂಡಿರುವ, ಲೆಕ್ಕಪರಿಶೋಧನೆ ಬಾಕಿ ಇರುವ ಹಾಗೂ 2016-17ನೇ ಸಾಲಿನ ಲೆಕ್ಕಪರಿಶೋಧನೆಯಾಗಿ ಅಳವಡಿಕೆಯಾಗಿದ್ದರೂ ಹಿಂದಿನ ಸಾಲುಗಳಲ್ಲಿ ಲೆಕ್ಕಪರಿಶೋಧನೆ ಬಾಕಿ ಇರುವ ಗ್ರಾಮಪಂಚಾಯಿತಿಗಳ ಜಿಲ್ಲಾವಾರು ವಿವರ** | **57** |
| 2 | **2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳ ಆರ್ಥಿಕ ವಹಿವಾಟಿನ ಜಿಲ್ಲಾವಾರು ವಿವರಗಳು.** | **58** |
| 3 | **2016-17 ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳು ಪಡೆದ ಸರ್ಕಾರದ ಅನುದಾನ ಮತ್ತು ಇತರೆ ಮೂಲಗಳಿಂದ ಸ್ವೀಕೃತಗೊಂಡ ಮೊತ್ತದ ಜಿಲ್ಲಾವಾರು ವಿವರಗಳು.** | **59-61** |
| 4 | **2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳಿಂದ ಭರಿಸಲಾದ ಯೋಜನಾವಾರು ವೆಚ್ಚಗಳ ಜಿಲ್ಲಾವಾರು ವಿವರಗಳು.** | **62-63** |
| 7 | **2016-17 ನೇ ಸಾಲಿನಂತ್ಯಕ್ಕೆ ಗ್ರಾಮ ಪಂಚಾಯತಿಗಳು ವಿಧಿಸಿದ ತೆರಿಗೆಗಳ ಬೇಡಿಕೆ, ವಸೂಲಿ ಮತ್ತು ಬಾಕಿಯಿರುವ ಜಿಲ್ಲಾವಾರು ವಿವರಗಳು** | **64-65** |
| 8 | **2016-17ನೇ ಸಾಲಿನಲ್ಲಿ ಜೋಡಿ ನಮೂದು ಲೆಕ್ಕಪತ್ರ ಪದ್ಧತಿಯನ್ನು ಅಳವಡಿಸಿರುವ ಹಾಗೂ ಅಳವಡಿಸದೇ ಇರುವ ಗ್ರಾಮಪಂಚಾಯಿತಿಗಳ ಜಿಲ್ಲಾವಾರು ವಿವರಗಳು.** | **66** |
| 9 | **2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳಲ್ಲಿ ರಾಜಸ್ವ ಸ್ವೀಕೃತಿಯನ್ನು ವಸೂಲಿಸಿ ಗ್ರಾಮ ಪಂಚಾಯತಿ ನಿಧಿಗೆ ಜಮಾ ಮಾಡದೆ ದುರುಪಯೋಗ ಪಡಿಸಿಕೊಂಡಿರುವ ಗ್ರಾಮಪಂಚಾಯಿತಿಗಳ ಜಿಲ್ಲಾವಾರು ವಿವರಗಳು.** | **67** |
| 10 | **2016-17 ನೇ ಸಾಲಿನಲ್ಲಿ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಬೇಕಾದ ತೆರಿಗೆ ಇತ್ಯಾದಿ ಕಡಿಮೆ ಕಟಾಯಿಸಿರುವ / ಕಟಾಯಿಸದೇ ಇರುವ ಗ್ರಾಮ ಪಂಚಾಯತಿಗಳ ಜಿಲ್ಲಾವಾರು ವಿವರಗಳು** | **68** |
| 11 | **2016-17 ನೇ ಸಾಲಿನಲ್ಲಿ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ತೆರಿಗೆ ಇತ್ಯಾದಿಗಳನ್ನು ಗ್ರಾಮ ಪಂಚಾಯತಿ ನಿಧಿಯಲ್ಲಿಯೇ ಉಳಿಸಿಕೊಂಡಿರುವ / ಗ್ರಾಮ ಪಂಚಾಯತಿ ನಿಧಿಯಿಂದ ಸೆಳೆದು ಸರ್ಕಾರಕ್ಕೆ ಜಮಾ ಮಾಡದೇ ದುರುಪಯೋಗಪಡಿಸಿಕೊಂಡಿರುವ ಜಿಲ್ಲಾವಾರು ವಿವರಗಳು** | **69** |
| 11 | **2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳು ಸರ್ಕಾರದ ಪರವಾಗಿ ವಸೂಲಿ ಮಾಡಿದ ಉಪ ಕರಗಳನ್ನು ಸರ್ಕಾರದ ವಿವಿಧ ಇಲಾಖೆಗಳ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದಿರುವ ಗ್ರಾಮ ಪಂಚಾಯತಿಗಳ ಜಿಲ್ಲಾವಾರು ವಿವರಗಳು.** | **69** |
| 12 | **2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳು ಸರ್ಕಾರದ ಪರವಾಗಿ ವಸೂಲಿ ಮಾಡಿದ ಉಪಕರಗಳನ್ನು ಸರ್ಕಾರದ ವಿವಿಧ ಇಲಾಖೆಗಳ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದಿರುವ, ದುರುಪಯೋಗ ಮಾಡಿಕೊಂಡಿರುವ ಗ್ರಾಮ ಪಂಚಾಯತಿವಾರು ವಿವರಗಳು** | **70-71** |
| 14 | **2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ನಷ್ಟವಾಗಿರುವ ಮಾನವ ದಿನಗಳ ಗ್ರಾಮ ಪಂಚಾಯತಿವಾರು ವಿವರ** | **72** |

| | | |
|---|---|---|
| 15 | 2016–17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಸೂಚಿಸಲ್ಪಟ್ಟಿರುವ ಆಕ್ಷೇಪಣೆ, ತೀರುವಳಿ ಹಾಗೂ ಬಾಕಿಗಳ ಗ್ರಾಮ ಪಂಚಾಯತಿಗಳ ಜಿಲ್ಲಾವಾರು ವಿವರಗಳು. | 73–74 |
| 17 | 2016–17ನೇ ಸಾಲಿನಲ್ಲಿ ಅಡ್‌ಹಾಕ್ ಸಮಿತಿ ಸಭೆಗಳಲ್ಲಿ ತೀರುವಳಿಯಾದ ಆಕ್ಷೇಪಣೆ ಮತ್ತು ವಸೂಲಾತಿಗಳ ಜಿಲ್ಲಾವಾರು ವಿವರಗಳು. | 75 |
| 18 | ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು 2004ರನ್ವಯ 2016–17ನೇ ಸಾಲಿನಲ್ಲಿ ಜಮಾಬಂದಿ ನಡೆಸಲಾದ ಗ್ರಾಮ ಪಂಚಾಯತಿಗಳ ಜಿಲ್ಲಾವಾರು ವಿವರಗಳು | 76 |
| 16 | 2016–17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೆಚ್ಚವು ಗ್ರಾಮ ಪಂಚಾಯತಿಗಳ ವಾರ್ಷಿಕ ಆದಾಯದ 40% ಮೀರಿರುವ ಜಿಲ್ಲಾವಾರು ವಿವರಗಳು. | 77 |
| 6 | 2016–17ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ, ವೆಚ್ಚ ಮತ್ತು ಬಾಕಿಯ ಗ್ರಾಮಪಂಚಾಯತಿಗಳ ಜಿಲ್ಲಾವಾರು ವಿವರಗಳು | 78 |
| 5 | 2016–17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳು 13ನೇ ಹಣಕಾಸು ಯೋಜನೆಯಡಿ ಪಡೆದ ಅನುದಾನ, ಭರಿಸಿದ ವೆಚ್ಚ ಹಾಗೂ ಬಳಕೆಯಾಗದೇ ಉಳಿದಿರುವ ಮೊತ್ತದ ಗ್ರಾಮ ಪಂಚಾಯತಿವಾರು ವಿವರಗಳು. | 79 |